ಕರ್ಮವೀರ

ಜನಪ್ರಿಯ ಸಚಿತ್ರ ವಾರಪತ್ರಿಕೆ - ಹುಬ್ಬಳ್ಳಿ.

೧ - ೮ - ೪೯



ಬೆಲೆ ಎರಡಾಣೆ



ಮುಂಬಯಿಯ ಭಾರತದ ಮಹಾದ್ವಾರ

Karmaveer. KANNADA ILLUSTRATED WEEKLY, HUBLI

ಮುಖಪತ್ರಿಕೆಯಲ್ಲಿ

"ಮುಂಬಯಿಯ ಮಹಾದ್ವಾರ"ಕ್ಕೆ ಒಂದು ಐತಿಹಾಸಿಕ ಮಹತ್ವವಿದೆ. ೧೯೧೧ ರಲ್ಲಿ ಐದನೆ ಜಾರ್ಜ ಚಕ್ರವರ್ತಿ ತನಗೆ ಪಟ್ಟಾಭಿಷೇಕವಾದಾಗ ಭಾರತಕ್ಕೆ ಬಂದಿಳಿದಾಗ ಮೊದಲು ಹೆಜ್ಜೆಯಿಟ್ಟ ಸ್ಥಳದಲ್ಲಿ ಈ ಮಹಾದ್ವಾರವನ್ನು ಕಟ್ಟಲಾಯಿತು. ಜಾರ್ಜ ಚಕ್ರವರ್ತಿಗೆ ಮುಂಬಯಿಯಲ್ಲಿ ಆ ದಿನ ಎಂಥ ಸ್ವಾಗತ ಸಿಕ್ಕಿತೆಂಬುದೂ ಸ್ಮರಣೀಯವಾಗಿದೆ. ದೇಶದಲ್ಲಿ ಸ್ವಾಮಿಬಾಧೆಯಿರುವ ಕಾಲದಲ್ಲಿ ಚಕ್ರವರ್ತಿಯ ದರ್ಬಾರು ನಡೆಯಕೂಡದೆಂದು ರಾಷ್ಟ್ರೀಯ ವೃತ್ತಿಯ ಮುಂಬಯಿ ನಾಗರಿಕ ಮತವನ್ನು ಗಣಿಸದೆ ದಿಲ್ಲಿಯಲ್ಲಿ ದರ್ಬಾರು ನಡೆಸಬಂದ ಚಕ್ರವರ್ತಿಗೆ ಬುದ್ಧಿಗಲಿಸಲು ಮುಂಬಯಿ ನಗರ ಸಭೆ ಇಡಿ ನಗರವನ್ನು ಅಂದು ಬೀದಿ ದೀಪಗಳನ್ನಾರಿಸುವ ಮೂಲಕ ಕತ್ತಲಲ್ಲಿರಿಸಿತು. ಜನಾಭಿಪ್ರಾಯಕ್ಕೆ ಬೆಲೆ ಕೊಡದ ಸರಕಾರಿ ಸ್ವೇಚ್ಛಾಚಾರದ ದಿನಗಳು ಅಂದಿನಿಂದ ೩೬ ವರ್ಷಗಳಲ್ಲಿ ಪೂರ್ಣ ಕಳೆದು ಹೋದವು. ೧೯೪೭ ರಲ್ಲಿ ಭಾರತಕ್ಕೆ ಸ್ವಾತಂತ್ರ್ಯವಿತ್ತ ಅನಂತರ ಬ್ರಿಟಿಶರ ಸೇನೆ ಇದೇ ದ್ವಾರದಿಂದ ಹೊರಬಿದ್ದು ಹೋದುದು ಭಾಗ್ಯಪರಿವರ್ತನೆಯ ಅಪೂರ್ವ ಉದಾಹರಣೆಯಾಗಿದೆ.

★

ಕರ್ಮವೀರ

ಪ್ರತಿ ಸೋಮವಾರ ಹುಬ್ಬಳ್ಳಿಯಿಂದ ಹೊರಡುವ ವಾರಪತ್ರಿಕೆ

ಸಂಸ್ಥಾಪಕರು :
ಶ್ರೀ. ರಂ. ರಾ. ದಿವಾಕರ

ಸಂಪಾದಕರು :
ಶ್ರೀ. ಹ. ರಾ. ಪುರೋಹಿತ

ಹೊಸ ವರ್ಗಣಿ ವಿವರಗಳು :

೧ ವರ್ಷಕ್ಕೆ	ರೂ. ೬—೧೨—೦
೬ ತಿಂಗಳಿಗೆ	ರೂ. ೩—೮—೦
೩ ,,	ರೂ. ೨—೦—೦

ಬಿಡಿಸಂಚಿಕೆ : ೨ ಆಣೆ

ವ್ಹಿ. ಪಿ. ದ್ವಾರಾ ಕಳಿಸಿದರೆ ೦—೭—೦ ಹೆಚ್ಚು ಬೀಳುವದು.

ಸೂಚನೆ : ಈ ವರೆಗೆ ವರ್ಷಕ್ಕೆ ೪ ವಾರ ರಜೆ ತೆಗೆದುಕೊಳ್ಳುವ ಪರಿಪಾಠವಿತ್ತು. ಓದುಗರಿಗೆ ಇದರಿಂದ ತೊಂದರೆಯಾಗುವದನ್ನರಿತು ಇನ್ನು ಮುಂದೆ ರಜೆಗಳನ್ನು ರದ್ದುಗೊಳಿಸಿ ವರ್ಷದಲ್ಲಿ ೫೨ ಸಂಚಿಕೆಗಳನ್ನು ತೆಗೆಯಲಾಗುವದು. ವಿಶೇಷ ಸಂಚಿಕೆಗಳನ್ನು ಹೊರಡಿಸಿದರೆ ಅದರ ಬಗ್ಗೆ ಪ್ರತ್ಯೇಕ ಬೆಲೆಯನ್ನು ಕೊಡಬೇಕಾಗುವದು.

ಚಂದಾದಾರರು : ತಮ್ಮ ವರ್ಗಣಿ, ಸಂಚಿಕೆಗಳ ತಲುಪುವಿಕೆಯ ಸಂಬಂಧದ ದೂರು ಮೊದಲಾದವುಗಳ ಬಗ್ಗೆ ಪತ್ರವ್ಯವಹಾರವನ್ನು ಮಾಡುವಾಗ ವಿಳಾಸದ ಚೀಟಿಯ ಮೇಲಿರುವ ಚಂದಾ ನಂಬರುಗಳನ್ನು ಉಲ್ಲೇಖಿಸಬೇಕು. ಅಲ್ಲದಿದ್ದರೆ ಸಾವಿರಗಟ್ಟಳೆ ಚಂದಾದಾರರಲ್ಲಿ ನಿಮ್ಮ ಹೆಸರನ್ನು ಕಂಡು ಹಿಡಿಯುವದು ಸಾಧ್ಯವಾಗದು.

ಲೇಖಕರು: "ಕರ್ಮವೀರ" ದಲ್ಲಿ ಪ್ರಕಟನೆಗಾಗಿ ಕಳಿಸುವ ಲೇಖ, ಕತೆ, ಕವಿತೆ ಮೊದಲಾದವುಗಳು ಅಸ್ವೀಕೃತವಾದಲ್ಲಿ ತಿರುಗಿ ಪಡೆಯಲಪೇಕ್ಷಿಸುತಿದ್ದರೆ ಲೇಖದ ಸಂಗಡಲೇ ಅವಶ್ಯವಿದ್ದಷ್ಟು ಅಂಚೆ ತಿಕೀಟುಗಳನ್ನು ಕಳಿಸಿರಬೇಕು. ಹಾಗೆ ಮಾಡದೆ ಮುಂದೆ ಆ ಲೇಖಗಳ ಬಗ್ಗೆ ಪತ್ರವ್ಯವಹಾರ ಮಾಡಿದರೆ ಅಥವಾ ತಿರುಗಿ ಕಳಿಸಬೇಕೆಂದರೆ ಅದು ಸಾಧ್ಯವಾಗದು. ಸ್ವೀಕೃತವಾದ ಕತೆಗಳಿಗೂ ಪುರಸ್ಕಾರದ, ಅಂದರೆ "ಕರ್ಮವೀರ"ದ ಎರಡು ಕಾಲಂ ಮೀರಿದ ಲೇಖಗಳಿಗೂ ನಿರ್ದಿಷ್ಟ ಪ್ರತಿಫಲ ಕೊಡಲಾಗುವದು.

— ವ್ಯವಸ್ಥಾಪಕ,
"ಕರ್ಮವೀರ" ಹುಬ್ಬಳ್ಳಿ.

ಸಂಪುಟ ೨೧ | **ಕರ್ಮವೀರ** | ಸೋಮವಾರ
ಸಂಚಿಕೆ ೧೬ | ಶ್ರಾವಣ ಶು. ೬

ತಾರೀಕು ೧—೮—೧೯೪೯

ಕಾಶ್ಮೀರ ಪ್ರಶ್ನೆ

ಕಾಶ್ಮೀರದ ಬಗ್ಗೆ ಹಿಂದುಸ್ಥಾನ ಮತ್ತು ಪಾಕಿಸ್ತಾನ ಸರಕಾರಗಳಲ್ಲಿ ಒಡಂಬಡಿಕೆಯಾಗದ್ದರಿಂದ ಆ ಪ್ರಶ್ನೆಯನ್ನು ಯುಕ್ತ ರಾಷ್ಟ್ರ ಸಂಘಕ್ಕೆ ಒಪ್ಪಿಸಲಾಯಿತು. ಯುಕ್ತ ರಾಷ್ಟ್ರ ಸಂಘದವರು ಕಾಶ್ಮೀರ ಸಮಿತಿಯನ್ನು ನೇಮಿಸಿ ಈ ಪ್ರಶ್ನೆಯ ಇತ್ಯರ್ಥ ಮಾಡಬೇಕೆಂದು ಒಗೆದರು. ಆದರೆ ಮೊದಲಿನಿಂದಲೂ ಪಾಕಿಸ್ತಾನದ ಕಡೆಗೆ ಒಲವಿದ್ದ ಯುಕ್ತ ರಾಷ್ಟ್ರಸಂಘ ಮತ್ತು ಕಾಶ್ಮೀರ ಸಮಿತಿಯು ನಿಷ್ಪಕ್ಷಪಾತವಾಗಿ ಈ ಸಮಸ್ಯೆಯನ್ನು ಬಿಡಿಸುವುದೆಂತು? ಅಂತೆಯೇ ಇದು ಇಷ್ಟೊಂದು ನೆನಗುದಿಗೆ ಬೀಳಹತ್ತಿದೆ. ಇದೇ ಜನೆವರಿಯಲ್ಲಿ ಯುದ್ಧ ನಿಲ್ಲಿಸಲ್ಪಟ್ಟಾಗ ಕೆಲವೊಂದು ಕರಾರುಗಳನ್ನು ಹಾಕಲಾಗಿತ್ತು. ಅವುಗಳಲ್ಲಿ ಗುಡ್ಡಗಾಡಿನ ಪಠಾಣರು, ಪಾಕಿಸ್ತಾನ ಸೈನಿಕರು ಮೊದಲಾದವರು ಕಾಶ್ಮೀರ ಗಡಿ ದಾಟಿ ಹೋಗಬೇಕು ಮತ್ತು ಅಝಾದ ಕಾಶ್ಮೀರ ಸೈನ್ಯವನ್ನು ವಿಸರ್ಜಿಸಬೇಕು ಎಂಬವು ಮುಖ್ಯವಾಗಿದ್ದವು. ಆದರೆ ಈ ವರೆಗೆ ಕಾಶ್ಮೀರ ಸಮಿತಿಯವರು ಈ ಬಗ್ಗೆ ಪಾಕಿಸ್ತಾನ ಸರಕಾರದ ಮೇಲೆ ಯಾವದೇ ಬಗೆಯ ಒತ್ತಾಯವನ್ನು ತರಲಿಲ್ಲ; ಇಷ್ಟೇ ಅಲ್ಲ, ಕಾಶ್ಮೀರಗಡಿಯಲ್ಲಿ ಉಳಿಯಲು ತನಗೆ ಹಕ್ಕು ಇದೆ ಎಂಬ ಪಾಕಿಸ್ತಾನದ ಪ್ರತಿಪಾದನೆಗೆ ಪ್ರತ್ಯಕ್ಷ ಅಪ್ರತ್ಯಕ್ಷ ರೀತಿಯಿಂದ ಒಪ್ಪಿಗೆ ಕೊಟ್ಟರು. ಹೀಗೆ ಪಕ್ಷಪಾತ ಧೋರಣವನ್ನು ವಹಿಸುತಿರುವುದರಿಂದ ಉದ್ದೇಶವು ಸಾಧ್ಯವಾಗಲೊಲ್ಲದು; ಕಾಶ್ಮೀರ ಉಪಸಮಿತಿಗೆ ಯಶಸ್ಸು ದೊರೆಯಲೊಲ್ಲದು.

ಹೀಗಿದ್ದರೂ ಮೊನ್ನೆ ಮೊನ್ನೆ ಹಿಂದುಸ್ಥಾನ ಮತ್ತು ಪಾಕಿಸ್ತಾನ ಸರಕಾರಗಳಲ್ಲಿ ಶಾಂತಿಕಾಲದ ಗಡಿ ರೇಷೆಯ ಸಂಬಂಧದಲ್ಲಿ ಒಡಂಬಡಿಕೆಯಾದುದು ಸಮಿತಿಯು ವಹಿಸಿಕೊಂಡ ಕಾರ್ಯದಲ್ಲಿ ಒಂದು ಹೆಜ್ಜೆ ಮುಂದೆ ಇಟ್ಟಂತೆಯೆ ಸೈ. ಆದರೆ ಇದೇನು ಅಷ್ಟು ಮಹತ್ವದ ಲಾಭವಲ್ಲೆಂಬುದನ್ನು ಯಾರೂ ಮರೆಯಲಾಗದು ಇಷ್ಟು ದೂರದ ವರೆಗೆ ಬಂದು ವಿಶಿಷ್ಟ ಕಾರ್ಯದಲ್ಲಿ ಯಾವದೇ ಬಗೆಯ ಯಶಸ್ಸನ್ನು ಸಂಪಾದಿಸಲಿಲ್ಲ ಎಂಬ ಅಪಕೀರ್ತಿಯನ್ನು ಹೊರಬಾರದೆಂದು ಇದೇನೋ ತೋರಿಕೆಯ ಒಡಂಬಡಿಕೆಯನ್ನು ಅವರು ಮಾಡಿಸಿರುವರು. ಸಮಿತಿಯ ಅಧ್ಯಕ್ಷರಾದ ಹರ್ನಾಂಡೋ ಇವರು ಈ ಒಡಂಬಡಿಕೆಯ ಸಂಬಂಧದಲ್ಲಿ ಈ ಬಗೆಯ ಆಶೆಯನ್ನು ಒಂದು ಸಂದರ್ಶನದಲ್ಲಿ ವ್ಯಕ್ತಪಡಿಸಿರುವರು. ಕಾಶ್ಮೀರದಲ್ಲಿ ಶಾಂತಿಯನ್ನು ಪ್ರಸ್ಥಾಪಿಸುವದೇ ಉಭಯ ಸರಕಾರಗಳ ಉದ್ದೇಶವಾಗಿರುವದೆಂದು ಇಂದಿನ ಒಡಂಬಡಿಕೆಯಿಂದ ಸ್ಪಷ್ಟವಾಗುತ್ತದೆ. ಒಪ್ಪಂದವು ಅತಿ ಮಹತ್ವದ್ದೆಂದು ನಾನು ಭಾವಿಸುತ್ತೇನೆಯಲ್ಲದೆ ಉಭಯ ರಾಷ್ಟ್ರಗಳ ಅಂತಿಮ ಒಡಂಬಡಿಕೆಗೆ ಇದು ಸಹಾಯಕವಾಗಲೆಂದು ಹಾರಯಿಸುತ್ತೇನೆ ಎಂಬುದು ಅವರ ಸಂದರ್ಶನದ ಸಾರವಾಗಿದೆ. ಈ ಒಡಂಬಡಿಕೆಯ ಫಲವಾಗಿ ಸಮಿತಿಯವರ ಮುಂದಿನ ಮಾರ್ಗ ಸುಗಮವಾಯಿತೆಂದು ಹಾರಯಿಸಲಾಗಿದೆ.

ಈಗಾದ ಒಪ್ಪಂದದ ಅನ್ವಯ ಗೊತ್ತು ಮಾಡಲ್ಪಟ್ಟ ಮೇರೆಯು ತಳಹದಿಯ ಮೇಲೆಯೆ ಮುಂದಿನ ಮಾತುಕತೆಗಳು ನಡೆಯುವವು. ಉಪಸಮಿತಿಯವರು ಕಾಶ್ಮೀರದಲ್ಲಿ ನಡೆಯುತಿರುವದನ್ನೆಲ್ಲ ಭದ್ರತಾ ಮಂಡಳಕ್ಕೆ ತಿಳಿಸುತ್ತಿದ್ದರೂ ಇಡೀ ಪ್ರಶ್ನೆಯ ಪುನರ್ವಿಮರ್ಶೆಗಾಗಿಯಾಗಲಿ ಇಲ್ಲವೆ ಸಲಹೆಗಾಗಿಯಾಗಲಿ ಅದನ್ನು ತಿರುಗಿ ಕಳಿಸುವ ಸಂಭವವಿಲ್ಲೆಂದು ತೋರುತ್ತದೆ. ಆದರೂ ಒಪ್ಪಂದದ ಪ್ರಯತ್ನವನ್ನು ಅವರು ಹೀಗೆಯೆ ಸಾಗಿಸುವರು. ಈ ಮೊದಲು ನಾವು ಉಲ್ಲೇಖಿಸಿದಂತೆ ಸಮಿತಿಯವರು ಪಾಕಿಸ್ತಾನದ ಪಕ್ಷ ವಹಿಸಿ ಕಾಶ್ಮೀರ ಸಮಸ್ಯೆಯನ್ನು ಬಿಡಿಸಲು ಪ್ರಯತ್ನಿಸಿದರೆ ಯಶಸ್ಸು ಸಿಕ್ಕುವ ಸಂಭವ ತೀರ ಕಡಿಮೆ. ನಿಷ್ಪಕ್ಷಪಾತವಾಗಿ ಮತ್ತು ನ್ಯಾಯೈಕ ದೃಷ್ಟಿಯಿಂದ ಈ ಪ್ರಶ್ನೆಯ ಇತ್ಯರ್ಥ ಮಾಡಲಿಕ್ಕೆ ಪ್ರವರ್ತಿಸಿದ್ದಾದರೆ ಉದ್ದೇಶವು ಬೇಗ ಸಫಲವಾಗಿ ಬಹಳ ದಿನಗಳಿಂದ ಕೊಳೆಯುತ್ತ ಬಿದ್ದ ಈ ಪ್ರಶ್ನೆಯು ಬಗೆಹರಿಯಬಲ್ಲದು. ಭದ್ರತಾ ಮಂಡಲದವರು ಜಗತ್ತಿನಲ್ಲಿ ಇಂಥ ಹಲವಾರು ಪ್ರಶ್ನೆಗಳನ್ನು ಬಿಡಿಸಲು ಪ್ರಯತ್ನಿಸಿ ಯಾವುದೊಂದರಲ್ಲಿಯೂ ಅಷ್ಟೊಂದು ಯಶಸ್ಸನ್ನು ಸಂಪಾದಿಸಿದ ಉದಾಹರಣೆಯಿಲ್ಲ. ಈ ಸಮಸ್ಯೆಯಲ್ಲಿಯಾದರೂ ನಿಷ್ಪಕ್ಷಪಾತದಿಂದ ವರ್ತಿಸಿ ಯಶಸ್ಸನ್ನು ಸಂಪಾದಿಸಿ ಕೀರ್ತಿಯನ್ನು ಹೊಂದಲಿ.

ಕಾಶ್ಮೀರ ಉಪಸಮಿತಿಯ ಪ್ರಯತ್ನದ ವಿವರವಿಂತಿರುವಾಗ ಬ್ರಿಟಿಶ ಸರಕಾರದ ಧೋರಣವೇನೆಂಬುದನ್ನು ನೋಡುವದು ಅಪ್ರಸ್ತುತವಾಗಲಾರದು. ಹಿಂದುಸ್ಥಾನವನ್ನು ಇಬ್ಭಾಗ ಮಾಡಿ ಅನೇಕ ಸಮಸ್ಯೆಗಳನ್ನುಂಟು ಮಾಡಿದ ಬ್ರಿಟಿಶ ಸರಕಾರದ ನಿಲುವೆಯು ಈ ಸಂಬಂಧದಲ್ಲಿ ಅಷ್ಟೊಂದು ಸದ್ಭಾವನೆಯಿಂದೊಡಗೂಡಿದೆಯೆಂದು ಹೇಳಲು ಬರುವಂತಿಲ್ಲ. ಕಾಶ್ಮೀರ ಸಮಸ್ಯೆಯ ಸಂಬಂಧದಲ್ಲಿಯೂ ಅದರ ಅಂತರ್ಯವೇನೇ ಇದ್ದರೂ ನಿಷ್ಪಕ್ಷಪಾತ ಧೋರಣವನ್ನು ವಹಿಸಬೇಕೆಂದು ಅದು ನಿರ್ಧರಿಸಿದೆಂದು ತಿಳಿಯುತ್ತದೆ. ಕಾಶ್ಮೀರ ಸಮಸ್ಯೆಯ ಸಂಬಂಧದಲ್ಲಿ ಹಿಂದುಸ್ಥಾನ ಮತ್ತು ಪಾಕಿಸ್ತಾನಗಳಲ್ಲಿ ಮತ್ತೆ ತಿಕ್ಕಾಟ ನಡೆದದ್ದಾದರೆ ಈ ಎರಡೂ ರಾಷ್ಟ್ರಗಳಲ್ಲಿರುವ ಬ್ರಿಟಿಶ ಅಧಿಕಾರಿಗಳು ಯಾವ ಧೋರಣ ವಹಿಸತಕ್ಕದ್ದು ಎಂಬ ಬಗ್ಗೆ ಬ್ರಿಟಿಶ ವಿದೇಶ ಮಂತ್ರಿಗಳಾದ ಬೆವಿನ್‌ರು ಈ ಎರಡೂ ದೇಶಗಳಲ್ಲಿಯ ತಮ್ಮ ರಾಯಭಾರಿಗಳನ್ನು ಲಂಡನಿಗೆ ಕರೆಸಿಕೊಂಡು ತಿಳಿಸಿದರೆಂದು ತಿಳಿಯುತ್ತದೆ. ತಿಕ್ಕಾಟದ ಪ್ರಸಂಗದಲ್ಲಿ ತಮ್ಮ ಸೈನ್ಯಾಧಿಕಾರಿಗಳನ್ನು ತಿರುಗಿ ಕರೆಸಿಕೊಳ್ಳತಕ್ಕದ್ದೆಂದು ಬ್ರಿಟಿಶ್ ಸರಕಾರವು ನಿರ್ಧರಿಸಿದೆಯೆಂದು ನಿಶ್ಚಿತವಾಗಿ ಗೊತ್ತಾಗುತ್ತದೆ. ಇದೇ ಕಾರಣದಿಂದ ಪಾಕಿಸ್ತಾನವು, ಕಾಶ್ಮೀರದ ಮೇಲೆ ದಾಳಿ ಮಾಡಿದ್ದು ತನ್ನ ಸೈನ್ಯವಲ್ಲ ಎಂದು ಮೊನ್ನೆ ಮೊನ್ನೆಯವರೆಗೆ ಹೇಳಿದ್ದು ಮತ್ತು ಹಿಂದುಸ್ಥಾನ ಸರಕಾರವು ಕಾಶ್ಮೀರ ಗಡಿಯಲ್ಲಿಯೆ ಪಾಕಿಸ್ತಾನ ಸೈನ್ಯವನ್ನೆದುರಿಸಿ ಕೊನೆಗೆ ಈ ಪ್ರಶ್ನೆಯನ್ನು ಭದ್ರತಾ ಮಂಡಲಕ್ಕೊಯ್ದದ್ದು ಎಂದು ಹೇಳಲಾಗುತ್ತದೆ. ಹಿಂದುಸ್ಥಾನದ ಮುಖ್ಯ ಸೇನಾಪತಿಯಾಗಿದ್ದ ಜನರಲ್ ಬುಚರರು ಕಾಶ್ಮೀರ ಯುದ್ಧದ ಮೇಲ್ವಿಚಾರಣೆ ಮೊದಲಾದದ್ದನ್ನೆಲ್ಲ ಹಿಂದೀ ಕಪ್ತಾನನಿಗೆ ವಹಿಸಿಕೊಟ್ಟದ್ದು, ಈ ಯುದ್ಧದಲ್ಲಿ ಬ್ರಿಟಿಶ ಅಧಿಕಾರಿಗಳನ್ನು ಎಲ್ಲಿಯೂ ಕಳಿಸದಿದ್ದುದೂ ಇದೇ ಕಾರಣದಿಂದ ಎಂದು ಹೇಳಲಾಗುತ್ತದೆ. ಆದರೆ ಇನ್ನು ಮುಂದೆ ಹಿಂದ— ಪಾಕಗಳಲ್ಲಿ ಘರ್ಷಣೆಯುಂಟಾದರೆ ಅದು ಕಾಶ್ಮೀರದ ಮಟ್ಟಿಗೆ ಉಳಿಯದೆ ಎಲ್ಲೆಡೆ ಹಬ್ಬುವ ಸಂಭವವಿದ್ದುದರಿಂದ ಈ ಸಂದರ್ಭದಲ್ಲಿ ಬ್ರಿಟಿಶ ಸೈನ್ಯಾಧಿಕಾರಿಗಳನ್ನು ಹಿಂದಕ್ಕೆ ಕರೆಸಿಕೊಳ್ಳುವದೇ ನಿಹಿತವೆಂದು ನಿರ್ಧರಿಸಿರುವರೆಂದು ತಿಳಿಯುತ್ತದೆ. ಆದರೆ

ವಾಗಿ ಕಾಶ್ಮೀರ ಸಮಿತಿಯು ಗೊತ್ತುಪಡಿಸಿದಂತೆ ಒಡಂಬಡಿಕೆಗೆ ಅನುಕೂಲವಾದ ವಾತಾವರಣವನ್ನು ಕಲ್ಪಿಸಿ ಕೊಟ್ಟರೆ, ತಿಕ್ಕಾಟದ ಪ್ರಸಂಗವು ಬಾರದೆ ಕಾಶ್ಮೀರ ಸಮಸ್ಯೆ ಮಾತ್ರ ಬಗೆಹರಿಯುವದಲ್ಲದೆ ಇವೆರಡೂ ರಾಷ್ಟ್ರಗಳ ಸ್ನೇಹ ಸಂಬಂಧವೂ ಭದ್ರವಾದ ತಳಹದಿಯಲ್ಲಿ ನೆಲೆಗೊಂಡು ಎರಡೂ ರಾಷ್ಟ್ರಗಳು ಶಾಂತಿ, ಸುಖ, ಸಮೃದ್ಧಿಗಳಲ್ಲಿ ನಲಿದಾಡುವವೆಂಬಲ್ಲಿ ಸಂದೇಹವಿಲ್ಲ.

× × ×

ಹಿಂದುಸ್ಥಾನ ಸರಕಾರದ ಮುಖ್ಯ ಮಂತ್ರಿಗಳಾದ ಪಂಡಿತ ಜವಾಹರಲಾಲರು ಅಹಾರೋತ್ಪಾದನೆ ಮತ್ತು ಅದರ ಬಳಕೆ ಇವುಗಳಲ್ಲಿ ಉಳಿದವರಿಗೆ ಮೇಲ್ಪಂಕ್ತಿಯನ್ನು ಹಾಕಿಕೊಟ್ಟಿರುವರು. ತಮ್ಮ ಬಂಗ್ಲೆಯ ವಿಶಾಲವಾದ ಬೈಲಿನಲ್ಲಿ ಕೇವಲ ಸ್ವಲ್ಪ ಪ್ರದೇಶವನ್ನು ಮಾತ್ರ ಬಿಟ್ಟುಗೊಟ್ಟು ಉಳಿದ ಕಡೆಯಲ್ಲೆಲ್ಲ ಆಹಾರ ಪದಾರ್ಥಗಳನ್ನು ಮತ್ತು ಪಲ್ಲೆ ಕಾಯಿಗಳನ್ನು ಹಾಕಿ ಅವುಗಳ ಉಪಯೋಗ ಮಾಡಿಕೊಳ್ಳುತಿರುವರು. ಈಗಾಗಲೆ ಮೂರಡಿ ಎತ್ತರದ ಗೋವಿನಜೋಳವು ಕಣ್ಣಿಗೆ ಹಬ್ಬವನ್ನುಂಟು ಮಾಡುತಿದೆ. ಹಿಂಭಾಗದಲ್ಲಿ ಗೋದಿಯನ್ನು ಬಿತ್ತಲಾಗುವದು. ಬೆಂಗಾ, ಕಿಜ್ಜಿ ಮತ್ತು ಗೆಣಸು ಈಗಾಗಲೆ ಬೆಳೆದು ನಿಂತಿವೆ. ಬಾಳೇಹಣ್ಣು ಮತ್ತು ಆರಾರೂಟ್ ಬೆಳೆಯೂ ಬೆಷ್ಟಾಗಿ ಬಂದುದಾಗಿ ತೋರುತ್ತದೆ. ಸ್ವಲ್ಪವೂ ಸ್ಥಳವನ್ನು ಹಾಗೆಯೇ ಬಿಟ್ಟಿರುವದಿಲ್ಲ. ಆಹಾರ ಪದಾರ್ಥಗಳ ಬೆಳೆಯ ಮಧ್ಯದಲ್ಲಿ ಪಲ್ಲೆ ಕಾಯಿಗಳನ್ನು ಬೆಳೆಸಲಾಗುವದು. ಮುಖ್ಯಮಂತ್ರಿಗಳ ಭೋಜನ ಮೇಲೆ ಅಯಾ ಕಾಲದ ಕಾಯಿಪಲ್ಲೆಗಳ ಕುಂಡಗಳು ಶೋಭಿಸುತ್ತವೆಯಲ್ಲದೆ ಪುಷ್ಪಕುಂಡಗಳು ಮಾಯವಾಗಿವೆ. ಬಂಗ್ಲೆಯ ವಿಶಾಲ ಪ್ರದೇಶವನ್ನು ಇಂತು ಅಹಾರೋತ್ಪಾದನೆಯಲ್ಲಿ ಮಂತ್ರಿಗಳು ಉಪಯೋಗ ಮಾಡುತಿರುವರಲ್ಲದೆ ತಮ್ಮ ದೈನಿಕ ಆಹಾರದಲ್ಲಿಯೂ ಮಹತ್ವದ ಬದಲಾವಣೆಯನ್ನು ಮಾಡಿರುತ್ತಾರೆ. ಅಕ್ಕಿಗೆ ಪೂರ್ಣವಾಗಿ ಅರ್ಧಚಂದ್ರ ಕೊಡಲಾಗಿದೆ. ಸೋಮವಾರ ದಿನ ಗೋದಿಗೂ ಅರ್ಧಚಂದ್ರ! ಉಳಿದ ದಿನ ಗೆಣಸಿನ ಹಿಟ್ಟನ್ನು ಕೂಡಿಸಿದ ಗೋದೀ ಹಿಟ್ಟಿನ ಚಪಾತಿ ಮಾಡುವರು. ಮುಖ್ಯ ಮಂತ್ರಿಗಳ ಈ ಉಪಕ್ರಮವು ಸ್ತುತ್ಯ ಮತ್ತು ಅನುಕರಣೀಯವಾಗಿದೆಯೆಂಬಲ್ಲಿ ಸಂದೇಹವಿಲ್ಲ. ಆದರೆ ಬಂಗ್ಲೆ ಮನೆಗಳಲ್ಲಿಯ ಬೈಲು ಪ್ರದೇಶಗಳಿಗಿಂತ ಅಯಾ ಹಳ್ಳಿಹಳ್ಳಿಗಳಲ್ಲಿ ಎಷ್ಟೋ ಪಡಭೂಮಿಗಳಿದ್ದುದು ಅನೇಕರಿಗೆ ಗೊತ್ತುಂಟು. ವಿಶೇಷತಃ ರೈತರು ಸಾಕಷ್ಟಿಲ್ಲದ ದೂರಸ್ಥ ಒಡೆಯರಿರುವ ಪ್ರದೇಶದಲ್ಲಿ ಮತ್ತು ಮಲೇರಿಯಾ ಮೊದಲಾದ ಪಿಡುಗುಗಳಿರುವ ಪ್ರದೇಶದಲ್ಲಿ ಇಂಥ ಪಡಭೂಮಿಗಳು ಹೆಚ್ಚು. ಆಹಾರೋತ್ಪಾದನೆಯನ್ನು ಹೆಚ್ಚಿಸಬೇಕೆಂಬ ಈ ಸಮಯದಲ್ಲಿಯೆ ಇವೆಲ್ಲ ಪಡಭೂಮಿಗಳು ಸಾಗಾದರೆ ಅದರ ಹೆಜ್ಜೆ ಬಹಳ ಮುಂದೆ ಬೀಳುವದೆಂಬಲ್ಲಿ ಸಂದೇಹವಿಲ್ಲ. ಸರಕಾರದವರೂ ಸಾರ್ವಜನಿಕರೂ ಇತ್ತ ಗಮನಿಸುವರೊ?

× × ×

ಹಿಂದುಸ್ಥಾನದಲ್ಲಿ ಎಲ್ಲ ಪದಾರ್ಥಗಳ ಅದರಲ್ಲಿಯೂ ಆಹಾರ ಪದಾರ್ಥಗಳ ಧಾರಣೆಗಳು ಮಿತಿಮೀರಿ ಏರಹತ್ತಿದ್ದರಿಂದ ಹಿಕ್ಕೀಸಿಗಳೆಲ್ಲ ವಿವಂಚನೆಗೊಳಗಾಗುವದು ಸ್ವಾಭಾವಿಕ. ಉತ್ಪಾದನೆಯು ಹೆಚ್ಚಿ ವಿತರಣವು ಸರಾಗವಾಗಿ ಸಾಗಹತ್ತಿದರೆ ಧಾರಣೆಗಳು ತಾವಾಗಿಯೆ ಕುಗ್ಗುವವು. ಆದರೆ ಕೆಲ ಕಾರಖಾನೆದಾರರ ಅವ್ಯವಸ್ಥಿತ ಆಡಳಿತೆಯ ಮೂಲಕ ಉತ್ಪತ್ತಿಯು ಕುಗ್ಗುತಿರುವುದಲ್ಲದೆ ನಿರುದ್ಯೋಗತನವೂ ಹೆಚ್ಚುತಿದೆ. ಹೀಗಾಗದಂತೆ ನೋಡಿಕೊಳ್ಳುವದು ಕ್ರಮಪ್ರಾಪ್ತವಾಗಿದೆ. ಹೊಸದಿಲ್ಲಿಯಲ್ಲಿ ಶ್ರೀ. ಖಂಡೂಭಾಯಿ ದೇಸಾಯಿ ಇವರ ಅಧ್ಯಕ್ಷತೆಯಲ್ಲಿ ಸೇರಿದ್ದ ಅ. ಭಾ. ರಾಷ್ಟ್ರೀಯ ಮಜದೂರ ಸಂಘದ ಕಾರ್ಯಕಾರೀ ಮಂಡಲದವರು ಈ ಎಲ್ಲ ಪ್ರಶ್ನೆಗಳ ವಿಚಾರಮಾಡಿ ಧಾರಣೆಗಳಿಳಿಯುವಂತೆ ಸರಕಾರವು ಪ್ರಯತ್ನಿಸಬೇಕಲ್ಲದೆ ಉತ್ಪಾದನೆಯು ಹೆಚ್ಚುವಂತೆ ನೋಡಿಕೊಳ್ಳಲು ಅವಶ್ಯಕ ಅಧಿಕಾರವನ್ನು ಪಡೆಯತಕ್ಕದ್ದು ಎಂದು ಮಂಡಿಸಿ ಅಭಿಪ್ರಾಯ ಪಟ್ಟಿದೆ. ದೇಶದ ಆರ್ಥಿಕ ಪರಿಸ್ಥಿತಿ ಇಷ್ಟೊಂದು ಹದಗೆಡಲಿಕ್ಕೆ ಧಾರಣೆಗಳ ಏರಿಕೆಯೇ ಕಾರಣವಾಗಿದ್ದು ಇದರಿಂದ ಕೂಲಿಕಾರರು ಮಾತ್ರವಲ್ಲದೆ ಎಲ್ಲ ಜನರೂ ಅನಿಷ್ಟ ಪರಿಣಾಮಕ್ಕೊಳಗಾಗಬೇಕಾಗುವದೆಂದೂ ಅವರು ಎಚ್ಚರಿಸಿರುವರು. ಸರಕಾರದವರು ಇತ್ತ ಲಕ್ಷಿಸುವರೆಂದು ನಂಬುತ್ತೇವೆ.

ಚಿಕ್ಕ ಕತೆ

ತೆರೆ—ಮರೆ

(ಲೇ: ವೀ. ಪುಟ್ಟಮಾದಪ್ಪ)

ಮಡಿಚಿದ್ದ ತೋಳನ್ನು ಉದ್ದವಾಗಿ ನೀಡಿದೆ. "ಮುಷ್ಟಿ ಬಿಗಿ", ಎಂದರು ವೈದ್ಯರು. ಮುಷ್ಟಿ ಬಿಗಿದು ಕತ್ತನ್ನು ಎಡಗಡೆ ಹೊರಳಿಸಿದೆ. ನನ್ನ ತೋಳನ್ನು ಯಾರೋ ಬಲವಾಗಿ ಅದುಮಿ ಹಿಡಿದರು. ಮರುಕ್ಷಣದಲ್ಲಿ ಸೂಜಿಯೊಂದು ಕೊಳವೆಯಲ್ಲಿದ್ದ ದ್ರವವನ್ನು ನನ್ನ ದೇಹದೊಳಕ್ಕೆ ಸಾಗಿಸುತ್ತಿತ್ತು. ಸೂಜಿ ಚರ್ಮಕ್ಕೆ ತಾಗುತ್ತಲೇ ನಾನು ಗಟ್ಟಿಯಾಗಿ ಕಿರಿಚಿಬಿಟ್ಟೆ. ಆಗ ಯಾರೋ "ಗಾಬರಿಪಡಬೇಡಿ. ಏನೂ ಆಗುವುದಿಲ್ಲ" ಎಂದರು. ಸೂಜಿಯನ್ನು ತೋಳಿನಿಂದ ತೆಗೆದು, ತೋಳನ್ನು ಮತ್ತೆ ಮಡಚಿ ವೈದ್ಯರು ಮತ್ತೊಬ್ಬ ರೋಗಿಯ ಬಳಿಗೆ ನಡೆದರು.

ಏನೋ ಕನಸು ಬಿದ್ದು ಕನವರಿಸುತ್ತಿದ್ದೆ, ಏತನ್ಮಧ್ಯೇ ನನಗೆಚ್ಚರವಾಗಿ ಸುತ್ತಲೂ ದೃಷ್ಟಿ ಹೊರಳಿಸಿದೆ. ನನ್ನ ಮುಂದೆ ಒಬ್ಬ ಹೆಂಗಸು ನನ್ನ ದೇಹವನ್ನಲುಗಿಸುತ್ತ ನಿಂತಿದ್ದಳು. ನಾನು ಎಚ್ಚರೆಯುತ್ತಲೇ ಆಕೆ ನಗುತ್ತ "ನಿದ್ರಾಭಂಗವಾಯಿತೇನು? ಕ್ಷಮಿಸಿ. ಇಗೋ, ನಿಮ್ಮ ಔಷಧವನ್ನು ಕುಡಿಯಿರಿ" ಎಂದಳು. ಮರುಮಾತನ್ನಾಡದೆ ನಾನು ಬಾಯನ್ನು ಅಗಲವಾಗಿ ತೆರೆದೆ. ನನ್ನ ತೆರೆದ ಬಾಯಿಗೆ ಔಷಧ ಸುರಿದು ಆಕೆ ಹೊರಟು ಹೋದಳು. ಔಷಧಿ ಬಹಳ ಕಹಿಯಾಗಿದ್ದುದರಿಂದ ಓಕರಿಕೆ ಬಂದಂತಾಗಿ ಐದಾರು ಬಾರಿ ಕತ್ತನ್ನು ಕೊಡವಿದೆ. ಮೇಲೆದ್ದು ಮಂಚಕ್ಕೊರಗಿ ಕುಳಿತು ಒಂದೆರಡು ಚಂಚ ಸಕ್ಕರೆಯನ್ನು ಬಾಯಿಗೆ ಎಸೆದುಕೊಂಡೆ. ವಸ್ತ್ರವೊಂದರಿಂದ ಮುಖ ಒರೆಸಿ ಬಳಿಕ ಸುತ್ತಲೂ ದೃಷ್ಟಿ ಹೊರಳಿಸಿದೆ. ಆಕೆ ೧೦ ನೆಯ ನಂಬರಿನ ಮಂಚದಲ್ಲಿದ್ದ ರೋಗಿಯ ಬಳಿ ನಿಂತಿದ್ದಳು. ಬೆಳಗಿನಿಂದಲೂ ಕೆಮ್ಮುತ್ತ ಮಲಗಿದ್ದ ಆ ರೋಗಿ ಈಗ ನಗುನಗುತ್ತ ಆಕೆಯೊಡನೆ ಮಾತನಾಡುತ್ತಿದ್ದ. ಅವನ ಪಕ್ಕದಲ್ಲಿದ್ದ ಮತ್ತೊಬ್ಬ ರೋಗಿ—ಅವನ ಕಾಲುಗಳಿಗೆ ಲಕ್ವ ಹೊಡೆದಿತ್ತು—ಅವರಿಬ್ಬರ ಮಾತುಗಳನ್ನು ಕುತೂಹಲದಿಂದ ಕೇಳುತ್ತಿದ್ದ. ಆಕೆಯ ಬೆನ್ನು ನನ್ನ ದಿಕ್ಕಿಗಿತ್ತು. ನನ್ನ ಮುಂದೆ ನಿಂತಿದ್ದಾಗ ಆಕೆಯ ಮುಖವನ್ನು ನೋಡುವ ಧೈರ್ಯವಿರಲಿಲ್ಲ ನನಗೆ. ಆಕೆಯದು ತೆಳುವಾದ ದೇಹ, ಉಟ್ಟಿದ್ದ ಬಿಳಿಯ ಸೀರೆಯ ಸೆರಗು ತೊಟ್ಟಿದ್ದ ಕುಪ್ಪಸದ ಮುಂಭಾಗವನ್ನು ಮುಚ್ಚಿ, ಹೆಗಲಿನ ಬಳಿ ಪಿನ್ನೊಂದರ ಸೆರೆಗೆ ಸಿಕ್ಕಿಬಿದ್ದು, ಮತ್ತೆ ಬೆನ್ನಿನ ಮೇಲೆ ಹರಡಿ ಹಾರಾಡುತ್ತಿತ್ತು. ಕತ್ತಿನ ಮೇಲೆ ಚೆಂಡು ಕಟ್ಟಿದ ತಲೆ ಕೂದಲು ಓರಣವಾಗಿ ಬಿದ್ದಿತ್ತು. ಆಕೆಯ ದೇಹದ ಮೇಲೆ ಯಾವ ತರದ ಆಭರಣವೂ ಇರಲಿಲ್ಲ. ಎಡದ ಕೈಲಿ ಮಾತ್ರ ಒಂದು ಪುಟ್ಟ ಗಡಿಯಾರ. ಆಕೆ ಮಾತು ಮುಗಿಸಿ ಹಿಂತಿರುಗಿದಳು. ನಾನು ದೃಷ್ಟಿಯನ್ನು ಇನ್ನೊಂದು ದಿಕ್ಕಿಗೆ ತಿರುಗಿಸಿದೆ.

ಮರುದಿನ ವೈದ್ಯರು ಸೂಜಿ ಚುಚ್ಚಿ ಹೋದ ಮೇಲೆ ನಾನು ನರಳುತ್ತ ಬಿದ್ದಿದ್ದೆ. ಆಕೆ ಹತ್ತಿರ ಬಂದು ಮಿದುನುಡಿಗಳಿಂದ "ಬಹಳ ನೋವಾಗುತ್ತಿದೆಯೇ?" ಎಂದು ಕೇಳಿದಳು. ನಾನು ಹೌದೆಂದು ತಲೆಯಲ್ಲಾಡಿಸಿದೆ. ಮಡಿಚಿದ್ದ ತೋಳನ್ನು ನೀಡಿ, ವೈದ್ಯರು ಸೂಜಿಯಿಂದ ಚುಚ್ಚಿದ್ದ ಜಾಗದಲ್ಲಿ ಆಕೆ ತನ್ನ ಹಸ್ತದಿಂದ ಬಲವಾಗಿ ತಿಕ್ಕಿದಳು. ಬಳಿಕ "ಗ್ಲೂಕೋಸ್ ವಾಟರ್ ಕೊಡುತ್ತೇನೆ. ಕುಡಿಯಿರಿ" ಎಂದು ಔಷಧಿಗಳಿಟ್ಟಿದ್ದ ಮೇಜಿನೆಡೆಗೆ ನಡೆದಳು.

ನನ್ನ ಆಸ್ಪತ್ರೆಯ ವಾಸದ ನಾಲ್ಕನೆಯ ದಿನ ಆಕೆ ರೂಢಿಯಂತೆ ನನಗೆ ಔಷಧ ಕೊಡಲು ಬಂದಳು. ಅಂದು ಬಹಳ ಮೌನಿಯಾಗಿದ್ದ ಆಕೆಯನ್ನು ಕಂಡು ನನಗೆ ತುಸು ಆಶ್ಚರ್ಯವಾಯಿತು. ಎಂದಿನಂತೆ ಆಕೆ ನಗುಮುಖದಿಂದ ನನ್ನ ಆರೋಗ್ಯವನ್ನು ವಿಚಾರಿಸಲಿಲ್ಲ. ಯಾರ ಹತ್ತಿರವೂ ಹೆಚ್ಚಾಗಿ ಆಕೆ ಅಂದು ಮಾತನಾಡಲಿಲ್ಲ. ಆಕೆಯ ಮೌನ ಮುರಿಯುವ ಗೋಜಿಗೆ ಹೋಗದೆ ನಾನು ಕಾದಂಬರಿಯೊಂದನ್ನು ಓದುತ್ತಾ ಕುಳಿತೆ. ಮಧ್ಯಾಹ್ನ ಮತ್ತೆ ಔಷಧಿ ಕೊಡಲು ಆಕೆ ಬಂದಳು. ಆಗಲೂ ಅಷ್ಟೆ, ಆಕೆಯ ಮುಖ ಗೆಲುವಾಗಿರಲಿಲ್ಲ. ನನಗೆ ಔಷಧಿ ಕೊಡಲು ಬಂದಾಗ ನಾನು ಧೈರ್ಯಮಾಡಿ "ಏಕೆ, ಇಂದು ಆರೋಗ್ಯ ಚೆನ್ನಾಗಿಲ್ಲವೆ?" ಎಂದು ಕೇಳಿದೆ. ನನ್ನ ಬಾಯಲ್ಲಿದ್ದ ಥರ್ಮಾಮೀಟರನ್ನು ಹೊರತೆಗೆದು, ಅದರ ಕಡೆ ನೋಡುತ್ತ ಆಕೆ "ಆರೋಗ್ಯಕ್ಕೇನು? ಚೆನ್ನಾಗಿದೆ" ಎಂದಳು. ನಾನು ಅಲ್ಲಿಗೇ ಬಿಡಲಿಲ್ಲ. ಮತ್ತೆ ಕೇಳಿದೆ, "ಇಂದು ಏನೋ ಆಗಿರಬೇಕು. ನೀವು ಆ ವಿಷಯವನ್ನು ನನ್ನಿಂದ ಬಚ್ಚಿಡುತ್ತಿದ್ದೀರಿ". ಮಂಚಕ್ಕೆ ತಗುಲಿಹಾಕಿದ್ದ ಚಾರ್ಟಿನಲ್ಲಿ ಗುರುತುಹಾಕುತ್ತ ಆಕೆ ಹೇಳಿದಳು, "ನಿನ್ನೆ ನನ್ನ ಬ್ರೋಚ್ ಕಳೆದುಹೋಯಿತು. ಎಲ್ಲಿ ಬಿದ್ದುಹೋಯಿತೋ ತಿಳಿಯದು. ಚಿನ್ನದ್ದದು. ಏನು ಮಾಡಬೇಕೋ ತಿಳಿಯದು." "ಮನೇಲಿ ಬಹಳ ಬೈತಾರೇನು?" ಎಂದು ಪ್ರಶ್ನಿಸಿದೆ. "ಮತ್ತೇನು, ಮುದ್ದಿಸುತ್ತಾರೆ?" ಎಂದು ಹೇಳಿ ಆಕೆ ಹೊರಟುಹೋದಳು.

ಮರುದಿನ ಆಕೆಯ ಮುಖ ಅಷ್ಟು ಮ್ಲಾನವಾಗಿರದಿದ್ದರೂ ಎಂದಿನಷ್ಟು ಗೆಲುವಾಗಿರಲಿಲ್ಲ. ಆಕೆ ನನಗೆ ಔಷಧಿ ಕುಡಿಸಲು ಬಂದಾಗ "ಸಿಕ್ಕಿತೇನು ನಿಮ್ಮ ಬ್ರೋಚು?" ಎಂದು ಕೇಳಿದೆ. "ಓ! ಇನ್ನು ಅದು ಸಿಕ್ಕುತ್ತದೆಯೆ?" ಎಂದು ಹೇಳಿ ಆಕೆ ಗ್ಲಾಸಿನಲ್ಲಿದ್ದ ಔಷಧಿಯನ್ನು ನನ್ನ ಗಂಟಲಿಗೆ ಸುರಿದಳು. ಓಕರಿಸುತ್ತ ನಾನು "ನೀವು ಬಹಳ ಬೇಹುಷಾರಿಗಳಿರಬೇಕು. ಹುಷಾರಿಂದಿರಿ, ವಾಚನ್ನೂ ಕಳೆದುಕೊಂಡೀರಿ" ಎಂದೆ. ಆಕೆ ನಗುತ್ತ ಹೊರಟುಹೋದಳು.

ಆಕೆ ಜುಗುಪ್ಸೆಪಡದೆ ರೋಗಿಗಳ ಶುಶ್ರೂಷೆ ಮಾಡುತ್ತಿದ್ದುದನ್ನು ಕಂಡು ನನಗೆ ಆಗಾಗ ಆಶ್ಚರ್ಯವಾಗುತ್ತಿತ್ತು. ನಾಲ್ಕನೆಯ ಮಂಚದಲ್ಲಿದ್ದ ರೋಗಿಗೆ ದೇಹವೆಲ್ಲಾ ಗಾಯಗಳು. ಅವನನ್ನು ನೋಡಿದರೇನೆ ಅಸಹ್ಯವಾಗುತ್ತಿತ್ತು. ಆದರೆ ಆಕೆ ಮಾತ್ರ ತುಸುವೂ ಹಿಂಜರಿಯದೆ ಪ್ರತಿದಿನವೂ ಆತನ ಗಾಯಗಳಿಗೆ ಮುಲಾಮನ್ನು ಲೇಪಿಸುತ್ತಿದ್ದಳು; ಗಾಯಗಳಿಗೆ ಬಟ್ಟೆ ಸುತ್ತುತ್ತಿದ್ದಳು; ಅವನೊಡನೆ ಸವಿಮಾತುಗಳಾಡುತ್ತಿದ್ದಳು. ೬ ನೆಯ ಮಂಚದಲ್ಲಿದ್ದ ರೋಗಿಗೆ ಗೂರಲು ಕೆಮ್ಮು. ಅವನು ಕೆಮ್ಮಲು ಒಮ್ಮೆ ಪ್ರಾರಂಭಿಸಿದರೆ ಸಾಕು, ೨-೩ ನಿಮಿಷಗಳ ವರೆಗೂ ಕೆಮ್ಮುತ್ತಲೇ ಇರುತ್ತಿದ್ದ. ನಿಮಿಷ ನಿಮಿಷಕ್ಕೂ ಪಕ್ಕದಲ್ಲಿದ್ದ ತಟ್ಟೆಗೆ ಎಂಜಲನ್ನುಗುಳುತ್ತಿದ್ದ. ಆ ಕಶ್ಮಲವನ್ನೆಲ್ಲ ಆಕೆ ಬೇಜಾರಿಲ್ಲದೆ ತೆಗೆದುಹಾಕುತ್ತಿದ್ದಳು. ಆಕೆ ಬಳಿ ಇದ್ದರೆ ಸಾಕು, ಅವನ ಕೆಮ್ಮು ಮಾಯವಾಗುತ್ತಿತ್ತು. ಮತ್ತೊಬ್ಬ ರೋಗಿಗೆ ಕಾಲುಗಳು ಬಿದ್ದುಹೋಗಿದ್ದವು. ಇನ್ನೊಬ್ಬರ ಸಹಾಯವಿಲ್ಲದೆ ಅವನಿಗೆ ನಡೆಯಲಾಗುತ್ತಿರಲಿಲ್ಲ. ಆಕೆಯೆ ಅವನನ್ನು ಸ್ನಾನಗೃಹಕ್ಕೆ ಕರೆದೊಯ್ಯುತ್ತಿದ್ದಳು. ಒಮ್ಮೆ ಆತ ನನಗೆ ಹೇಳಿದ: "ಆಕೆ ಹತ್ತಿರ ಇದ್ದರೆ ಸಾಕು, ನನಗೆ ಎಲ್ಲೂ ಇಲ್ಲದ ಬಲ ಬಂದುಬಿಡುತ್ತದೆ. ಹಿಂದಿನ ಜನ್ಮದಲ್ಲಿ ಆಕೆ ನನ್ನ ತಾಯಾಗಿರಬೇಕು." ನನ್ನ ಪಕ್ಕದಲ್ಲಿದ್ದ ರೋಗಿಗೆ ಅಸಾಧ್ಯ ತಲೆನೋವು. ನೋವು ತಡೆಯಲಾರದೆ ಒಮ್ಮೊಮ್ಮೆ ಆತ ಗಟ್ಟಿಯಾಗಿ ಕಿರಚಿಬಿಡುತ್ತಿದ್ದ. ಆಗ ನಾವೆಲ್ಲರೂ ಬೆಚ್ಚಿಬೀಳುತ್ತಿದ್ದೆವು. ಆಗ ಆಕೆ ಅವನ ಬಳಿ ಹೋಗಿ ಕುಳಿತು, ಅವನ ಹಣೆ ಸವರುತ್ತ ಸಮಾಧಾನ ಹೇಳುತಿದ್ದಳು. ಒಂದು ದಿನ ವೈದ್ಯರು ನನಗೆ ಸ್ಪಂಜ್ ಬಾತ್ ಕೊಡಲು ಆಕೆಗೆ ಹೇಳಿದರು. ೩೦ ದಿನಗಳಿಂದಲೂ ಸ್ನಾನ ಮಾಡಿರಲಿಲ್ಲ. ಆಕೆ ಸೋಪು, ಟವಲು, ನೀರು ತಂದು ನನಗೆ ಸ್ನಾನಮಾಡಿಸಿದಳು. ಟವಲನ್ನು ನೀರಿನಲ್ಲಿ ಅದ್ದಿ ಆಕೆ ಕೇಳಿದಳು: "ಪಾಪ, ಸ್ನಾನಮಾಡಿ ಬಹಳ ದಿನಗಳಾಗಿರಬೇಕು." "ಹೌದು ಸುಮಾರು ೩೦ ದಿನಗಳಾದವು" ನಾನೆಂದೆ. ಮತ್ತೆ ಆಕೆ ಟವಲಿನಿಂದ ನನ್ನ ದೇಹ ಒರೆಸಲು ಮೊದಲು ಮಾಡಿದಳು. "ಓದುವುದರಲ್ಲಿ ನಿಮಗೆ ಬಹಳ ಆಸಕ್ತಿಯಿರುವಂತೆ ಕಾಣುತ್ತದೆ" ಆಕೆ ಹೇಳಿದಳು. ಹಣೆ ಮುಚ್ಚಿದ್ದ ಕೂದಲನ್ನು ಹಿಂದಕ್ಕೆ ದೂಡಿ ನಾನೆಂದೆ "ಹೌದು, ಅದೊಂದು ಹುಚ್ಚು" "ನಾನೂ ಅಷ್ಟು ಓದಿದ್ದರೆ ಚೆನ್ನಾಗಿತ್ತು" ಎಂದು ಆಕೆ ಮೆಲ್ಲನೆ ಹೇಳಿದುದು ನನಗೆ ಕೇಳಿಬಂದಿತು.

ಆಕೆಯ ಹೆಸರು ಪ್ರೇಮ, ರಂಗೂನ್ ನಿವಾಸಿ. ಕಳೆದ ಯುದ್ಧಕಾಲದಲ್ಲಿ ಸಿಪಾಯಿಯೊಬ್ಬನ ಜೊತೆ ಬಿದ್ದು ಮನೆಬಿಟ್ಟಳು. ಕಳೆದ ವರ್ಷ ಆಕೆಯ ಗಂಡನನ್ನು ಸೈನ್ಯದಿಂದ ತೆಗೆದುಹಾಕಿದುದರ ಪ್ರಯುಕ್ತ ಆತ ಈಗ ನಿರುದ್ಯೋಗಿ. ಆಕೆ ಸಂಪಾದಿಸುವ ಹಣದಲ್ಲಿ ಸಂಸಾರ ಸಾಗಬೇಕು. ಬೆಂಗಳೂರಿಗೆ ಬಂದ ಮೇಲೆ ಪ್ರೇಮ ಅವರಿವರ ಕಾಲು ಹಿಡಿದು ನರ್ಸ್ ಕೆಲಸಕ್ಕೆ ಸೇರಿಕೊಂಡಳು. ಮೊದಲು ಮೊದಲು ರೋಗಿಗಳ ಶುಶ್ರೂಷೆ ಮಾಡಲು ಹೇಸಿದರೂ ದಿನಗಳೆದಂತೆ ತನ್ನ ಕರ್ತವ್ಯದಲ್ಲಿಯೇ ಆಕೆ ಸಂತೃಪ್ತಿಗೊಂಡಳು. ಆಕೆಯ ಮಾತುಗಳಿಂದ ಆಕೆಯ ಗೃಹಜೀವನ ಸುಖಮಯವಾಗಿದ್ದಂತೆ ಕಂಡು ಬರಲಿಲ್ಲ. ಆಗಾಗ ಒಂದಿಬ್ಬರು ರೋಗಿಗಳು ಕೊಡುತ್ತಿದ್ದ ಒಂದೆರಡು ರೂಪಾಯಿಗಳನ್ನು ಸಂತೋಷದಿಂದ ಆಕೆ ಸ್ವೀಕರಿಸುತ್ತಿದ್ದುದನ್ನು ನಾನು ನೋಡಿದ್ದೆ. ಏಕೋ, ಆಕೆಗೆ ಹಣಕೊಡಲು ನನಗೆ ಮನಬರಲಿಲ್ಲ. ನನ್ನ ಹತ್ತಿರ ಹಣವಿರಲಿಲ್ಲವೆಂದಲ್ಲ—ಆದರೆ ನಾನು ಹಣ ಕೊಟ್ಟರೆ ಆಕೆ ಏನು ತಿಳಿದುಕೊಳ್ಳುವಳೋ ಎಂಬ ಸಂಶಯವಿತ್ತು ನನಗೆ.

ನಾನು ಆಸ್ಪತ್ರೆಯಲ್ಲಿ ಸುಮಾರು ೩೦ ದಿನಗಳಿದ್ದೆ— ಅಷ್ಟರಲ್ಲಿ ಆಕೆಯಲ್ಲಿ ನನಗೆ ಸಲಿಗೆ ಬೆಳೆದುಹೋಗಿತ್ತು. ಪ್ರತಿಯೊಬ್ಬನ ಹತ್ತಿರವೂ ಆಕೆ ಸಲಿಗೆಯಿಂದಿರುತ್ತಿದ್ದಳು. ಒಬ್ಬಿಬ್ಬರಂತೂ "ಆಕೆಯಿಲ್ಲದಿದ್ದರೆ ನಾವು ಉಳಿಯುತ್ತಿರಲಿಲ್ಲ" ಎನ್ನುತ್ತಿದ್ದರು. ಖಾಯಿಲೆ ಗುಣವಾದ ಮೇಲೆ ನಾನು ಮನೆಗೆ ಬಂದುಬಿಟ್ಟೆ. ಆಸ್ಪತ್ರೆ ಬಿಟ್ಟು ಬರುವಾಗ ಆಕೆಯ ವಿಳಾಸ ತಿಳಿದುಕೊಂಡಿದ್ದೆ. ನಾನು ಆಕೆಗೆ ಒಂದು ಬಿಡಿಕಾಸಿನ ಸಂಭಾವನೆಯನ್ನೂ ಮಾಡಿರಲಿಲ್ಲ. ನಾನು ಹೊರಟು ನಿಂತಾಗ ಆಕೆ ನಿತ್ಯದಂತೆ ನಗುತ್ತ "ದೇವರ ದಯದಿಂದ ಸೌಖ್ಯಗೊಂಡಿರಲ್ಲ! ಮನೆಯಲ್ಲಿ ಆರೋಗ್ಯವನ್ನು ಸರಿಯಾಗಿ ನೋಡಿಕೊಳ್ಳಿ" ಎಂದಳು. ಪಕ್ಕದಲ್ಲಿ ನಿಂತಿದ್ದ ಒಬ್ಬ ರೋಗಿ "ನೀವಿಲ್ಲದಿದ್ದರೆ ಒಬ್ಬರೂ ಗುಣಹೊಂದುವುದಿಲ್ಲವಮ್ಮ" ಎಂದ. ಆತನ ಮರುಕೆಯ ನುಡಿಗಳಿಗೆ ಆಕೆ ನಕ್ಕು ಒಳಗೆ ಹೋದಳು.

ನಾನು ಆಸ್ಪತ್ರೆಯಿಂದ ಮನೆಗೆ ಬಂದು ಸುಮಾರು ೧೫ ದಿನಗಳಾಗಿದ್ದುವು. ನಾನು ಮನೆಗೆ ಬರುತ್ತಲೆ ನನ್ನ ತಾಯಿಯವರು "ಶೂದ್ರರು ಔಷಧಿ ಕೊಡುವ ಆಸ್ಪತ್ರೆಯಲ್ಲಿದ್ದು ಬಂದಿದ್ದಾನೆ. ನಮ್ಮ ವಂಶದಲ್ಲಿ ಒಬ್ಬರೂ ಇದುವರೆಗೆ ಆಸ್ಪತ್ರೆಗೆ ಹೋಗಿರಲಿಲ್ಲ. ಖಾಯಿಲೆ ಬಿದ್ದರೆ ಆಸ್ಪತ್ರೆಗೆ ಹೋಗು ಎಂದು ಇವನ ಓದಿನಲ್ಲಿ ಹೇಳಿದೆಯೆ? ಸುಡಿರಿ ಇವನ ನಾಲಗೆಯನ್ನು" ಎಂದು ಗುಡಿಗುಡಿಸಿದರು. ತಂದೆಯವರು ನಕ್ಕು "ಹೂ, ಆಯ್ತು" ಎಂದರು.

ನನ್ನ ಶುಶ್ರೂಷೆ ಮಾಡಿದ ಆಕೆಗೆ ಏನು ಪ್ರತಿಫಲ ಕೊಡಬೇಕು ಎಂದು ಬಹಳ ದಿನ ಯೋಚಿಸಿ ಅನಂತರ ಒಂದು ಸಿಲ್ಕಿನ ಸೀರೆಯನ್ನು ಕ್ರಯ ಮಾಡಿದೆ. ಒಂದು ದಿನ ಸಂಜೆ ಆಕೆಯ ಮನೆಯ ಮುಂದೆ ನಿಂತೆ. ಆಗ ತಾನೆ ಬೆಳಕನ್ನು ಕತ್ತಲೆ ನುಂಗುತ್ತಿತ್ತು. ತಣ್ಣನೆಯ ಗಾಳಿ ಶಬ್ದ ಮಾಡುತ್ತ ತೂರಿ ಬರುತ್ತಿತ್ತು. ನನ್ನೆದುರಿಗಿದ್ದ ಮನೆಯ ಬಾಗಿಲು ಮುಚ್ಚಿತ್ತು. ಪ್ರಕಾಶಮಾನವಾದ ದೀಪವಾವುದೂ ಒಳಗಡೆ ಉರಿಯುತ್ತಿದ್ದಂತೆ ಕಂಡು ಬರಲಿಲ್ಲ. ಇನ್ನೇನು ನಾನು ಬಾಗಿಲ ... ಬೇಕು, ಅದೇ ಸಮಯಕ್ಕೆ ... ಯಾರೊ ಕಿರಿಚುತ್ತಿದ್ದ ಶಬ್ದ ಕೇಳಿ ... ಕದವನ್ನು ತಟ್ಟದೆ ನಾನು ತೆಪ್ಪಗೆ ನಿಂತೆ.

"ಆ ಚಿನ್ನದ ಬ್ರೋಚನ್ನು ಏನು ಮಾ... ಕೊಡು ಇಲ್ಲಿ!"

"ಅದನ್ನು ಆ ದಿನವೇ ನಿಮಗೆ ಕೊಟ್ಟೆ... ಅದಕ್ಕೆ ಮಾರವಾಡಿ ೩೦ ರೂಪಾಯಿ ... ನೆಂದು ನೀವೇ ಹೇಳಿದಿರಿ. ಇನ್ನೆಲ್ಲಿಂದ ... ಕೊಡಲಿ ಬ್ರೋಚನ್ನು? ಕುಡಿದು ಬಂದು ... ಯವರಿಗೇಕೆ ಈ ಕಷ್ಟ ಕೊಡಬೇಕು?"

ಅಳುವಿನ ಧ್ವನಿ ಕೇಳ ಬಂದಿತು. ... ಒದೆವ, ಉಗಿವ, ಶಪಿಸುವ ಶಬ್ದಗಳೂ ... ಬಂದುವು.

"ಯಾರೇ ಕುಡಿದಿರೋದು?... ... ಎಲ್ಲಿಟ್ಟಿದ್ದಿಯೆ ಅದನ್ನು. ಇಲ್ಲದಿದ್ದರೆ ... ಬಿಟ್ಟೇನು!... ಹೇಳು"

ಮತ್ತಷ್ಟು ಹೊಡೆತ... ಮತ್ತಷ್ಟು ... ವಿಕೆ.

"ಅಯ್ಯೊ, ನನ್ನ ಪ್ರಾಣವೇಕೆ ತೆಗೆ... ತ್ತೀರಿ? ಆ ಬ್ರೋಚನ್ನು ಅಂದೇ ಕೊ... ಜೊತೆಗೆ ಅವರಿವರು ಕೊಟ್ಟ ಐದಾರು ರೂಪಾ... ಯಿಗಳನ್ನೂ ಕೊಟ್ಟೆ. ಅಷ್ಟೂ ಸಾಲದೆ ... ಕೊಡು, ಕೊಡು ಎಂದರೆ ಎಲ್ಲಿಂದ ... ಕೊಡಲಿ? ಎಷ್ಟು ಹೆಂಡ ಕುಡಿದರೆ ... ನಿಮಗೆ ತೃಪ್ತಿಯಾದೀತು? ನನ್ನ ದೇಹ... ಹೆಂಡವೇನಾದರೂ ಇದ್ದರೆ, ಅದನ್ನೂ ... ಕುಡಿಯುತ್ತಿದ್ದಿರೇನೋ!"

"ಹೆಂಡವೇನು? ನಿನ್ನ ರಕ್ತವನ್ನೇ ಹೀ... ತ್ತೇನೆ... ಎಲ್ಲೇ ಒಡವೆ... ಹೇಳುತ್ತೀಯೋ ಇಲ್ವೋ"

ಅಳುವಿನ ಧ್ವನಿ ಗಟ್ಟಿಯಾಯಿತು. ... ಗಳೂ ಬಲವಾಗಿ ಬೀಳುತ್ತಿದ್ದುವು. ಒಳಗ... ಮಿನುಗುತ್ತಿದ್ದ ದೀಪದ ಮಂದಪ್ರಕಾಶ... ನನಗೆ ಕಿಟಕಿಯಿಂದ ಏನೂ ಕಂಡುಬರಲಿಲ್ಲ.

"ಅಯ್ಯೊ.. ನನ್ನನ್ನು ಕೊಂದು ಬಿಡಿ... ಹೀಗೇಕೆ ನನ್ನಗೋಳು.."

ಮುಂದೆ ಅಲ್ಲಿ ನಿಲ್ಲಲಾರದೆ ನಾನು ಹೊರ... ಬಂದೆ. ನನ್ನ ಕಣ್ಣುಗಳು ಮಂಜಾಗಿದ್ದುವು.

ಮರುದಿನ ಅವಳು ಹೊರಡುವ ಹೊತ್ತಿಗೆ ಆಸ್ಪತ್ರೆಗೆ ಹೋದೆ. ಆಕೆ ನಗುತ್ತ "ಆರೋಗ್ಯ... ವಾಗಿದ್ದೀರಿ, ತಾನೆ?" ಎಂದಳು. ಸೌಖ್ಯವೆಂ... ಹೇಳಿ ಆಕೆಯ ಕೈಗೆ ಸೀರೆಯಿಟ್ಟೆ. ಕೃತಜ್ಞ... ಯಿಂದ ನನ್ನನ್ನು ನೋಡಿ ಆಕೆ ಸೀರೆಯನ್ನು ಸ್ವೀಕರಿಸಿದಳು.

ಮರುದಿನ ಆ ಸೀರೆ ಮಾರವಾಡಿಯ... ಕೈಸೇರಿರಬೇಕು!

● ಮಧ್ಯಪ್ರಾಂತದ ಹಳ್ಳಿ ಪ್ರದೇಶಗಳ... ನ್ಯಾಯ ಪಂಚಾಯತಿಗಳನ್ನು ಸ್ಥಾಪಿಸುವ ಸ... ಕಾರದ ಪ್ರಕಟನೆಯಿಂದ ಕಿರಿವಕೀಲರಿ... ಸಖೇದಾಶ್ಚರ್ಯವಾಗಿದೆ. ಅವರ ಉತ್ಪನ್ನ... ಮುಖ್ಯಾಂಶಗಳಿಗೆ ಕಾರಣವಾಗಿರುವ ಚಿ... ಪುಟ್ಟ ದಿವಾಣಿ ಮತ್ತು ಫೌಜದಾರಿ ಪ್ರಕರ... ಗಳನ್ನು ಇನ್ನು ಮುಂದೆ ಈ ಪಂಚಾಯತಿಗಳ... ನಿರ್ಣಯಿಸುವವು. ಅಲ್ಲಿ ವಕೀಲರಿಗೆ ಸ್ಥಾ... ವಿಲ್ಲ! —ನಾಗಪುರ "ಹಿತವಾದ"

ತಿರುವು — ಮುರುವು

ನಾಯಕ (ರ) ನೀತಿ

ದ್ರವಿಡ ಕಳಗಂದ ನಾಯಕರಾದ ಶ್ರೀ ಇ. ವ್ಹಿ. ಆರ್. ನಾಯಕರ್ ಇವರು ವಾರಸದಾರ ಬೇಕೆಂದು ಮದುವೆ ಮಾಡಿಕೊಳ್ಳಲು ನಿಶ್ಚಯಿ ಸಿದರೆ ಅವರ ಅನುಯಾಯಿಗಳು ಪ್ರತಿಭಟನೆ ಯನ್ನು ಮಾಡಿದರಂತೆ. ಆರ್. ಎಸ್. ಎಸ್. ದ ನಾಯಕರಾದ ಶ್ರೀ ಗೋಲವಲಕರರು ತಮಗೆ ವಾರಸದಾರ (successor) ಬೇಡ ಎನ್ನುವ ವರೆಗೆ ಹಿಂದುಸ್ತಾನದ ಸರಕಾರ ದವರು ಅವರನ್ನು ಬಂಧನದಲ್ಲಿಟ್ಟರು. ಇದಲ್ಲವೆ ನಿಜವಾದ ತಿರುವು-ಮುರುವು ವ್ಯವಹಾರ? ಅನುಯಾಯಿಗಳಾಗಲಿ ಸರಕಾರವಾಗಲಿ ಹೀಗೆ ನಡೆದುಕೊಂಡರೆ, ಪಾಪ! ಪಕ್ಷಗಳ ನಾಯಕರು ಮಾಡಬೇಕೇನು? ಒಟ್ಟು, ಹಿಂದುಸ್ತಾನದಲ್ಲಿ ಮದುವೆಯ ವಿಷಯವೆ ತಿರುವು-ಮುರುವು ಆಗಿದೆ. ಮದುವೆಯನ್ನು ದೊಡ್ಡವನಾದ ಮೇಲೆ ಮಾಡಿಕೊಳ್ಳಬೇಕಾಗಿಲ್ಲವೆ? "ದೊಡ್ಡವ" ಎಂದರೆ ಯಾವ ಅರ್ಥದಲ್ಲಿ? ವಯಸ್ಸಿನಿಂದಲೆ? ಇಲ್ಲವೆ ಯೋಗ್ಯತೆಯಿಂದಲೆ? ತಿರುಕಪ್ಪನಿಗೂ ತಿಳಿಯದಾಗಿದೆ. ಆದರೆ ಇತ್ತಿತ್ತಲಾಗಿ ಮಾತ್ರ ಯೋಗ್ಯತೆಯಿಂದ ದೊಡ್ಡವನಾದೊಡನೆ ಮದುವೆಯಾಗುವುದು ಸ್ವತಂತ್ರ ಹಿಂದುಸ್ತಾನದ ಬರಿಯ ದ್ರವಿಡಕಳಗಂದ ಅಲ್ಲ-ನಾಯಕರ ರೂಢಿಯಾಗಿದೆ. "ಹೊನ್ನು—ಹೆಣ್ಣು—ಮಣ್ಣು" ಈ ಮೂರರಲ್ಲಿ ಯಾವುದು ಹಿತ ಎಂದು ಕೇಳಿದವರು ಅರಿಯದ ದಾಸರು. ಏಕ ಕಾಲಕ್ಕೆ ಮೂರನ್ನೂ ಗಳಿಸುವುದೆ ಹಿತ ಎಂದು ಇಂದಿನ ಈಶರು ತೋರಿಸಿಕೊಡುತ್ತಿದ್ದಾರೆ.

× × ×

ಕಾಂಗ್ರೆಸದ ಕಳ್ಳಪೇಟೆ, ಸಾಚಾರ ಪೊಳ್ಳಪೇಟೆ

ಪೂರ್ವ ಪಂಜಾಬದಲ್ಲಿ ಕಳ್ಳಪೇಟೆಯ ಮೇಲೆ ಸರಕಾರವು ದಾಳಿ ನಡೆಸಿದೆಯಂತೆ. ಆ ಪೇಟೆಯ ಸಂದುಗೊಂದುಗಳಲ್ಲಿ ದೊಡ್ಡವರೂ ಶಾಸನಸಭಾಸದಸ್ಯರೂ ಸಿಕ್ಕಿದ್ದಾರೆಂದು ಒಂದು ಪತ್ರಿಕೆ ಆಶ್ಚರ್ಯವನ್ನು ವ್ಯಕ್ತ ಮಾಡಿದೆ. ಅದನ್ನೋದಿ ತಿರುಕಪ್ಪನಿಗೆ ಆಶ್ಚರ್ಯವಾಯಿತು. ಕೂಳಿಗೆ ಗತಿಯಿಲ್ಲದ ಬಡವ ಕಳ್ಳಪೇಟೆಯಲ್ಲಿ ಸಿಕ್ಕನೆಂಬ ಅಪೇಕ್ಷೆಯೆ ಈ ಪತ್ರಿಕೆಗೆ? ಪಾಪ ಮಾಡಿ ದಕ್ಕಿಸಿಕೊಳ್ಳಲಿಕ್ಕೆ ಪುಣ್ಯ ಪಡೆದು ಬಂದಿರಬೇಕು ಎಂಬ ಮಾತು ಸುಳ್ಳಲ್ಲ. "ಶಾಸನಸಭಾ ಸದಸ್ಯ" ಅನ್ನೋದಕ್ಕೇ ಅಲ್ಲವೆ ಜನರು ಲಂಚವನ್ನು ಕೊಡುವುದು? ಮುಖಲಕ್ಷಣ ನೋಡಿ ಕೊಡಲಿಕ್ಕೆ ಲಂಚ ಅನ್ನೋದು ಕನ್ಯಾನೂ ಅಲ್ಲ, ವರದಕ್ಷಿಣೆಯೂ ಅಲ್ಲ. ಒಬ್ಬ ಪಾರ್ಲಿಮೆಂಟರಿ ಸೆಕ್ರೆಟರಿ ತನ್ನ ಹುಚ್ಚ ತಮ್ಮನ ಹೆಸರಿನಿಂದ ಲೈಸೆನ್ಸ ಪಡೆದಿದ್ದನಂತೆ. ಹುಚ್ಚ ಯಾರು? ಅವನ ತಮ್ಮನೊ? ಅವನಿಗೆ ಲೈಸೆನ್ಸ ಕೊಟ್ಟ ಸರಕಾರವೊ? ಅಲ್ಲ, ಕಾಂಗ್ರೆಸದವರು ತಮ್ಮ ಹೆಸರಿನಿಂದ ವ್ಯವಹಾರವನ್ನೇ ನಡೆಯಿಸಬಾರದು ಅಂತ ಠರಾವು ಮಾಡಿ ವ್ಯಾಲಿ ಮಂದಿಯ ಹೆಸರಿನಿಂದ ನಡೆಯಿಸತಾರಲ್ಲ ಅಂತ ಬೊಬ್ಬೆ ಇಟ್ಟರೆ? ಹುಚ್ಚ ಯಾರು—ಅಂತ ಇನ್ನೊಮ್ಮೆ ಕೇಳುತ್ತಾನೆ ತಿರುಕಪ್ಪ. ಇಂಥ ಠರಾವು ಪಾಸುಮಾಡಿದರೆ ನಾಳೆ ಪ್ರತಿಯೊಬ್ಬ ಕಾಂಗ್ರೆಸದವನ ಮನೆಯೊಳಗೆ ಒಂದೊಂದು ಹುಚ್ಚರ ಆಸ್ಪತ್ರೆಯೆ ನಿಂತೀತು—ಎಚ್ಚರ! Hands off Black Market! ಕಳ್ಳಪೇಟೆಗೆ ಕೈ ಹಚ್ಚಬೇಡಿರಿ! ಕಳ್ಳಪೇಟೆಯವರು ಕೂಳು ಒದಗಿಸುವರೆಂದೇ, ವ್ಹೋಟ ಕೊಡಲಿಕ್ಕೆ ಜೀವಂತ ಉಳಿದಿದೆ ಜನ. "ಸಾಚಾ" ಮನುಷ್ಯನನ್ನು ಮಂತ್ರಿ ಮಾಡಿದರೆ ಯಾರಿಗೂ ಸುಖ ಇಲ್ಲ ಅನ್ನೋದಕ್ಕೆ ಪೂರ್ವ ಪಂಜಾಬದಲ್ಲಿ ನಡೆದದ್ದೆ ಸಾಕ್ಷಿ.

× × ×

ಮಾಡಿದ್ದನ್ನುಣ್ಣೊ ಮಾಣಿಮಹಾರಾಯಾ!

ಒಬ್ಬ ಹೊಟೆಲ್‌ದವನು ಎಂಟಾಣೆಗೆ ಮಿಕ್ಕಿದ ಪೇಢೆ-ಚಿವಡಾ ಮಾರಿದ್ದಕ್ಕೆ ಸೇಲ್ಸಟ್ಯಾಕ್ಸ (ಮಾರಾಟದ ಕರ) ಹೇರಿದ ಒಂದು ಖಟ್ಲೆ ಹೈಕೋರ್ಟಿಗೆ ಹೋದ ವರದಿ ಬಂದಿದೆ. ಊಟ (Meals)ದ ಪದಾರ್ಥಕ್ಕೆ ಕರವಿದ್ದುದರಿಂದ ಪೇಢೆ-ಚಿವಡಾದ ಮಾರಾಟಕ್ಕೂ ಕರ ಹೇರಿದೆ ಎಂದು Sales Tax ಅಧಿಕಾರಿಗಳ ವಾದ. ಪೇಢೆ—ಚಿವಡಾ ಎಂದರೆ ಊಟವಲ್ಲ ಎಂದು ಹೊಟೆಲ್ ಮಾಲಿಕನ ವಾದ. ಹೈಕೋರ್ಟಿನವರು ಶಬ್ದಕೋಶವನ್ನು ನೋಡಿ "ನಿಯಮಿತ ವೇಳೆಗೆ, ಜೀವಿಸುವುದಕ್ಕೇ ಆಧಾರವೆಂದು ತಿನ್ನುವುದು ಊಟ" ಎಂದು ಕಂಡು ಪೇಢೆ-ಚಿವಡಾ ಊಟವಲ್ಲ ಎಂದು ತೀರ್ಮಾನಿಸಿ ಕರದ ಹಣವನ್ನು ವಾಪಸು ಮಾಡಲು ಹುಕುಂ ಹೊರಡಿಸಿದ್ದಾರೆ. ತಿರುಕಪ್ಪನಿಗೆ ಹೈಕೋರ್ಟಿನ ಈ ನಿರ್ಣಯ ಅಷ್ಟೊಂದು ರುಚಿಸಿಲ್ಲ. "ಜೀವಿಸುವುದಕ್ಕೆ ಆಧಾರ" ಪೇಢೆ ಚಿವಡಾ ಅಲ್ಲ ಎಂದು ಜಡ್ಜಸಾಹೇಬರು ವಾದಿಸಬಹುದು. ಆದರೆ ಇಂದಿನ ಕಾಲದ ಭಾರತದಲ್ಲಿ ಬೇಕಾದ್ದನ್ನು ತಿಂದು ಜೀವಿಸುವ ಸ್ವಾತಂತ್ರ್ಯ ಭಾರತೀಯನಿಗಿದೆ ಎಂಬುದು ಸಾಹೇಬರಂತಹರಿಗೆ ಹೇಗೆ ಗೊತ್ತಾದೀತು? ಸರಕಾರೀ ಅಧಿಕಾರಿಗಳಿಗೆ ಮಾತ್ರ ಗೊತ್ತಿದೆ. ಹೈಕೋರ್ಟು ಇಂತಹ ನಿರ್ಣಯವನ್ನು ಕೊಡುತ್ತ ಹೋದರೆ ಸರಕಾರದ ಬೊಕ್ಕಸದ ಗತಿ ಏನು? ನಾಳೆ ಜನ ಹುಲ್ಲನ್ನು ತಿಂದು ಕರವನ್ನು ತಪ್ಪಿಸಿದರೆ? ಅದ್ದರಿಂದ ತಿಂದುದರ ಮೇಲೆ ಕರವನ್ನು ಹೇರಬೇಕು, ಅದು "ಲಂಚ" (Lunch) ಇರಲಿ, ಬರಿಯ ರಿಫ್ರೆಶ್‌ಮೆಂಟ್ ಇರಲಿ. ಇಲ್ಲವಾದರೆ, ದೇಶದ ಜಡ್ಜಸಾಹೇಬರೆಲ್ಲ ಒಂದು ದಿನ ಹೊಟೆಲ್‌ದಲ್ಲಿ ತಿಂದು ನೋಡಲಿ.

× × ×

ಬಹಳ ಆಶಿಸಿದರೆ ಬಹುಮತವಿಲ್ಲ

"ಸರಕಾರದಿಂದ ಯಾವದೇ ರೂಪದಲ್ಲಿ ಸಂಬಳ ಪಡೆಯುವ ಕಾಂಗ್ರೆಸಿಗರು ತಮ್ಮ ಸಂಬಳದಲ್ಲಿ ನೂರಕ್ಕೆ ೧೦ ರಂತೆ ಕಾಂಗ್ರೆಸ ನಿಧಿಗೆ ಕಾಣಿಕೆ ಸಲ್ಲಿಸತಕ್ಕದ್ದು". ಬಿಹಾರ ಪ್ರಾಂತಿಕ ಕಾಂಗ್ರೆಸ ಸಮಿತಿಯಲ್ಲಿ ಸ್ವೀಕೃತವಾದ ಗೊತ್ತುವಳಿ. ಅದೇ ಸಮಿತಿಯಲ್ಲಿ "ಕಳ್ಳಪೇಟೆ ಮತ್ತು ಇತರ ವಾಮಮಾರ್ಗಗಳಿಂದ ಹಣ ಗಳಿಸಿದ ಬಗ್ಗೆ ವಿಚಾರಣೆ ನಡೆಯಿಸಿ ಹೀಗೆ ಗಳಿಸಿದ ಹಣವನ್ನು ಸರಕಾರವು ವಶಪಡಿಸಿಕೊಳ್ಳತಕ್ಕದ್ದು" ಎಂಬ ಗೊತ್ತುವಳಿ ಬಿದ್ದು ಹೋಯಿತಂತೆ. ಆಶ್ಚರ್ಯವೇನು? ಕುಯ್ ಅನ್ನದೆ ನೂರಕ್ಕೆ ೧೦ ಕೊಡು ಅಂದರೆ ಯಾರಾದರೂ 'ಹುಂ' ಅಂದಾರು. ಅದಲ್ಲದೆ, ಉಳಿದ ೯೦ ನ್ನೂ "ಹತ್‌ಹುತ್" ಮಾಡಿ ಕಸಿದುಕೋಬೇಕೆಂದರೆ? ಇದೇನು ಪ್ರಜಾರಾಜ್ಯನೊ ಏನು ರಾಜ್ಯಕ್ಕಾಗಿ ಪ್ರಜೆಗಳೊ?

× × ×

ಕೃಷ್ಣನ ಕಮ್ಯುನಿಜಂ

"ಭಾರತ ರಶಿಯಾಗಳಲ್ಲಿ ಸೌಹಾರ್ದವನ್ನು ಬೆಳೆಸುವುದೆ ನನ್ನ ಧ್ಯೇಯವಾಗಿದೆ ಎಂದು ಡಾ. ಎಸ್. ರಾಧಾಕೃಷ್ಣನ್ನರು 'ಭಗವದ್ಗೀತೆ' ಎಂಬ ವಿಷಯದ ಮೇಲೆ ಭಾಷಣ ಮಾಡುತ್ತ ಹೇಳಿದರು"

—ಒಂದು ಅಧ್ಯಕ್ಷೀಯ ಭಾಷಣ

ಭಗವದ್ಗೀತೆಗೂ ರಶಿಯದೊಡನೆ ಸೌಹಾರ್ದಕ್ಕೂ ಯಾವ ಸಂಬಂಧ ಎಂದು ಪೆಚ್ಚರು ಕೇಳಬಹುದಾಗಿದೆ. ಆದರೆ ತತ್ವಜ್ಞಾನಿಗಳ ತರ್ಕವೆ ಅಗಮ್ಯ, ಇದ್ದಲ್ಲಿ ಇದ್ದುದನ್ನು ಕಾಣುವುದು ಸಾಮಾನ್ಯ ಮನುಷ್ಯನ ಅಲ್ಪಶಕ್ತಿಯ ಲಕ್ಷಣ; ಬೇಕಾದಲ್ಲಿ ಬೇಕಾದ್ದನ್ನು ಕಾಣುವುದು ಪಾಂಡಿತ್ಯದ ಪ್ರತಿಭೆ. ಭಗವದ್ಗೀತೆಯಲ್ಲಿ ಭಗವಂತನೂ ಇದ್ದಾನೆ ಗೀತೆಯೂ ಇದೆ; ಭಗವಂತನ ವಿಶ್ವರೂಪದರ್ಶನದಲ್ಲಿ ಭಾರತವೂ ಇದೆ, ರಶಿಯಾ ಕೂಡ ಇದೆ; ಇಷ್ಟೇಕೆ? "ಇಹೈವ ತೈರ್ಜಿತಃ ಸರ್ಗೋ ಯೇಷಾಂ ಸಾಮ್ಯೇ ಸ್ಥಿತಂ ಮನಃ" ಎಂದು ಸಾಮ್ಯವಾದವನ್ನು ಹೊಗಳಿಲ್ಲವೆ ಭಗವದ್ಗೀತೆಯಲ್ಲಿ? ಮೂರುಸಾವಿರ ವರ್ಷಗಳ ಮುಂಚೆ ಭಾರತದಲ್ಲಿ ರಚಿತವಾದ ಈ ಗ್ರಂಥದಲ್ಲಿ "ನೀನು ಮಾಡುವುದೆಲ್ಲವನ್ನೂ-ಕುರುಷ್ವ ಮದರ್ಪಣಂ" ಎಂದು ಕಮ್ಯುನಿಜಂದ ತಿರುಳನ್ನು ಸಾರಿದೆ. ಗೀತೆಯ ಇಂತಹ ಭಾಷ್ಯವನ್ನು ಕೇಳಿದರೆ ಸ್ಟಾಲಿನನು ಸೌಹಾರ್ದದ ನಗೆಯನ್ನೇ ಬೀರಲಿಕ್ಕಿಲ್ಲವೆ? "ವಾದಾನಾಂ ಮಾರ್ಕ್ಸವಾದೋಽಸ್ಮಿ" ಎಂದಿದೆ ಗೀತೆ; "ಸೌಹಾರ್ದೇ ಸ್ಟಾಲಿನೋ ಮತಃ" ಎನ್ನುವ ತತ್ವಜ್ಞಾನಿ.

× × ×

ಮುಂಗಾಲಪುಟಿಗೆಯ ಮುಂದಾಳು

"ಇಂಗ್ಲಂಡದಲ್ಲಿ ಕಾಲ ಪರಿಸ್ಥಿತಿಗನುಸರಿಸಿ ಜನತೆ ಮುಂದಾಳುಗಳನ್ನು ಆಯ್ದುಕೊಳ್ಳುತ್ತದೆ. ನಮ್ಮ ಜನತೆಯೂ ಹಾಗೆ ಮಾಡಿದರೆ ಕಾಂಗ್ರೆಸದ ಕೊಳೆ ಕಡಮೆಯಾದೀತು."

—ಪತ್ರಿಕೆಯಲ್ಲಿ ವರದಿ

ಪಾಪ! ಅಧ್ಯಕ್ಷರಿಗೆ ಮುಂದಾಳಾದ ಅನುಭವ ಇಲ್ಲ ಎಂದು ತೋರುತ್ತದೆ. ನಮ್ಮ ಮುಂದಾಳುಗಳು ಇಂಗ್ಲಂಡದ ಮುಂದಾಳುಗಳಿಗಿಂತಲೂ ಬುದ್ಧಿವಂತರು ಎಂದು ಹೆಮ್ಮೆಯಿಂದ ಹೇಳುತ್ತೇನೆ. ಕಾಲ ಪರಿಸ್ಥಿತಿ ಬದಲಾಯಿಸಿದ ಮೇಲೆ ಇಂಗ್ಲಂಡದ ಜನತೆ ಮುಂದಾಳನ್ನು ಬದಲಾಯಿಸುವುದಂತೆ. ಆದರೆ ನಮ್ಮಲ್ಲಿ "ಕಾಲ ಪರಿಸ್ಥಿತಿ ಬದಲಾಯಿಸಿದ ಮೇಲೆ" ಎಂಬ ಪರಿಸ್ಥಿತಿಯೆ ಇಲ್ಲವಲ್ಲ? ಯಾಕೆ ಕಾಲ ಪರಿಸ್ಥಿತಿಗಳ ಕೂಡವೆ ನಮ್ಮ ಮುಂದಾಳುಗಳು ತಾವಾಗಿಯೆ ಬದಲಾಯಿಸುತ್ತಾರೆ. ಇದಲ್ಲವೆ ಮುಂದಾಳುತನದ ಲಕ್ಷಣ? ಮುಂದಾಳನ್ನು ಬದಲಾಯಿಸುವ ತೊಂದರೆಯನ್ನು ಜನರಿಗೆ ಕೊಡುವಷ್ಟು ಸೌಜನ್ಯವನ್ನು ಕಳೆದುಕೊಂಡಿಲ್ಲ ನಮ್ಮ ಮುಂದಾಳು. ಇದಲ್ಲದೆ, "ಮುಂದಾಳು" ಎಂಬುದರ ಅರ್ಥವಾದರೂ ಏನು? ಎಲ್ಲರಿಗಿಂತಲೂ ಮುಂದೆ ಇರುವುದು. ಅದ್ದರಿಂದ "ಬದಲಾಯಿಸುವುದರಲ್ಲೂ" ಮುಂದಿರುವುದು ಮುಂದಾಳಿನ ಕರ್ತವ್ಯವಲ್ಲವೆ?

× × ×

"ಪರದೇಶಿ"ಗಳ ಸಂಖ್ಯೆ ಬೆಳೆಯಿತು

ಪರದೇಶಕ್ಕೆ ಕಳುಹಿಸುವ ಪ್ರತಿನಿಧಿಗಳ ಸಂಖ್ಯೆಯನ್ನು ಕಡಮೆ ಮಾಡಬೇಕೆಂದು ಭಾರತದ ಮುಖ್ಯ ಮಂತ್ರಿಗಳು ಹುಕುಂ ಹೊರಡಿಸಿದ್ದಾರೆಂದು ಕೇಳಿ ತಿರುಕಪ್ಪನೆ "ಪರದೇಶಿ"ಯಂತಾಗಿದ್ದಾನೆ. ಅಲ್ಲ ಎಂತಹ ತಿರುವು-ಮುರುವು ವಿಚಾರ ಮುಖ್ಯ ಮಂತ್ರಿಗಳದು! ಸ್ವತಂತ್ರ ಹಿಂದುಸ್ತಾನವು ದೊಡ್ಡ ದೇಶ. ಕೋಟಿಗೊಂದರಂತೆ ಲೆಕ್ಕ ಮಾಡಿದರೂ ಕನಿಷ್ಠ ೩೦ ಕ್ಕೆ ಮಿಕ್ಕಿ ಪ್ರತಿನಿಧಿಗಳು ಬೇಕಾಗುವರು. ಕಡಮೆ ಜನರು ಹೋದರೆ ನಮ್ಮದು ದೊಡ್ಡ ದೇಶ ಎಂದು ಎರಡನೆಯವರಿಗೆ ತಿಳಿಯುವುದಾದರೂ ಹೇಗೆ? ಇದಲ್ಲದೆ, ದೇಶದ ವಿಮಾನ ಕಂಪನಿಗಳಿಗೆ "ಪೋಟಗಿ" (Subsidy) ಕೊಟ್ಟು ಪ್ರೋತ್ಸಾಹ ಕೊಡಬೇಕೆಂದು ಮಾನ್ಯ ಕಿಡ್ವಾಯಿಯವರು ನಿರ್ಣಯಿಸಿದಾಗ ವಿಮಾನ ತುಂಬಿ ಜನರನ್ನು ಕಳುಹಿಸುವುದನ್ನು ತಡೆಯುವುದೆ? ವಿಪರೀತಬುದ್ಧಿ! ವಿನಾಶಕಾ - ಅಲ್ಲಲ್ಲ, ಅಂದರೆ ವಿಮಾನ ಕಂಪನಿಗಳೂ "ಪರದೇಶಿ"ಗಳಾಗಬೇಕಾಯಿತಲ್ಲ? ಇನ್ನೂ ಒಂದು ಮಾತು. ಬ್ರಿಟಿಶ ಅಧಿಕಾರಿಗಳು ಬಿಟ್ಟರೂ ಅಡ್ಡಿಯಿಲ್ಲ, ನಮ್ಮವರೂ ತಜ್ಞರಿದ್ದಾರೆ ಎಂದು ತೋರಿಸಲು, ಕೆಲವು ಕಡೆ ಗಳನ್ನು ಕಳುಹಿಸುತ್ತಿದ್ದ ನಮ್ಮ ಸರಕಾರ [illegible] ಆ "ಪರದೇಶಿ" [illegible] ಹೋಲಾಗಿ, ಕಾಂಗ್ರೆಸದ [illegible] ಪೀಠದಲ್ಲಿ ಪಕ್ಷಕ್ಕೆ [illegible] ಅಗತ್ಯವಾಗಿದೆ. ಕಾಂಗ್ರೆಸ ಸರಕಾರಕ್ಕೆ [illegible] ರನ್ನು ಕಳುಹಿಸದಿದ್ದರೆ ಇವರಿಗೆ ಅನುಭವ ಬರುವುದೆಂತು? ಇವರಿಗೆ ಅನುಭವ ಬರದಿದ್ದರೆ ದೇಶಕ್ಕೆ ಹೆಚ್ಚಿನ ಸೇವೆ ಸಲ್ಲುವುದೆಂತು? ಸ್ವರಾಜ್ಯವನ್ನು ಗಳಿಸಿದವರೆ ಸ್ವರಾಜ್ಯದ ಆಡಳಿತದಲ್ಲಿ "ಪರದೇಶಿ"ಗಳಾಗಬೇಕೆ? [illegible] ಅಮೇರಿಕೆಯ ಯಂತ್ರ ಸಾಮಗ್ರಿ, [illegible] ಒಂದೇ ಎರಡೇ- ಇಂತಹ ಸಾವಿರಾರು [illegible] ಗಳನ್ನು ಹಿಂದುಸ್ತಾನಕ್ಕೆ ತರಲು [illegible] ಜನರು ಸಾಕಾಗುವುದೆಂತು? ಅಂತೂ ಈ "ಪರದೇಶಿ" ಧೋರಣೆ ಬದಲಾಯಿಸಲೇಬೇಕು.

× × ×

ಬಡಪಾಯಿ ರೂಪಾಯಿ!

ರೂಪಾಯಿಯ ಬೆಲೆ ಇಳಿಯುವುದೆ?-ಎಂಬ ಪ್ರಶ್ನೆ ಎಲ್ಲ ಕಡೆಯಲ್ಲೂ ಕೇಳಬರುತ್ತಿದೆ. ಎಂತಹ ಹುಚ್ಚು ಪ್ರಶ್ನೆ! ಪಾಪ! ರೂಪಾಯಿಯ ಯೋಗ್ಯತೆ ಏನು? ಬುದ್ಧಿವಂತ, ಶೀಲವಂತ ಮನುಷ್ಯನ ಬೆಲೆಯೆ ಇಳಿದಿರುವ ಈ ಕಾಲದಲ್ಲಿ-ಅಂದರೆ ಈ ದೇಶದಲ್ಲಿ ಕಿಸೆಯಲ್ಲಿಯೆ ಬಣ್ಣವನ್ನು ತೊಡೆದ ನಿರ್ಜೀವ ನಾಣ್ಯವು ತನ್ನ ಬೆಲೆಯನ್ನು ಉಳಿಸಿಕೊಳ್ಳಬಲ್ಲುದೆ? ತಜ್ಞರಿಗೆ ತಿರುಕಪ್ಪನದು ಇದು ಸವಾಲು.

——ತಿರುಕಪ್ಪ

ಅಮೇರಿಕ ಮತ್ತು ಇತರ ೧೧ ಯುರೋಪಿಯನ್ ರಾಷ್ಟ್ರಗಳ ಸಂರಕ್ಷಣೆಗಾಗಿ ಮಾಡಿಕೊಂಡ ಅಟ್ಲಾಂಟಿಕ್ ಒಪ್ಪಂದಕ್ಕೆ ಅಲ್ಲಿಯ ಸಿನೇಟ್ ಸಭೆಯು ಅಂಗೀಕಾರ ಮುದ್ರೆಯನ್ನು ಒತ್ತಿತೆಂದು ಸುದ್ದಿ. ಯುರೋಪಿನ ರಕ್ಷಣೆಗಾಗಿ ಅಧ್ಯಕ್ಷ ಟ್ರೂಮನ್ನರು ೧೩,೪೫೦೦೦ ಡಾಲರ್ ಬೆಲೆಯ ಶಸ್ತ್ರಾಸ್ತ್ರಗಳನ್ನು ಕಳಿಸುವ ಬೇಡಿಕೆಯನ್ನು ಕಾಂಗ್ರೆಸ್ಸಿನ ಮುಂದೆ ಇಡಲಿದ್ದಾರೆ. ಇದಲ್ಲದೆ ಸ್ವತಂತ್ರ ಯುರೋಪಿನ ಪರವಿಗಾಗಿ ೧೩ ಕೋಟಿ ಡಾಲರುಗಳನ್ನೂ ವಿಶೇಷತಃ ಗ್ರೀಸ್, ತುರ್ಕಿ, ಇರಾಣ ಫಿಲಿಪ್ಪೈನ್ ಮತ್ತು ಕೊರಿಯಗಳಿಗೆ ೬೩ ಕೋಟಿ ಡಾಲರುಗಳನ್ನೂ ಬೇಡಲಿದ್ದಾರೆ.

ಬಂಗಾಲದಲ್ಲಿ ಆರುತಿಂಗಳಲ್ಲಿ ಸಾರ್ವತ್ರಿಕ ಚುನಾವಣೆ

ಬೇಗನೆ ನಡುಗಾಲ ಸರಕಾರದ ಸ್ಥಾಪನೆ

ಮದರಾಸ ಮಂತ್ರಿಮಂಡಲದ ಮೇಲಿನ ಆರೋಪಗಳ ವಿಚಾರಣೆ

ಕಾಂಗ್ರೆಸ ಕಾರ್ಯಸಮಿತಿಯ ಗೊತ್ತುವಳಿಗಳು

ಶ್ರೀ. ದೇವರವರ ವರದಿ

ಮದ್ರಾಸ ಮಂತ್ರಿಮಂಡಲದ ಕೆಲ ಸದಸ್ಯರ ವಿರುದ್ಧ ಹಾಗೂ ಕಾಂಗ್ರೆಸ್ಸಿಗರ ವಿರುದ್ಧ ಇರುವ ಆರೋಪಗಳ ಬಗ್ಗೆ ವಿಚಾರ ಮಾಡಿ ವರದಿ ಒಪ್ಪಿಸಲು ಕಾಂಗ್ರೆಸ ಅಧ್ಯಕ್ಷರು ಜನರಲ್ ಸೆಕ್ರೆಟರಿ ಶ್ರೀ ಶಂಕರ ರಾವದೇವ ಇವರನ್ನು ನೇಮಿಸಿದ್ದರಷ್ಟೆ. ಅವರು ಮದರಾಸಿಗೆ ಹೋಗಿ ಎಲ್ಲವನ್ನೂ ವಿಚಾರಿಸಿ ಸಾಕ್ಷಿ ಪುರಾವೆಗಳನ್ನು ತೆಗೆದುಕೊಂಡು ತಮ್ಮ ವರದಿಯನ್ನು ಕಾರ್ಯಸಮಿತಿಗೆ ಒಪ್ಪಿಸಿದ್ದರು. ಆ ವರದಿಯ ಮುಖ್ಯಾಂಶಗಳೀಗ ಪ್ರಸಿದ್ಧವಾಗಿವೆ. ಈ ಆರೋಪಗಳ ಬಗ್ಗೆ ನ್ಯಾಯಾಲಯದಲ್ಲಿಯಾಗಲಿ ವಿಚಾರಣಾಮಂಡಲದಲ್ಲಿ ಖಾಸಗಿ ರೀತಿಯಿಂದಾಗಲಿ ಬಹಿರಂಗವಾಗಿ ಯಾಗಲಿ ವಿವರವಾದ ವಿಚಾರಣೆ ನಡೆಸುವದು ಅವಶ್ಯವಾಗಿದೆ ಎಂದು ದೇವರು ಅಭಿಪ್ರಾಯಪಟ್ಟಿರುವರೆಂದು ತಿಳಿಯುತ್ತದೆ. ಆರೋಪಗಳು ಉದ್ದೇಶಪೂರ್ವಕ ಮಾಡಲ್ಪಟ್ಟಿದ್ದರೂ ಅವುಗಳ ಸ್ವರೂಪವು ಗಂಭೀರವಾಗಿದ್ದರಿಂದ ವಿಚಾರಣೆಗೆ ಅರ್ಹವಾಗಿರುವವು. ಉದ್ದೇಶಸಾಧಕರು ರಾಜಕೀಯದಿಂದ ತಮ್ಮ ವಿರೋಧಿ ಪಕ್ಷದವರ ಮೇಲೆ ಅಧಿಕಾರ ದುರುಪಯೋಗದ ಆರೋಪ ಹೊರಿಸುತ್ತಿರುವರೆಂದು ದೇವರು ಹೇಳಿರುವರು. ಶಿಕ್ಷಣ ಸಂಬಂಧದಲ್ಲಿ ಸರಕಾರವು ಜಾತ್ಯಂತ ಧೋರಣವನ್ನು ಸ್ವೀಕರಿಸಿದ್ದು ಅವುಗಳಲ್ಲಿ ಪ್ರವೇಶದ ಬಗ್ಗೆ ಅನುಸರಿಸಿದ ಧೋರಣದಿಂದ ಸಿಟ್ಟು ಬರುತ್ತಿದೆಂದು ಹೇಳಿರುವರು. ಹಿಂದುಸ್ಥಾನದಲ್ಲಿ ಜಾತೀಯ ಭಾವನೆಯು ಸಾರ್ವಜನಿಕ ಹಾಗು ರಾಜಕೀಯ ವಾತಾವರಣವನ್ನು ಕೆಡಿಸಿದೆಯೆಂದು ಪ್ರತಿಯೊಬ್ಬ ಕಾಂಗ್ರೆಸ್ಸಿಗನು ಒಪ್ಪಲೇಬೇಕು. ಇದರಿಂದ ಪಕ್ಷಪಾತ, ಕಾರ್ಯಕ್ಷಮತೆಯುಳ್ಳದವರಿಗೆ ಉತ್ತೇಜನ ಕೊಡಲಾರದಂತಹ ಘಟನೆಗಳು ಹೆಚ್ಚುವವು. ಇದನ್ನು ಹೋಗಲಾಡಿಸಲಿಕ್ಕೆ ಬೇಕು. ಅದರೂ ಜಾತೀಯ ಭಾವನೆಯಿಂದ ಮತದಾತರ ಅತವಾರರನ್ನು ಸಂತುಷ್ಟಗೊಳಿಸಬೇಕಾಗುವ ದೆಂಬದನ್ನು ಮರೆಯಬಾರದೆಂದು ಹೇಳಿರುವರು. ಚುರುಕು ಬುದ್ಧಿಯ ಬ್ರಾಹ್ಮಣ ತರುಣರಿಗೆ ಕಾಲೇಜು ಮುಂತಾದ್ದರಲ್ಲಿ ಪ್ರವೇಶ ದೊರೆಯದ್ದರಿಂದ ಅವರು ನಿರಾಶೆ ಹೊಂದಿ ಉಗ್ರ ರಾಜಕೀಯ ವಿಚಾರಗಳತ್ತ ಅವರ ಮನಸ್ಸು ಹರಿಯಹತ್ತಿ ಸಮಾಜಘಾತಕ ದುಷ್ಟಶಕ್ತಿಗಳೊಡನೆ ಅವರು ಕೂಡಿಕೊಳ್ಳುವ ಭಯವಿದೆಯೆಂದೂ ಈ ಬಗ್ಗೆ ಉಪಾಯ ಕೈಕೊಳ್ಳುವದು ಅವಶ್ಯವಾಗಿದೆಂದೂ ದೇವರು ಅಭಿಪ್ರಾಯಪಟ್ಟಿರುವರು. ಮದರಾಸ ಮುಖ್ಯ ನ್ಯಾಯಾಧೀಶರು ರಾಜೀನಾಮೆ ಕೊಟ್ಟದ್ದಕ್ಕೆ ಮಂತ್ರಿಮಂಡಳದ ಆಡಳಿತೆಯ ಸಂಬಂಧವೇನೂ ಇಲ್ಲ. ಕೇಂದ್ರ ಸರಕಾರದ ಧೋರಣದ ಸಂಬಂಧದಲ್ಲಿ ಅವರು ರಾಜೀನಾಮೆ ಕೊಟ್ಟರೆಂದು ದೇವರ ಅಭಿಪ್ರಾಯ. ಕಾರುಗಳ ಪರವಾನಿಗೆಗಳನ್ನು ದೊರಕಿಸಿಕೊಂಡು ಅವನ್ನು ಜನರು ಅದರ ಲಾಭ ಪಡೆದುಕೊಂಡರೆಂಬುದನ್ನು ಮುಚ್ಚಿಡುವ ಪ್ರಯತ್ನ ದಲ್ಲಿ ಸರಕಾರವೂ ಅದು ಮಹತ್ವದ್ದಾಗಿದೆ. ಆದರೆ ಅದು ಎಂದಾದರೂ ಸಾಧ್ಯವೇ ಎಂಬುದು ನನಗೆ ತಿಳಿಯಲಿಲ್ಲ. ಆದರೂ ಉಳಿದ ಪ್ರಾಂತಗಳಲ್ಲಿಯೂ ಈ ಬಗೆಯ ದೂರುಗಳು ಇದ್ದೇ ಇವೆ. ಆದರೆ ಇದರಲ್ಲಿ ವಿಚಾರಣೆಯ ಅಂಶ ಬಂದಿದೆ. ದೇಶಕ್ಕಾಗಿ ಕಷ್ಟ ಸಹಿಸಿದ ಕಾಂಗ್ರೆಸ್ಸಿಗರಿಗೆ ಸಹಾಯ ಮಾಡುವ ಮಾರ್ಗವೆಂದರೆ ಇದು ಒಂದು ಎಂದು ಭಾವಿಸಿ ಅಧಿಕಾರದಲ್ಲಿರುವ ಹೊಣೆಗಾರ ಕಾಂಗ್ರೆಸ್ಸಿಗರು ಪ್ರಾಮಾಣಿಕವಾಗಿ ಈ ರೀತಿ ಮಾಡುವರು ಎಂದು ಶಂಕರರಾಯರು ಮತ ಪಟ್ಟಿರುವರು.

ಕಾಂಗ್ರೆಸ ಕಾರ್ಯಸಮಿತಿ

ಕಾಂಗ್ರೆಸ ಕಾರ್ಯಸಮಿತಿಯು ಮದರಾಸ ಮತ್ತು ಪಶ್ಚಿಮ ಬಂಗಾಲ ಪರಿಸ್ಥಿತಿಯ ಬಗ್ಗೆ ಕೂಲಂಕಷವಾಗಿ ವಿಚಾರಮಾಡಿ ಎರಡು ಮಹತ್ವದ ಗೊತ್ತುವಳಿಗಳನ್ನು ೨೬ ಕ್ಕೆ ಸ್ವೀಕರಿಸಿತು. ಅವುಗಳ ಮುಖ್ಯಾಶಯವಿಂತಿದೆ. ಹಿಂದುಸ್ಥಾನದ ಶಾಸನ ೧೯೫೦ ನೆಯ ಇಸ್ವಿಯ ಕಾಯದೆಯನ್ವಯ ಬರುವ ೬ ತಿಂಗಳುಗಳಲ್ಲಿ ಪಶ್ಚಿಮ ಬಂಗಾಲದಲ್ಲಿ ಶಾಸನಸಭೆಗಳ ಹೊಸ ಚುನಾವಣೆಯನ್ನು ನಡೆಸಬೇಕು. ಹೊಸ ಚುನಾವಣೆಗಳನ್ನನುಲಕ್ಷಿಸಿ ತಕ್ಕ ಸಮಯದಲ್ಲಿ ಸದ್ಯದ ಶಾಸನ ಸಭೆಗಳನ್ನು ವಿಸರ್ಜಿಸಬೇಕಲ್ಲದೆ ಈ ಅವಧಿಯಲ್ಲಿ ಪ್ರಾಂತದ ಅತ್ಯಂತ ಬುದ್ಧಿವಂತ ಜನರು (ಅವರು ಶಾಸನಸಭೆಯ ಸದಸ್ಯರಿರಬೇಕೆಂಬ ನಿಯಮವಿಲ್ಲ) ಹೊಸ ನಡುಗಾಲ ಮಂತ್ರಿಮಂಡಲವನ್ನು ನಿಯಮಿಸಬೇಕು. ಹೊಸ ಚುನಾವಣೆಗಳು ಆಗುವವರೆಗೆ ಲಕ್ಷಿಸಿ ಇನ್ನುಮುಂದೆ ಉಪಚುನಾವಣೆಗಳನ್ನು ಮಾಡತಕ್ಕದ್ದಲ್ಲ. ಅದೇ ರೀತಿಯಾಗಿ ಬಂಗಾಲ ಪ್ರಾಂತೀಯ ಕಾಂಗ್ರೆಸ ಸಮಿತಿಯನ್ನು ಪುನರ್ಘಟಿಸಬೇಕೆಂದು ಮುಂತಾಗಿ ಬಂಗಾಲದ ಬಗ್ಗೆ ಇರುವ ಗೊತ್ತುವಳಿಯಲ್ಲಿ ಹೇಳಲಾಗಿದೆ. ಮದರಾಸ ಸರಕಾರದ ಕೆಲಮಂತ್ರಿಗಳ ಸಂಬಂಧದಲ್ಲಿ ಇರುವ ದೂರುಗಳ ಬಗ್ಗೆ ಮುಖ್ಯಮಂತ್ರಿಗಳಾದ ಶ್ರೀ ಕುಮಾರಸ್ವಾಮಿ ರಾಜಾ ಇವರು ಶ್ರೀ ಟಿ. ಪ್ರಕಾಶಂ ಮತ್ತು ಅವರ ಸ್ನೇಹಿತರು ಮಂತ್ರಿಮಂಡಲದ ವಿರುದ್ಧ ಮಾಡಿದ ಆರೋಪಗಳ ಬಗ್ಗೆ ವಿಚಾರಣೆ ನಡೆಸತಕ್ಕದ್ದು ಮತ್ತು ಅಗಷ್ಟ ೧೫ ರೊಳಗಾಗಿ ವರದಿಯನ್ನು ಒಪ್ಪಿಸತಕ್ಕದ್ದು. ಹೀಗೆ ವಿಚಾರಣೆ ಮಾಡುವಾಗ ಮುಖ್ಯಮಂತ್ರಿಗಳು ಪ್ರಕಾಶಂ ಗುಂಪಿನವರಿಗೆ ತಮ್ಮ ಪಕ್ಷವನ್ನು ಮಂಡಿಸಲು ಪೂರ್ಣ ಅವಕಾಶ ಕೊಡುವರೆಂದು ನಂಬಲಾಗಿದೆ. ಈ ವರದಿಯು ಬಂದ ಬಳಿಕ ವಿಚಾರಣೆ ಮಂಡಲವನ್ನು ನೇಮಿಸುವದನ್ನೊಳಗೊಂಡು ಇತರ ಅವಶ್ಯಕ ಉಪಾಯ ಕೈಕೊಳ್ಳಲು ಪಂಡಿತ ಜವಾಹರಲಾಲ, ಸರದಾರ ವಲ್ಲಭಭಾಯಿ ಮತ್ತು ಬಾಬೂ ರಾಜೇಂದ್ರಪ್ರಸಾದರ ಉಪಸಮಿತಿಯನ್ನು ನೇಮಿಸುತ್ತದೆಂದೂ ಈ ಗೊತ್ತುವಳಿಯಲ್ಲಿ ಹೇಳಲಾಗಿದೆ.

ಮೈಸೂರು ಮಂತ್ರಿಮಂಡಲ

ಮೈಸೂರು ಸಂಸ್ಥಾನದ ಮಂತ್ರಿಗಳ ಮೇಲೆಯೂ ಗಂಭೀರ ಸ್ವರೂಪದ ಆರೋಪಗಳು ಮಾಡಲಾಗುತಿವೆ. ಇದೇ ತಿಂಗಳು ೭ನೇ ತಾರೀಕು ಸಂಸ್ಥಾನದ ದಿವಾಣರಾದ ರಾಮಸ್ವಾಮಿ ಮುದ್ಲಿಯಾರರು ನಿವೃತ್ತರಾಗಲಿದ್ದು ಇನ್ನು ಮುಂದೆ ದಿವಾಣರ ಸ್ಥಾನವನ್ನೇ ರದ್ದುಪಡಿಸಬೇಕೆಂದು ನಿರ್ಧರಿಸಲಾಗಿದೆ. ಇದೇ ಸಮಯದಲ್ಲಿ ಮಂತ್ರಿಮಂಡಲದ ಪುನರ್ಘಟನೆ ಮಾಡಬೇಕೆಂದು ಯೋಜಿಸಲಾಗಿದೆಯೆಂದು ತಿಳಿಯುತ್ತದೆ. ಮುಖ್ಯಮಂತ್ರಿಗಳಾದ ಶ್ರೀ ಚಂಗಲರಾಯ ರೆಡ್ಡಿಯವರು ದಿಲ್ಲಿಗೆ ಹೋಗಿದ್ದು ಕೇಂದ್ರ ಸರಕಾರದ ಮಂತ್ರಿಗಳೊಡನೆ ಚರ್ಚೆ ನಡೆಸಿದ್ದಾರೆ. ಸಾಮಾನ್ಯವಾಗಿ ಇಡೀ ಮಂತ್ರಿಮಂಡಲದ ಮೇಲೆ ಒಂದಿಲ್ಲೊಂದು ಬಗೆಯ ಆರೋಪಗಳಿದ್ದರೂ ಪಟಣಶಾಸಿನ ಮಂತ್ರಿ ಶ್ರೀ ದಾಸಪ್ಪ ಮತ್ತು ಕಂದಾಯ ಮಂತ್ರಿ ಸಿದ್ದಯ್ಯ ಇವರ ಮೇಲೆ ಗಂಭೀರವಾದ ಆರೋಪಗಳಿವೆಯೆಂದು ಹೇಳಲಾಗುತ್ತದೆ. ಸಾಮಾನ್ಯವಾಗಿ ಆಡಳಿತೆಯಲ್ಲಿ ಬಿಗುಪು ಕಡಿಮೆಯಾಗಿದ್ದು ಲಂಚ ರುಸುವತ್ತುಗಳು ಎಡೆಬಿಡದೆ ಸಾಗಿವೆ. ಸರಕಾರದ ಆಹಾರ ವಿತರಣದ ರೀತಿಯು ಸಮರ್ಪಕವಾಗಿಲ್ಲ. ಆಡಳಿತೆಯ ವೆಚ್ಚವು ದಿನದಿನಕ್ಕೆ ಹೆಚ್ಚುತಿದ್ದು ಮಂತ್ರಿಮಂಡಳದಲ್ಲಿ ಜಾತೀಯ ಭಾವನೆಯು ಹೆಚ್ಚುತಿದೆ. ಇವನ್ನೆಲ್ಲ ತಡೆಯುವ ಬಗ್ಗೆ ಸೂಕ್ತ ಕ್ರಮ ಕೈಕೊಳ್ಳುವದವಶ್ಯವಾಗಿದೆಯೆಂದು ಬೇರೆ ಹೇಳಬೇಕಿಲ್ಲ. ಈ ಸಂಬಂಧದಲ್ಲಿ ಬೆಂಗಳೂರು ಜಿಲ್ಹಾ ಕಾಂಗ್ರೆಸ ಕಾರ್ಯಕರ್ತರು ಕೂಲಂಕಷ ವಿಚಾರ ಮಾಡಿ ಒಂದು ಗೊತ್ತುವಳಿಯನ್ನು ಸ್ವೀಕರಿಸಿದ್ದಾರೆ. ಅವರ ದೃಷ್ಟಿಯಿಂದ ಮಂತ್ರಿಮಂಡಲದ ಮೇಲಿನ ಆರೋಪಗಳಿಂತಿವೆ. ಗಂಧದ ಸಾಬೂನಗಳ ಏಜನ್ಸಿಯು ಇಂಗ್ಲಿಶ ಕಂಪನಿಯ ವಶದಲ್ಲಿದ್ದರೂ ಅವಧಿ ಮುಗಿವ ಪೂರ್ವದಲ್ಲಿಯೆ ಟೆಂಡರು ಕರೆದು ಮಂತ್ರಿಗಳ ಸಂಬಂಧಿಕರಿಗೆ ಏಜನ್ಸಿಯನ್ನು ಕೊಡಲಾಯಿತು. ರೈತರಿಗೆ ಗೊಬ್ಬರ ಸರಿಯಾಗಿ ಸಿಗುತಿಲ್ಲ. ಆ ಗೊಬ್ಬರ ಬೇರೆ ಕಡೆಗೆ ಹೋಗಿ ಕಳ್ಳ ಪೇಟೆಯಲ್ಲಿ ಮಾರಲ್ಪಡುತ್ತದೆ. ೨೪ ಕೋಟಿ ರೂಪಾಯಿ ಕಾದಿಟ್ಟ ನಿಧಿಯಲ್ಲಿ ಬಹಳಷ್ಟು ವೆಚ್ಚವಾಗಿ ಸರಕಾರಿ ನೋಕರರಿಗೆ ಸಂಬಳ ಕೊಡಲು ಹಣವಿಲ್ಲದೆ ಅದು ಮೈಸೂರು ಬ್ಯಾಂಕಿನಿಂದ ಸಾಲ ಪಡೆಯುವ ಪ್ರಸಂಗ ಬಂದಿತು. ಮಂತ್ರಿಗಳ ಸಂಬಂಧಿಕರಿಗೆ ಮಿತಿಮೀರಿ ಸಂಬಳ ಕೊಡಲಾಗುತ್ತದೆ. ಶ್ರೀ ಆದಿರಾಮಯ್ಯನವರು ಭಾಷಣ ಮಾಡುತ್ತ ಈ ಆರೋಪಗಳನ್ನು ಮಂತ್ರಿಗಳ ಲಕ್ಷಕ್ಕೆ ತಂದಿದ್ದರೂ ಪ್ರಯೋಜನವಾಗಿಲ್ಲೆಂದು ಹೇಳಿದರು. ಇರದಿನೆ ಕಾಂಗ್ರೆಸ ಮುಖಂಡರ ಮೇಲೆಯೂ ಮಂತ್ರಿಮಂಡಲದ ಮೇಲೆಯೂ ಶಿಸ್ತಿನ ಕಾರ್ಯಕ್ರಮ ಕೈಕೊಳ್ಳಬಹುದೆಂದು ಭಾವಿಸುವ ಅನೇಕ ಕಾರ್ಯಗಳು ಸಾರ್ವತ್ರಿಕವಾಗಿ ಚರ್ಚಿಸಲ್ಪಡುತಿವೆ ಹಾಗು ಪ್ರಕಟಿಸಲ್ಪಡುತಿವೆ. ಕಾರಣ ಅ. ಭಾ. ಕಾಂಗ್ರೆಸ ಅಧ್ಯಕ್ಷರು ಇದರಲ್ಲಿ ಕೈಹಾಕಿ ತಕ್ಕ ಕ್ರಮ ಕೈಕೊಳ್ಳಬೇಕು ಎಂದು ಶ್ರೀ ರುಮಾಲೆಯವರು ತಂದ ಗೊತ್ತುವಳಿ ಸ್ವೀಕೃತವಾಯಿತು. ಸದ್ಯದ ಮಂತ್ರಿಮಂಡಲವನ್ನು ಉರುಳಿಸಲು ಕೆಲ ಸರಕಾರೀ ಅಧಿಕಾರಿಗಳೂ ನಿವೃತ್ತ ಅಧಿಕಾರಿಗಳೂ ಏನೇನೋ ಮಾಡುತಿರುವರೆಂದೂ ಸರಕಾರಿ ರಹಸ್ಯಗಳನ್ನು ಮಂತ್ರಿಗಳ ಆಳಿಯಂದಿರೊಬ್ಬರು ಹೊರಗೆಡಹುತಿರುವರೆಂದೂ ಭಾಷಣಕಾರರು ದೂರಿದರು. ಮಹತ್ವದ ಘಟನೆಗಳು ಮುಂದಿನ ವಾರದಲ್ಲಿ ಸಂಭವಿಸಲಿವೆ.

ಕರ್ನಾಟಕ ಯುವಕ ಪರಿಷತ್ತು

ಕರ್ನಾಟಕ ಯುವಕ ಪರಿಷತ್ತಿನ ಮೂರನೆಯ ಅಧಿವೇಶನವು ದಾವಣಗೆರೆಯಲ್ಲಿ ೨೬ ಕ್ಕೆ ಜರುಗಿತು. ಹಿಂದುಸ್ಥಾನ ಸಮಾಜವಾದೀ ರಿಪಬ್ಲಿಕನ್ ಪಕ್ಷದ ಸಂಸ್ಥಾಪಕ ಅಧ್ಯಕ್ಷರಾದ ಬಾಬೂ ಶರಚ್ಚಂದ್ರ ಬೋಸರು ಪರಿಷತ್ತನ್ನು ಪ್ರಾರಂಭಿಸಿದರು. ಕರ್ನಾಟಕ ಸ್ವತಂತ್ರ ಪ್ರಾಂತ ಸ್ಥಾಪನೆಗಾಗಿ ಪ್ರಯತ್ನಿಸುವದೇ ಪರಿಷತ್ತಿನ ಮುಖ್ಯ ಧ್ಯೇಯವಾಗಿದ್ದರಿಂದ ಶರಚ್ಚಂದ್ರ ಬೋಸರು ಅದೇ ವಿಷಯವನ್ನೆತ್ತಿ ಮಾತಾಡಿದರು. ಕಾಂಗ್ರೆಸ್ಸು ಜನತೆಗೆ ಕೊಟ್ಟ ವಚನವನ್ನು ಸಾಧ್ಯವಿದ್ದಷ್ಟು ಮಟ್ಟಿಗೆ ಬೇಗನೆ ಪೂರೈಸಬೇಕು ಇಲ್ಲದಿದ್ದರೆ ಜನತೆಯಲ್ಲಿ ಅಸಂತೃಪ್ತಿಯು ಹೆಚ್ಚಾಗಿ ಚಳವಳಿ ನಡೆಯುವದು. ಇದರಿಂದ ದೇಶದ ಅಭಿವೃದ್ಧಿಗಾಗಿ ತೊಡಗಬೇಕಾದ ಜನತೆಯ ಚೈತನ್ಯವು ಆಂದೋಲನಗಳಲ್ಲಿ ನಾಶವಾಗುವದು ಎಂದು ಮುಂತಾಗಿ ಅವರು ಭಾಷಣ ಮಾಡುತ್ತ ಹೇಳಿದರು. ನಿಯೋಜಿತ ಅಧ್ಯಕ್ಷರಾದ ಶ್ರೀ ಎಸ್. ವಿ. ಕೃಷ್ಣಮೂರ್ತಿರಾವ ಇವರು ಬಾರದ್ದರಿಂದ ಹಾಸನದ ಕೆ. ಎಂ. ರುದ್ರಪ್ಪನವರು ಅಧ್ಯಕ್ಷರಾಗಿ ಕೆಲಸ ನಡೆಸಿದರು. ಶ್ರೀ ನಿಜಲಿಂಗಪ್ಪ ಮತ್ತೂ ಕೆ. ಆರ್. ಕಾರಂತರೂ ಪರಿಷತ್ತಿಗೆ ಬಂದಿದ್ದರು. ಸ್ವಾಗತಾಧ್ಯಕ್ಷರಾದ ಶ್ರೀ. ವೀರಭದ್ರಪ್ಪನವರು ಎಲ್ಲರನ್ನು ಸ್ವಾಗತಿಸುತ್ತ ಕನ್ನಡ ನಾಡಿನಲ್ಲಿ ಮಂಗಳೂರಿನವರು, ಧಾರವಾಡದವರು, ಮೈಸೂರಿನವರು ಎಂದು ಮುಂತಾಗಿ ಭೇದಭಾವ ಮಾಡದೆ ಇಡಿ ಕನ್ನಡ ಕುಲದ ಕಲ್ಯಾಣಕ್ಕಾಗಿ ದುಡಿಯುವದೇ ನಮ್ಮ ದೃಷ್ಟಿಕೋನವಾಗಬೇಕೆಂದು ಹೇಳಿ ಕರ್ನಾಟಕ ಒಂದಾಗಿಸುವ ತಮ್ಮ ಪ್ರಯತ್ನವನ್ನು ಯಾವ ಶಕ್ತಿಯೂ ತಡೆಯಲಾರದೆಂದು ಹೇಳಿದರು. ಅಧ್ಯಕ್ಷರಾದ ಶ್ರೀ ರುದ್ರಪ್ಪನವರು ಕಳಿಂಗ, ವಂಗ, ಕರ್ನಾಟಕ ಮೊದಲಾದ ಪುರಾಣ ಕಾಲದ ಹೆಸರು ನೋಡಿದರೆ ಭಾರತವು ಹಿಂದೆ ಭಾಷಾನ್ವಯವಾಗಿ ವಿಭಜಿಸಲ್ಪಟ್ಟಿತ್ತೆಂದೂ ಗೊತ್ತಾಗುವದೆಂದೂ ಮೈಸೂರನ್ನು ಪ್ರತ್ಯೇಕವಾಗಿಡುವದರಿಂದ ಯಾವ ಲಾಭವಿದೆ? ಎಂದು ಮುಂತಾಗಿ ಪ್ರತಿಪಾದಿಸಿ ಮೈಸೂರು ಸಂಸ್ಥಾನವು ಅಳಿಯಲೇಬೇಕೆಂದು ಹೇಳಿದರು. ಮೈಸೂರು ಮತ್ತು ಹೈದರಾಬಾದ ಸಂಸ್ಥಾನಗಳು ಭಾರತದಲ್ಲಿ ವಿಲೀನವಾಗಬೇಕು ಹೊಸಘಟನೆಯಲ್ಲಿ ಸ್ವತಂತ್ರ ಕರ್ನಾಟಕ ಪ್ರಾಂತದ ನಾಮನಿರ್ದೇಶವಾಗಬೇಕು ಎಂಬಾಶಯದ ಮುಖ್ಯ ಗೊತ್ತುವಳಿಯು ಸ್ವೀಕೃತವಾಯಿತು. ಕರ್ನಾಟಕದ ವಿವಿಧ ಭಾಗಗಳಿಂದ ಸಾವಿರಾರು ಪ್ರತಿನಿಧಿಗಳು ಪರಿಷತ್ತಿಗೆ ಬಂದಿದ್ದರು. ಶರಚ್ಚಂದ್ರರು ದಾವಣಗೇರಿಯಿಂದ ಹುಬ್ಬಳ್ಳಿ ಧಾರವಾಡ ಬೆಳಗಾವಿಗಳಿಗೆ ಭೆಟ್ಟಿ ಕೊಟ್ಟರು. ಸದ್ಯದ ಸರಕಾರದಲ್ಲಿ ಲಂಚಗುಳಿತನ, ಕಳ್ಳಪೇಟೆ, ವಶೀಲಿ ಮೊದಲಾದವುಗಳು ಹೆಚ್ಚಾಗಿದ್ದು, ಇದು ಬಂಡವಲುದಾರರ ಸರಕಾರವಾಗಿದೆ. ಇದರ ಬದಲು ಸಮಾಜವಾದೀ ಸರಕಾರವನ್ನು ಸ್ಥಾಪಿಸಬೇಕು, ಇದಕ್ಕಾಗಿ ಎಲ್ಲರೂ ಸಂಘಟಿತರಾಗಬೇಕು ಎಂದು ಹುಬ್ಬಳ್ಳಿಯಲ್ಲಿ ಹೇಳಿದರು. ಸುಭಾಷಚಂದ್ರರ ಸಂಬಂಧದಲ್ಲಿ ಕೇಳಿದ ಪ್ರಶ್ನೆಗೆ, ಸುಭಾಷರು ಸತ್ತಿಲ್ಲೆಂದು ತಮಗೆ ಈಗಲೂ ಎನಿಸುತ್ತದೆ. ವಿಮಾನ ಅಪಘಾತದ ಸುದ್ದಿಯು ಸುಳ್ಳೆಂದು ಇತ್ತೀಚೆ ತಮಗೆ ಇಬ್ಬರ ಮುಖನೀಯರಿಂದ ತಿಳಿದು ಬಂದಿದೆ. ಸಮಯ ಸಾಧಿಸಿ ಸುಭಾಷರು ಪ್ರಕಟರಾಗುವರೆಂದು ತಮಗೆ ವಿಶ್ವಾಸವಿದೆ ಎಂದು ಮುಂತಾಗಿ ಹೇಳಿದರು. ಶರಚ್ಚಂದ್ರರೊಡನೆ ಅವರ ಪತ್ನಿಯೂ ಇದ್ದರು.

ಸಯ್ಯದ ಕಾಸೀಮ ರಜವಿ

ಹೈದರಾಬಾದದ ರಜಾಕಾರ ತಂಡದ ಧುರೀಣರಾಗಿದ್ದ ಸಯ್ಯದ ಕಾಸೀಮ ರಜವಿಯವರ ವಿಚಾರಣೆಯು ೨೭ ನೇ ತಾರೀಕಿನ ದಿವಸ ತಿರುಮಲಗಿರಿಯ ಬ್ರಿಟಿಶ ಮಿಲಿಟರಿ ಅಸ್ಪತ್ರೆಯ ಕಟ್ಟಡದಲ್ಲಿ ಮೂವರ ವಿಶೇಷ ನ್ಯಾಯಮಂಡಲದ ಮುಂದೆ ಪ್ರಾರಂಭವಾಗಿದೆ. ಇಮ್ರೋಜ ಪತ್ರಿಕೆಯ ಸಂಪಾದಕರಾಗಿದ್ದ ಶೋಬುಲ್ಲಾಖಾನರ ಕೊಲೆಯ ಪ್ರಚೋದನೆಯ ಆರೋಪದಿಂದ ವಿಚಾರಣೆ ಪ್ರಾರಂಭವಾಯಿತು. ಈ ಖಟ್ಲೆಯಲ್ಲಿ ಒಟ್ಟಿಗೆ ಆರು ಆರೋಪಿಗಳಿದ್ದು ಅವರಲ್ಲಿ ಇಬ್ಬರು ಫರಾರಿಯಾಗಿದ್ದು ಒಬ್ಬನು ಮಾಫಿ ಸಾಕ್ಷಿದಾರನಾಗಿರುವನು. ರಜವಿಯ ಪರವಾಗಿ ಬ್ಯಾ. ಅಸ್ಕರ ಯಾರ ಜಂಗ ಬಹಾದ್ದೂರರು ಮುಖ್ಯ ವಕೀಲರೆಂದು ಖಟ್ಲೆ ನಡೆಸುತಿರುವರು. ಮದರಾಸದ ಪಬ್ಲಿಕ್ ಪ್ರಾಸಿಕ್ಯೂಟರರಾದ ಯತಿರಾಜ ಇವರು ಪಬ್ಲಿಕ್ ಪ್ರಾಸಿಕ್ಯೂಟರರೆಂದು ಕೆಲಸ ಮಾಡುತಿರುವರು. ಶೋಬುಲ್ಲಾಖಾನರ ರಾಜಕೀಯ ಧೋರಣವು ತಮ್ಮ ಸರ್ವಾಧಿಕಾರಿತ್ವಕ್ಕೆ ಧಾಗತರುತಿರುವದೆಂದು ಕಾಸಿಂ ರಜವಿಯವರು ಅವರ ಕೊಲೆಗೆ ಪ್ರಚೋದನೆ ಕೊಟ್ಟರು. ಇದರಲ್ಲಿ ಅವರು ಮಾಫೀ ಸಾಕ್ಷಿದಾರ ಖಾದರ ಮೊಹಿಯುದ್ದೀನನ್ನು ವಿಶ್ವಾಸದಲ್ಲಿ ತೆಗೆದುಕೊಂಡರು. ಕೆಲ ರಜಾಕಾರರ ಸಹಾಯದಿಂದ ಅವರ ಕೊಲೆಮಾಡಲು ವಿಧಿಸಿದರು. ಮತ್ತು ಅವರಿಗೆ ಪಿಸ್ತೂಲು ಕಾಡತೂಸುಗಳನ್ನು ಕೊಟ್ಟರು. ಇದರ ಪರಿಣಾಮವಾಗಿ ೫—೨—೩—೪ ನೇ ಆರೋಪಿಗಳು ಶೋಬುಲ್ಲಾಖಾನರಿಗೆ ೧೯೪೭ ಅಗಷ್ಟ ೨೨ ಕ್ಕೆ ರಾತ್ರಿ ೧-೧೫ ಗಂಟೆಗೆ ಬರಕತಪುರದಲ್ಲಿ ಪ್ರಾಣಾಂತಿಕ ಗಾಯ ಮಾಡಿದರು, ಎಂಬುದು ಈ ಸಂಬಂಧದ ಆರೋಪವಿದೆ. ಹೈದರಾಬಾದ ಕೋರ್ಟಿನ ಭಾಷೆ ಉರ್ದು ಇದ್ದು ವಿಶೇಷ ನ್ಯಾಯಮಂಡಲದ ಭಾಷೆಯು ಇಂಗ್ಲಿಶ ಇರಬೇಕೆಂದು ವಿಧಿಸಲ್ಪಟ್ಟಿದ್ದರಿಂದ ಅವಶ್ಯಕ ಬದಲಾವಣೆಯನ್ನು ಮಾಡಲಾಗುವದು. ಸೂಟಿ ದಿನಗಳನ್ನು ಬಿಟ್ಟು ಪ್ರತಿದಿನ ಮುಂಜಾನೆ ೧೦-೩೦ ರಿಂದ ೪—೩೦ ರವರೆಗೆ ಕೋರ್ಟು ಕೆಲಸ ಮಾಡುವದೆಂದು ಸಾರಲಾಯಿತು. ಕಾಸಿಂ ರಜವಿಯವರಿಂದ ಸಲಹೆ ತೆಗೆದುಕೊಳ್ಳಲು ತಮಗೆ ಅವರ ಭೆಟ್ಟಿಯ ಅವಕಾಶ ಕೊಡಬೇಕೆಂದು ವಕೀಲರು ಕೋರ್ಟಿಗೆ ಕೇಳಿಕೊಂಡದ್ದಕ್ಕೆ ಯೋಗ್ಯ ಸವಲತ್ತುಗಳನ್ನೆಲ್ಲಾ ಕೊಡಲಾಗುವದೆಂದು ಕೋರ್ಟಿನವರು ಆಶ್ವಾಸಿಸಿದರು. ಶ್ರೀ ಜೆ. ಎ. ಪಿಂಟೋ, ಮುಹಮ್ಮದ ಅಲ್ಲೀಖಾನ ಮತ್ತು ಜಗನ್ನಾಥರಾವ ಇವರು ನ್ಯಾಯಮಂಡಲದ ಸದಸ್ಯರಾಗಿರುವರು. ಇವರೆಲ್ಲ ನ್ಯಾಯಾಧೀಶರು.

ಕಾಂಗ್ರೆಸ್ಸಿಗೆ ಆದದ್ದೇನು?

ಹಳೆಯ ಧ್ಯೇಯವಾದ ಹೋಗಿದೆ— ಪಕ್ಷದೊಳಗೆ ನಾನಾ ಸತ್ವಗಳು ಸೇರಿ ಗೊಂದಲವಾಗಿದೆ

— ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಶಂಕರರಾವ್ ದೇವರಿಂದ —

ಮೂರು ಲೇಖಾಂಕಗಳಲ್ಲಿ ಶ್ರೀ ದೇವರವರು ಕಾಂಗ್ರೆಸ್ಸಿಗೆ ದೇಶದಲ್ಲಿ ಬಂದ ಅಪವಾದಗಳನ್ನು ಚರ್ಚಿಸಿ "ಹಿಂದುಸ್ಥಾನ ಟೈಮ್ಸ್" ಪತ್ರಿಕೆಯಲ್ಲಿ ಬರೆದ ವಿಚಾರಪೂರ್ಣ ಲೇಖನದ ಮೊದಲೆರಡು ಭಾಗಗಳು ಇಲ್ಲಿ ಸಂಕ್ಷೇಪಿಸಿ ಕೊಡಲ್ಪಟ್ಟಿವೆ. ಮುಂದಿನ ಸಂಚಿಕೆಯಲ್ಲಿ ಬರುವ ಮೂರನೆ ಭಾಗದಲ್ಲಿ ಅವರು ಇದಕ್ಕೆ ಪರಿಹಾರೋಪಾಯಗಳನ್ನು ಸೂಚಿಸಿದ್ದಾರೆ.

ಸಾರ್ವಜನಿಕರು ನಿಶ್ಚಯವನ್ನು ಇಂದು ಮರೆಯುತ್ತಾರೆ. ಆದ್ದರಿಂದ ಈಚೆಗೆ ನಡೆದ ಚುನಾವಣೆಗಳಲ್ಲೆಲ್ಲ ಕಾಂಗ್ರೆಸ್ಸು ಸೋಲು ತಿಂದಿದೆಯೆಂದೇ ಭಾವಿಸಲಾಗಿದೆ. ಆದರೆ ನಿಜವಾಗಿ ಕಾಂಗ್ರೆಸ್ಸು ಕಳೆದುಕೊಂಡದ್ದಕ್ಕಿಂತ ಹೆಚ್ಚು ಸಂಪಾದಿಸಿದೆ. ಆದರೆ ಕೆಲವರಿಂದ ಗೆಲ್ಲ ವಿಗೇರುತಿದ್ದ ಕಾಂಗ್ರೆಸ್ಸನ್ನು ಕಂಡ ರಾಷ್ಟ್ರಕ್ಕೆ ಮುಂಬಯಿಯಲ್ಲಿ, ಅದಕ್ಕೂ ಮಿಗಿಲಾಗಿ ಕಲಕತ್ತೆಯಲ್ಲಿ ಈಚೆಗೆ ಆದ ಪಕ್ಷದ ಸೋಲಿನಿಂದ ಬೆಚ್ಚಿಬೀಳುವಂತಾಗಿದೆ. ಕಾಂಗ್ರೆಸ್ಸಿನ ಗೆಳೆಯರೂ ವೈರಿಗಳೂ ಅದರ ಮೇಲೆ ಸ್ವಾಭಾವಿಕವಾಗಿ ತೀಕ್ಷ್ಣ ಟೀಕೆಗಳನ್ನು ಮಾಡುತ್ತಾರೆ.

ಅತೀವ ಆಶೋತ್ತರ

ಕಲಕತ್ತೆಯ ಸೋಲು ಜನತೆಗೆ ಕಾಂಗ್ರೆಸ್ಸಿನ ಮೇಲೆ ಬಂದಿರುವ ಸಿಟ್ಟನ್ನು ತೋರಿಸುತ್ತದೆ. ಇದು ಆ ಒಂದು ಮತದಾರ ಸಂಘಕ್ಕೆ ಮಾತ್ರ ಸೀಮಿತವಾಗಿರದೆ ಇಡಿ ದೇಶದಲ್ಲಿ ಹಬ್ಬಿದ ಸ್ಥಿತಿ. ಸ್ವಾತಂತ್ರ್ಯ ದೊರೆತ ಕೂಡಲೆ ಬಡತನ, ಕೊರತೆಗಳು ಬೆಳಗಿನ ಸೂರ್ಯನ ಮುಂದೆ ಮಂಜು ಮಾಯವಾಗುವಂತೆ ಆಗುವವೆಂದು ಜನರು ಬಗೆದಿದ್ದರು. ಈ ಮಹಾ ಆಶೆಗೆ ಕಾಂಗ್ರೆಸ್ಸಿಗರೂ ಕಾರಣರಾಗಿದ್ದರು. ಮಹಾತ್ಮಾ ಗಾಂಧಿಯವರು ಉಪದೇಶಿಸಿದ ರಚನಾತ್ಮಕ ಕಾರ್ಯಕ್ರಮವನ್ನು ಅನೇಕ ಕಾಂಗ್ರೆಸ್ಸಿಗರು ಅಲಕ್ಷಿಸಿಬಿಟ್ಟಿದ್ದರು. ಪರಿಣಾಮವಾಗಿ ಮನೋರಥ ಸಿದ್ಧಿಸಬೇಕಾದರೆ ಜನರು ದುಡಿಯಬೇಕು, ಹುಬ್ಬಿನ ಬೆವರು ಹರಿಸಬೇಕು ಎಂಬ ಶಾಶ್ವತ ನಿಯಮವು ಜನರಿಗೆ ಮನವರಿಕೆಯಾಗಲೇ ಇಲ್ಲ.

ನಾವೇನೋ ಪ್ರಜಾತಂತ್ರವನ್ನು ಸ್ವೀಕರಿಸಿದ್ದೇವೆ. ಇದು ಯುಕ್ತವೂ ಹೌದೆಂಬುದು ನಮ್ಮ ನಂಬಿಕೆ. ಆದರೆ ಪ್ರಜಾತಂತ್ರದ ಬೆಳವಣಿಗೆಯ ನಿಯಮಗಳು ನಮಗೆ ಅಷ್ಟು ಪರಿಚಿತವಾಗಿಲ್ಲವೆಂದು ಒಪ್ಪಲೇಬೇಕು. ಅದರ ಬೆಳವಣಿಗೆ ಮಂದಗತಿಯದೆಂಬಲ್ಲಿ ಸಂದೇಹವಿಲ್ಲ. ಅದೊಂದು ಶಿಕ್ಷಣಪ್ರಣಾಲಿ. ಪ್ರಜಾತಂತ್ರಗಳು ರಾತ್ರಿ ಬೆಳಗಾಗುವುದರೊಳಗೆ ಕಟ್ಟಬಲ್ಲ ಸೌಧಗಳಲ್ಲ. ನಮ್ಮಲ್ಲಿ ಶ್ರದ್ಧೆ, ಸ್ಥಿರತೆ, ಸತತೋದ್ಯೋಗ, ಧೈರ್ಯಗಳು ಇರಬೇಕು. ನಮ್ಮಲ್ಲಿ ಸಹಿಷ್ಣುತೆಯೂ ಬೇಕು. ಎಲ್ಲಕ್ಕಿಂತ ಹೆಚ್ಚಾಗಿ ನಮಗೆ ವಿರುದ್ಧವಾಗಿ ಅದರ ಪರಿಣಾಮವಾಗಿದೆಯೆಂದು ಕಂಡರೂ ನಾಗರಿಕರು ಘಟನೆಗೆ ತಲೆಬಾಗಬೇಕು.

ಕಾಂಗ್ರೆಸ್ಸಿಗೆದುರಾದ ಸಮಸ್ಯೆಗಳು

ಕಾಂಗ್ರೆಸಿನ ಮೇಲೆ ಕ್ರುದ್ಧರಾಗುವವರು ಸ್ವಲ್ಪ ವಿಶಾಲ ದೃಷ್ಟಿಯಿಂದ ನೋಡಬೇಕು. ಎರಡನೆ ಮಹಾಯುದ್ಧ ಮುಗಿದೊಡನೆ ನಮಗೆ ಸ್ವಾತಂತ್ರ್ಯ ಸಿಕ್ಕಿತು. ನಮ್ಮನ್ನು ಆಕ್ರಮಿಸಿರುವ ಆಹಾರ ಕೊರತೆ, ಅತಿಪ್ರಸರಣ, ಕಳ್ಳಪೇಟೆ, ಲಂಚಗುಳಿತನ, ಗಲಭೆ ಶ್ರೀಮಂತಿಕೆಯ ಜೀವ ಇವು ನಮ್ಮಂತೆ ಅನೇಕ ರಾಷ್ಟ್ರಗಳನ್ನು ಕಾಡುತಿವೆ. ಹಾಗೆ ನೋಡಿದರೆ ಅವರಿಗಿಂತ ನಾವೇ ಎಷ್ಟೋ ವಾಸಿ. ಇದು ಸಾಲದೆಂಬಂತೆ ದೇಶದ ವಿಭಜನೆಯಾಗಿ ಲಕ್ಷಾಂತರ ಜನರು ನಿರಾಶ್ರಿತರಾದರು. ದೇಶದ ರಾಜಕೀಯ ಐಕ್ಯವನ್ನು ಒಡೆಯುವ ಸಮಸ್ಯೆಯೂ ಉಂಟಾಯಿತು. ಅದನ್ನು ಜನತೆಗೂ ನರೇಂದ್ರರಿಗೂ ತೃಪ್ತಿಕರವಾಗುವಂತೆ ನಾವು ಬಿಡಿಸಿದ್ದೇವೆ. ಇದು ಆಧುನಿಕ ಇತಿಹಾಸದಲ್ಲೇ ದೊಡ್ಡ ಸಫಲ ಸಾಹಸವೆನ್ನುವಲ್ಲಿ ಸಂಶಯವಿಲ್ಲ. ಈ ತೊಡಕುಗಳ ಮೇಲೆ ಸಧರ್ಮೀಯನೊಬ್ಬನು ರಾಷ್ಟ್ರಪಿತ ಮಹಾತ್ಮಾ ಗಾಂಧಿಯವರನ್ನು ಕೊಲೆ ಮಾಡಿದ್ದರಿಂದ ಒಮ್ಮೆಲೆ ರಾಷ್ಟ್ರಕ್ಕೆ ಕಣ್ಣುಕಟ್ಟಿ ಕಾಡಿನಲ್ಲಿ ಬಿಟ್ಟಂತಾಯಿತು.

ಆದರೆ ದೇಶಕ್ಕೆ ಇಂಥ ವಿಪತ್ತಿಯನ್ನು ತಂದೊಡ್ಡಿದ ಪ್ರತ್ಯೇಕ ಮತದಾನಪದ್ಧತಿಯನ್ನು, ಎಲ್ಲ ಅಲ್ಪಸಂಖ್ಯರ ಒಪ್ಪಿಗೆಯಿಂದ, ಹೊಸ ಘಟನೆಯಲ್ಲಿ ನಾವೀಗ ರದ್ದುಗೊಳಿಸಿದ್ದೇವೆ. ಸಾಮಾಜಿಕ, ಆರ್ಥಿಕ ಕ್ಷೇತ್ರಗಳಲ್ಲಿಯೂ ಕಾಂಗ್ರೆಸ್ಸು ಮಹತ್ಕಾರ್ಯಗಳನ್ನು ಸಾಧಿಸಿದೆ. ಇದು ಕಾಣಲು ಅಷ್ಟು ಅದ್ಭುತವಾಗಿಲ್ಲದಿರಬಹುದು. ಆದರೆ ಎಲ್ಲ ರಚನಾಕಾರ್ಯಗಳೂ ಹಾಗೆಯೆ ಇರುತ್ತವೆ. [illegible] ಇವೆರಡರಲ್ಲೂ ಹಿಂದುಳಿದ, ವಿಭಜನೆಯಿಂದ ಇನ್ನಷ್ಟು ದುರವಸ್ಥೆಗೀಡಾದ ದೇಶದಲ್ಲಿ ನಾವು ಇಷ್ಟು ಸಾಧಿಸಿದ್ದೇ ದೊಡ್ಡದು. ಜಮೀನ್ದಾರಿ ನಿರ್ಮೂಲನ, ಒಕ್ಕಲುಗಳಿಗೆ ಶಾಶ್ವತ ಸಾಗುವಳಿ ಹಕ್ಕುಗಳನ್ನು ಕೊಡಿಸುವದು, ಗ್ರಾಮಪಂಚಾಯತಿಗಳು, ಕೂಲಿಕಾರರ ಅನೇಕ ಸಮಸ್ಯೆಗಳು ಮೊದಲಾದ ಪ್ರಶ್ನೆಗಳನ್ನು ಕಾಯದೆಗಳ ಮೂಲಕ ಬಿಡಿಸುವ ಪ್ರಯತ್ನ ನಡೆದಿದೆ. ಅನೇಕ ನದೀಯೋಜನೆಗಳಿಗಾಗಿ ಕೇಂದ್ರಸರಕಾರ ಕೋಟ್ಯಂತರ ರೂಪಾಯಿಗಳನ್ನು ವ್ಯಯಿಸಿದೆ. ಆದರೆ ಇವೆಲ್ಲ ಕಾರ್ಯಗಳು ಜನರ ಆರ್ಥಿಕ, ಸಾಮಾಜಿಕ, ನೈತಿಕ ಮಟ್ಟವನ್ನೇರಿಸಬೇಕಾದರೆ ಸ್ವಲ್ಪ ಕಾಲ ಬೇಕೇ ಬೇಕು.

ಶಾಂತ ಉಪಾಯಗಳಿಗೆ ಬದ್ಧ

ಆದರೆ ದೂಷಕರು, ಅದರಲ್ಲಿಯೂ ಎಡಪಕ್ಷದವರು ಕೇಳಬಹುದು: "ಇದೆಲ್ಲ ಸರಿ. ಆದರೆ ಸ್ವಾತಂತ್ರ್ಯ ಸಮರಕಾಲದಲ್ಲಿ ಕೊಟ್ಟ ಆರ್ಥಿಕ ಸಾಮಾಜಿಕ ಸಾಮ್ಯದ ಸ್ಥಾಪನೆಯ ವಾಗ್ದಾನವೆಲ್ಲಿ?" ಅವರು ಕರಾಚಿ ಗೊತ್ತುವಳಿಯನ್ನೂ ಕಾಂಗ್ರೆಸ್ ಚುನಾವಣೆ ಘೋಷಣೆಯನ್ನೂ ಬೊಟ್ಟುಮಾಡಿ ತೋರಿಸುತ್ತಾರೆ. ಕ್ರಾಂತಿಕಾರಿ ಕ್ರಮಗಳನ್ನು ಕೈಕೊಳ್ಳುವದು ಬಿಡುವದರಿಂದಲೇ ಕಾಂಗ್ರೆಸ್ಸಿನ ಯಶೋಪಯಶಸ್ಸುಗಳನ್ನು ಅವರು ನಿರ್ಣಯಿಸುವರು. ಜನತಾರಾಜ್ಯದ ನಿರ್ಮಾಣಕ್ಕೆ (ಸಾಮಾಜಿಕ ಆರ್ಥಿಕ ಕ್ರಾಂತಿಯ ಮೂಲಕ) ಕಾಂಗ್ರೆಸ್ಸು ಬದ್ಧವಾಗಿರುವದು ನಿಜ.

ಆದರೆ ಕಾಂಗ್ರೆಸ್ಸು ಶಾಂತ ಪ್ರಜಾತಂತ್ರಾತ್ಮಕ ಉಪಾಯಗಳಿಂದಲೇ ಇದನ್ನು ಸಾಧಿಸಲು ಬದ್ಧವಾಗಿದೆಯೆಂಬುದು ಈ ನಿಂದಕರು ಮರೆಯುತ್ತಾರೆ. ಹಿಂಸೆಯನ್ನೂ ಜನರ ಸ್ವಾತಂತ್ರ್ಯಹರಣವನ್ನೂ ಪಾಶವ ಉಪಾಯಗಳನ್ನೂ ನಾವು ಒಪ್ಪುವದಿಲ್ಲ. ಮಾರ್ಕ್ಸವಾದಿ ಪದ್ಧತಿಯಿಂದ ರಾಷ್ಟ್ರೀಕರಣ ಮಾಡುವದು ಎಷ್ಟು ಹಿತಕಾರಿಯೋ ಸಂಶಯಾಸ್ಪದವಾಗಿಯೆ ಇದೆ. ರಾಷ್ಟ್ರೀಕರಣವೇ ಧ್ಯೇಯವಲ್ಲ, ಅದೊಂದು ಸಾಧನ ಮಾತ್ರ. ಜನತೆಯ ಆರ್ಥಿಕ ಸಾಮಾಜಿಕ ಸ್ವಾತಂತ್ರ್ಯವೇ ಗುರಿ. ಇದಕ್ಕೆ ಗಾಂಧೀಜಿ ಹೇಳಿದ ಆರ್ಥಿಕ ರಾಜಕೀಯ ಅಧಿಕಾರದ ವಿಕೇಂದ್ರೀಕರಣದ ಉಪಾಯವನ್ನು ನಿಯೋಜಿಸಿ ನಾವು ಹೊಸ ಹಾದಿ ತೋರಿಸಬಹುದು. ಅಲ್ಲದೆ ರಾಷ್ಟ್ರೀಕರಣಕ್ಕೆ ಮೊದಲು ಜನತೆ ಒಂದು ನಿಟ್ಟಿನ ಆರ್ಥಿಕ ಸ್ಥಿತಿಯನ್ನೂ ನಾಗರಿಕ ಕರ್ತವ್ಯಬುದ್ಧಿಯನ್ನೂ ಸಂಪಾದಿಸಿರಬೇಕು. ಅದಿಲ್ಲದಿದ್ದರೆ ರಾಷ್ಟ್ರೀಕರಣ ಬರಿ ಸಾರ್ವಜನಿಕ ಹಣದ ಅಪವ್ಯಯವಾದೀತು.

ಅಂದಾಕ್ಷಣ ಕಾಂಗ್ರೆಸ್ಸು ಪ್ರಮಾದಗಳನ್ನು ಮಾಡಿಲ್ಲವೆಂದರ್ಥವಲ್ಲ. ಆದರೆ ಈ ದೇಶ ವಿಶಾಲವಾದುದು. ಅದರ ಸಮಸ್ಯೆಗಳು ವಿವಿಧ ಮತ್ತು ಜಟಿಲವಾದವು. ಮೇಲಾಗಿ ಆಳುವ ಕಲೆ ನಮಗಿನ್ನೂ ಹೊಸದು. ಅದರ [illegible] ಅವಕಾಶವಿಲ್ಲ. ಧೈರ್ಯದಿಂದಲೂ ಉದ್ಯೋಗದಿಂದಲೂ ನಡೆದರೆ ನಮಗೆ ಸಾಫಲ್ಯ ದೊರೆತೇ ತೀರುವದು.

೨

ಸ್ವಾತಂತ್ರ್ಯ ದೊರೆಯುವ ಮೊದಲು ಕಾಂಗ್ರೆಸ್ಸಿಗಿದ್ದಷ್ಟು ಜನಪ್ರಿಯತೆ ಈಗಿಲ್ಲವೆಂದು ತಿಳಿದುಕೊಳ್ಳಲಾರದಷ್ಟು ಮಟ್ಟಿಗೆ ಕಾಂಗ್ರೆಸ್ಸಿಗರಿಗೆ ಅಧಿಕಾರ ಮದವೇರಿದೆಯೆಂದು ನಾನು ನಂಬುವದಿಲ್ಲ. ಸ್ವಾತಂತ್ರ್ಯದ ಹೋರಾಟದ ಕಾಲದಲ್ಲಿ ಅದು ಜನತೆಯ ಮೇಲೆ ಹಿಡಿತವಿಟ್ಟುಕೊಂಡಷ್ಟು ಈಗ ಇಟ್ಟುಕೊಳ್ಳಲಾರದಾಗಿದೆ. ಆದರೆ ಇದರಲ್ಲಿ ಕಾಂಗ್ರೆಸ್ಸಿಗರ ತಪ್ಪೆಷ್ಟು, ಅದರ ವೈರಿಗಳ ಕಾರಣಗಳೆಷ್ಟು ಎಂಬುದನ್ನು ವಿವೇಚಿಸಬೇಕಾಗಿದೆ.

ಶ್ರೀ. ಶಂಕರರಾವ ದೇವ

ಕಾಂಗ್ರೆಸ್ಸಿಗೆ ಧ್ಯೇಯವೇನೋ ಇದೆ, ಆದರೆ ಅದನ್ನು ಸಾಧಿಸುವ ಉತ್ಸಾಹವಿಲ್ಲೆಂದು ಹೇಳಲಾಗುತ್ತಿದೆ. ಅರ್ಥಾತ್ ತಮಗೆ ಇದೀಗ ತೊಂದರೆಯಾದರೂ ಚಿಂತೆಯಿಲ್ಲ. ಸಾಮಾಜಿಕ ಮತ್ತು ನೈತಿಕ ಉದ್ಧಾರ ಸಾಧಿಸಬೇಕೆಂದು ಅವರು ಸ್ಫೂರ್ತಿಯಿಂದ ದುಡಿಯಲು ಇಂದು ಸಿದ್ಧರಿಲ್ಲ. ಇದು ನಿಜವಾಗಿದ್ದರೆ ಕಾಂಗ್ರೆಸ್ಸಿಗರ ನೈತಿಕ ಶಕ್ತಿ ಉಡುಗಿದೆಯೆಂಬ ಆರೋಪ ನ್ಯಾಯ್ಯವೇ ಸರಿ.

ಮೊದಲೂ ನಿರ್ದೋಷರಲ್ಲ

ಕಾಂಗ್ರೆಸ್ಸಿಗರು ಜನತೆಯ ವಿಮೋಚನೆಗಾಗಿ ಕ್ಲೇಶಗಳನ್ನು ಅನುಭವಿಸಿದರು, ಸ್ವಾರ್ಥತ್ಯಾಗ ಮಾಡಿದರು; ಆ ಕಾರಣದಿಂದ ಜನ ಅವರನ್ನು ಆದರಿಸುತಿತ್ತು. ದೇಶಭಕ್ತಿ ಕಾಂಗ್ರೆಸ್ಸಿಗರ ಗುತ್ತಿಗೆಯಲ್ಲದಿದ್ದರೂ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಗುತ್ತಿಗೆಯೇನೋ ಅವರದೇ ಆಗಿತ್ತು. ಆಗ ಅವರು ಜನರ ದೃಷ್ಟಿಯಲ್ಲಿ ವೀರರಾಗಿದ್ದರು. ಈ ವೀರರೆಲ್ಲ ೧೯೪೭ ಆಗಸ್ಟ ೧೫ ರ ನಂತರ ಹಠಾತ್ತಾಗಿ ಹೀನರಾಗಿ ಹೋದರೆ? ಅಧಿಕಾರದಿಂದ ಮನುಷ್ಯಹೃದಯ ಕಲುಷಿತವಾಗಿ ಬಿಡುವದೇನೋ ನಿಜ. ಆದರೂ ಕಾಂಗ್ರೆಸ್ಸಿನಲ್ಲಿ ಒಳಿತಾಗಿದ್ದುದೆಲ್ಲ ಹೋಗಿದೆಯೆಂದು ಜನರು ಭಾವಿಸಿದರೆ ನೂರಾರು ಕಾಂಗ್ರೆಸ್ಸಿಗರಿಗೆ ಅನ್ಯಾಯ ಮಾಡಿದಂತೆಯೆ ಸರಿ.

ಕಾಂಗ್ರೆಸ್ಸು ಪರಕೀಯರ ವಿರುದ್ಧ ಹೋರುತಿದ್ದಾಗಲೂ ಕಾಂಗ್ರೆಸ್ಸಿಗರಲ್ಲಿ ದೋಷಗಳಿದ್ದೇ ಇದ್ದವು. ಆದರೆ ಅವರ ಹೋರಾಟಕ್ಕೆ ಮೋಹಿತರಾದ ಜನರು ಅದನ್ನು ಗಮನಿಸುತ್ತಿರಲಿಲ್ಲ, ಅಷ್ಟೇ. ಮೇಲಾಗಿ ಗಾಂಧೀಜಿಯವರು ಆಗಾಗ್ಗೆ ತಮ್ಮ ತಪಸ್ಯೆಯಿಂದ ತಮ್ಮ ಬೆಂಬಲಿಗರ ಪಾಪಗಳಿಗಾಗಿ ಪ್ರಾಯಶ್ಚಿತ್ತ ಮಾಡಿಕೊಳ್ಳುತ್ತಿದ್ದರು. ಕಾಂಗ್ರೆಸ್ಸಿಗರೂ ಮೇಲ್ಪಟ್ಟದ [illegible] ಯನ್ನಿಟ್ಟುಕೊಂಡಿದ್ದರು. ಅವರು ಗಾಂಧೀಜಿಯ ಕೈಕೆಳಗೆ ಜನರೊಡನೆ ಒಂದಾಗಲು ಕಲಿತಿದ್ದರು. ಅದನ್ನು ಅವರು ಇಷ್ಟು ಬೇಗನೆ ಮರೆತು ಬಿಟ್ಟರೆ? ಹಾಗಿದ್ದರೆ ಅದು ನಮ್ಮ ದುರ್ದೈವ ಮಾತ್ರವಲ್ಲ, ಜಗತ್ತಿನ ದುರ್ದೈವ.

ರಚನಾತ್ಮಕ ಕಾರ್ಯಗಳಿಂದ ಜನರ [illegible] ಬಿದ್ದರೂ ಕಾಂಗ್ರೆಸ್ಸಿಗರು ಜನರ ಸುಖ ದುಃಖಗಳಲ್ಲಿ ಭಾಗಿಯಾದುದರಿಂದ ಒಂದು ಬಗೆಯ ಸೋದರಭಾವವುಂಟಾಗಿ ಜನರು ಪಕ್ಷದಲ್ಲಿ ಅಂಥ ವಿಶ್ವಾಸವಿಟ್ಟರು. ಆ ವಿಶ್ವಾಸ ಇಂದು ಉಳಿದಿಲ್ಲವೆಂದು ಒಪ್ಪದೆ ವಿಧಿಯಿಲ್ಲ. ಇಂದು ನಮ್ಮಲ್ಲಿ ಪಕ್ಷದ ಬಹಳ ವೈಶಮ್ಯ, [illegible] ಜನರೊಡನೆ ಬಂಧುಭಾವದ [illegible] ದೂರಕ್ಕೆ ಉಂಟಾಗಿದೆ. ಅಲ್ಲದೆ ಕಾಂಗ್ರೆಸ್ಸಿಗರೊಳಗೇ ಛಿದ್ರಗಳುಂಟಾಗಿವೆ. ಅಧಿಕಾರದಲ್ಲಿರುವ ಮತ್ತು ಇಲ್ಲದ ಕಾಂಗ್ರೆಸ್ಸಿಗರೆಂದು ಇಬ್ಬಣವಾಗಿದೆ.

ಗಾಂಧೀಜಿಯ ಭವಿಷ್ಯವಾಣಿ

ಗಾಂಧೀಜಿಯು [illegible] ಕಾಂಗ್ರೆಸ್ಸು [illegible] ಸ್ವಾತಂತ್ರ್ಯ [illegible] ನಗರಗಳಿಂದ ಭಿನ್ನವಾದ [illegible] ಹಳ್ಳಿಗಳಿಗೆ ಸಾಮಾಜಿಕ, ನೈತಿಕ, ಆರ್ಥಿಕ ಸ್ವಾತಂತ್ರ್ಯ [illegible]. ಭಾರತವು ಪ್ರಜಾತಂತ್ರಾತ್ಮಕ ಧ್ಯೇಯದತ್ತ ಸಾಗುವಾಗ ಸಾಮಾಜಿಕ ಶಕ್ತಿಗೂ ನೈತಿಕ ಶಕ್ತಿಗೂ [illegible]. ಕಾಂಗ್ರೆಸ್ಸು ರಾಜಕೀಯ ಪಕ್ಷಗಳೊಡನೆ ಮತ್ತು [illegible] ಸಂಸ್ಥೆಗಳೊಡನೆ [illegible] ಸ್ಪರ್ಧೆಯಲ್ಲಿ ಪ್ರವೇಶ ಮಾಡಬಾರದು."

ಎಂಥ ಕಾಲಜ್ಞಾನದ ವಾಕ್ಯಗಳು! ಆದರೆ ಆಗ ಈ ಸಾಮಾಜಿಕ ಮತ್ತು ನೈತಿಕ ಶಕ್ತಿಗಳ ಬೆಲೆಯೆಂದರೇನೆಂದು ನಮಗೆ ಅರ್ಥವಾಗಿರಲಿಲ್ಲ. ಆದರಿಂದು ದೇಶದಲ್ಲಿ ಕಮ್ಯೂನಿಸ್ಟರ ಹಿಂಸಾತ್ಮಕ ಶಕ್ತಿಗಳ ವಿರುದ್ಧ ಸರಕಾರ ದಿಕ್ಕುತೋಚದಂತೆ ಹೆಚ್ಚುಹೆಚ್ಚು ಪೋಲೀಸ ಮತ್ತು ಅನೇಕ ವೇಳೆ ಸೈನಿಕ ಶಕ್ತಿಯನ್ನು ಉಪಯೋಗಿಸಿ ನಾಗರಿಕ ಸ್ವಾತಂತ್ರ್ಯವನ್ನು ಪರಿಮಿತಗೊಳಿಸುವದನ್ನು ಕಂಡಾಗ ಅವರ ಅರ್ಥ ಸ್ಪಷ್ಟವಾಗುತ್ತದೆ. ಆದರೂ ಹೀಗೆ ಮಾಡದಿದ್ದರೆ ಕಮ್ಯುನಿಸ್ಟ ಅರಾಜಕತೆಯಿಂದ ನಾವು ಹೇಗೆ ಪಾರಾಗಬೇಕು? ಜನರ ಪ್ರೇಮ ಸಹಕಾರಗಳಿಂದ ಸಾಮಾಜಿಕ ಮತ್ತು ನೈತಿಕ ಶಕ್ತಿಯನ್ನು ಹೆಚ್ಚಾಗಿ ಅವಲಂಬಿಸಬೇಕಾದರೆ ಗಾಂಧೀಜಿ ಮುಂಗಂಡಂತೆ ನೈತಿಕಶಕ್ತಿ [illegible] ನಾಗರಿಕ ಶಕ್ತಿ ಕಲೀಯಾಗಲೇ ಬೇಕಾದಲ್ಲಿ [illegible] ಏಕೆಂದರೆ ರಕ್ಷಿಸುವವನೇ ಆಳುವವನು.

ಧ್ಯೇಯ ಬೇಕು, ಅದಕ್ಕಾಗಿ ದುಡಿಯಬೇಕು

ಕಮ್ಯೂನಿಸ್ಟರ ರೀತಿ ನೀತಿಗಳು ನಮಗೆಷ್ಟೇ ಹೇಯವೆಂದು ಕಾಣಲಿ, ಕಮ್ಯೂನಿಜಂ ಒಂದು ಧ್ಯೇಯವೆಂದು ನಾವು ಮರೆಯಲಾರೆವು. ಧ್ಯೇಯವನ್ನು ದಬ್ಬಾಳಿಕೆಯಿಂದ ಮುರಿಯುವದು ಅಸಾಧ್ಯ. ಅದರಲ್ಲಿಯೂ ಇಂದು ಕಮ್ಯೂನಿಜಂ ಜಗತ್ತಿನ ದಲಿತ ಜನತೆಯ ಹೃದಯವನ್ನು ಆಕ್ರಮಿಸಿಬಿಟ್ಟಿದೆ. ಅದರ ರೀತಿ ನೀತಿಯನ್ನು ನೀವು ಒಪ್ಪದಿರಬಹುದು. ಆದರೆ ಅದೊಂದು ಧರ್ಮದಂತೆಯೆ ಆಗಿಬಿಟ್ಟಿದೆ. [illegible] ಧರ್ಮಶ್ರದ್ಧೆಯ [illegible] ಕಮ್ಯೂನಿಸ್ಟರು [illegible] ಅಲ್ಲ.

ನಾವು ಧ್ಯೇಯಗಳನ್ನು ಧ್ಯೇಯಗಳಿಂದಲೇ ಎದುರಿಸಬೇಕು. ಕಾಂಗ್ರೆಸ್ಸಿಗೂ ಒಂದು ಧರ್ಮವುಂಟು. [illegible] ರಾಜಕೀಯ ಆರ್ಥಿಕ ಹಕ್ಕುಗಳುಳ್ಳ [illegible] ಬಾಂಧವ್ಯ ರಾಜ್ಯವನ್ನು ಸತ್ಯ ಮತ್ತು ಶಾಂತ ಉಪಾಯಗಳಿಂದ ಸ್ಥಾಪಿಸುವದು ಕಾಂಗ್ರೆಸ್ಸಿನ ಧ್ಯೇಯವೆಂದು ಕಾಂಗ್ರೆಸ್ಸಿನ ಘಟನೆಯ ಮೊದಲನೆ ಕಲಮು ಹೇಳುತ್ತದೆ. ಇದಕ್ಕೆ ಜಯಪುರದ ಕಾಂಗ್ರೆಸ್ಸು [illegible] ಬಿಟ್ಟಿದೆ. ಒಂದೇ ಶಬ್ದದಲ್ಲಿ "ಸರ್ವೋದಯ"ವೇ ಕಾಂಗ್ರೆಸ್ ಧ್ಯೇಯ. ಕಮ್ಯೂನಿಜಂನಂತೆ ಎಲ್ಲರನ್ನೂ [illegible] ಅದರ ಉದ್ದೇಶ [illegible] ಸಾಧಿಸಬೇಕೆಂದು ಹಾಕಿಕೊಟ್ಟಿದೆ.

ಆದರೆ [illegible] ಕಾಂಗ್ರೆಸ್ಸಿನ ಧ್ಯೇಯ [illegible] ಅದನ್ನು [illegible] ಧ್ಯೇಯ [illegible] ಸ್ವಾತಂತ್ರ್ಯಕ್ಕೆ [illegible]

ವಿಚಾರ ದ್ವಂದ್ವ

ಈ ತಲೆಕಟ್ಟಿನ ಕೆಳಗೆ ಜನಾಭಿಪ್ರಾಯವನ್ನು ವಾರವಾರವೂ ಪ್ರಕಟಿಸಲಿಚ್ಛಿಸಿದ್ದೇವೆ. ಕೇವಲ ವ್ಯಕ್ತಿಕ ಟೀಕೆಗಳನ್ನು ಬೆಳಕಿಗೆ ತರುವದು ಇದರ ಉದ್ದೇಶವಾಗಿರದೆ ಮಹತ್ವದ ವಿಷಯಗಳ ಮೇಲೆ ಚರ್ಚೆ ನಡೆಸಿ ಜನಾಭಿಪ್ರಾಯವನ್ನು ರೂಪಿಸುವದೇ ಗುರಿಯಾಗಿರುವದರಿಂದ ಇಲ್ಲಿ ಬಂದ ವಿಷಯಗಳ ಬಗ್ಗೆ ಅನುಕೂಲ ಮತ್ತು ಪ್ರತಿಕೂಲಾಭಿಪ್ರಾಯಗಳನ್ನು ಓದುಗರು ಬರೆದು ಕಳಿಸಿದರೆ ಸ್ವಾಗತಿಸಲಾಗುವದು. —ಸಂ.

★

ಹಿಂದಿಯೇ ಭಾರತದ ಭಾವೀ ರಾಷ್ಟ್ರಭಾಷೆಯಿರಲಿ

ಭಾರತವು ಈ ಹಿಂದೆ ಸುಮಾರು ೧೦೦ ವರ್ಷಗಳಿಂದ ಸಂಪೂರ್ಣವಾಗಿ ಇಂಗ್ಲೀಷ್ ಭಾಷೆಯು ಮುಖ್ಯ ಭಾಷೆಯಾಗಿದ್ದ ಇಂಗ್ಲೀಷರ ಕೈಕೆಳಗಿದ್ದುದರಿಂದ ಈ ದೇಶದಲ್ಲಿ ಇಂಗ್ಲೀಷಿನ ಪ್ರಚಾರವು ಹೆಚ್ಚಾಗಿ ನಡೆಯಿತು. ಅದುದರಿಂದಲೇ ನಮ್ಮ ದೇಶದಲ್ಲಿ ಸುಮಾರು ೧೦೦—೧೫೦ ವರ್ಷಗಳಿಂದ ಅಂದರೆ ಇಲ್ಲಿ ಇಂಗ್ಲೀಷರ ಆಡಳಿತೆಗೆ ಪ್ರಾರಂಭವಾದಂದಿನಿಂದ ರಾಷ್ಟ್ರಭಾಷೆಯಾಗಿದೆ. ಈಗಲೂ ಅದೇ ರಾಷ್ಟ್ರೀಯ ಭಾಷೆಯಾಗಿರಬೇಕೆಂದು ವಾದಿಸುವುದುಚಿತವಲ್ಲ.

ಏಕೆಂದರೆ "ಇಂಗ್ಲೀಷು" ನಮ್ಮ ದೇಶದ ಯಾವುದೇ ಭಾಷೆಗೆ ನಿಕಟ ಸಂಬಂಧವಿರುವ ಭಾಷೆಯಾಗಿಲ್ಲ. ಅಲ್ಲದೆ ಕಳೆದ ತಾ. ೧೧-೬-೪೯ ನೇ 'ಕರ್ಮವೀರ' ಸಂಚಿಕೆಯಲ್ಲಿ 'ಭಾರತಕ್ಕೆ ರಾಷ್ಟ್ರೀಯ ಭಾಷೆಯಾವುದಿರಬೇಕು' ಎಂಬ ತಲೆಬರಹವುಳ್ಳ ಲೇಖನದಲ್ಲಿ ತೋರುವಂತೆ ಅದು ದೇಶದ ಹೆಚ್ಚಿನ ಜನರು ತಿಳಿಯುವ ಭಾಷೆಯೂ ಅಲ್ಲ. ಇಂಗ್ಲೀಷ್ ಭಾಷೆಯನ್ನು ಸುಮಾರು ಮೆಟ್ರಿಕ್ಯುಲೇಶನ ಮೇಲ್ಪಟ್ಟು ಶಿಕ್ಷಣ ಪಡೆದವರೇ ಬಲ್ಲರೇ ವಿನಾ ಅದಕ್ಕಿಂತಲೂ ಕಡಿಮೆ ಶಿಕ್ಷಣ ಪಡೆದವರು ತಿಳಿದಿರಲು ಸಾಧ್ಯವಿಲ್ಲ. ಒಂದು ವೇಳೆ ತಿಳಿದಿದ್ದರೂ ಅಕ್ಷರಗಳನ್ನು ಬಲ್ಲರೇ ವಿನಾ ಸರಿಯಾಗಿ ಬರೆಯುವುದಕ್ಕೂ ಓದುವುದಕ್ಕೂ ಮಾತನಾಡಲಿಕ್ಕೂ ಅವರು ಅಸಮರ್ಥರು. ಹೀಗಿರುವಾಗ ಅವರು ತಿಳಿದೂ ಫಲವಿಲ್ಲ.

ದೇಶದ ಹೆಚ್ಚಿನ ಜನರು ನಿರಕ್ಷರಕುಕ್ಷಿಗಳಾಗಿರುವಾಗ ನಮ್ಮ ದೇಶದಲ್ಲಿ (ಅರ್ಥಾತ್ ಮೇಲಿನ ಲೇಖನದ ಆಧಾರದಿಂದ ಭೂಲೋಕದಲ್ಲಿ) ಇಂಗ್ಲೀಷು ಬಲ್ಲವರು ಹೆಚ್ಚಿರುವುದರಿಂದ ಅದನ್ನು ನಮ್ಮ ದೇಶದ ಅಂದರೆ ಭಾರತದ ರಾಷ್ಟ್ರೀಯ ಭಾಷೆಯಾಗಿ ಮಾಡುವುದೇ ಉಚಿತವೆನ್ನುವುದು ಉಚ್ಚ ಶಿಕ್ಷಣ ಹೊಂದಿದವರು ಅಂದರೆ ಇಂಗ್ಲೀಷನ್ನು ಸರಿಯಾಗಿ ತಿಳಿದವರು ಹೇಳಬಹುದು ವಿನಾ ಬೇರೆ ಯಾರೂ ಹೇಳಲಾರರು. ಯಾಕೆಂದರೆ ಅವರು 'ಹಿಂದಿ' ಯನ್ನು ತಿಳಿದಿಲ್ಲವಾದ ಸಂದರ್ಭದಲ್ಲಿ ಅದನ್ನು ಕಲಿಯಬೇಕಾಗುವುದು. ಇಡೀ ದೇಶದ ದೃಷ್ಟಿಯಲ್ಲಿ ಹಿಂದುಸ್ಥಾನದ ಉತ್ತರ ಭಾಗದಲ್ಲಿ ಹೆಚ್ಚಾಗಿ ಹಿಂದಿ ಅಥವಾ ಅದಕ್ಕೆ ನಿಕಟ ಸಂಬಂಧವಿರುವ ಭಾಷೆಗಳೇ ಪ್ರಚಾರದಲ್ಲಿವೆ. ಅವು ಅಲ್ಲಿಯವರ ಮಾತೃಭಾಷೆಯಾಗಿವೆ. ದಕ್ಷಿಣ ಹಿಂದೂ ದೇಶದಲ್ಲಿಯವರಿಗೆ ಇಂಗ್ಲಿಷೂ ಹಿಂದೀ ಎರಡೂ ಒಂದೇ. ಸರಿಯಾಗಿ ನೋಡಿದರೆ "ಹಿಂದಿ" ಯೇ ಸುಲಭ.

ಮೇಲಿನ ಲೇಖನದಲ್ಲಿ ಲೇಖಕರು ಜಗತ್ತನ್ನೇ ಒಂದು ದೇಶವಾಗಿ ಕಲ್ಪಿಸಿ ಅದರಲ್ಲಿ ಹೆಚ್ಚಿನವರು ಬಲ್ಲ ಭಾಷೆಯಾದ ಇಂಗ್ಲೀಷನ್ನು ನಮ್ಮ ದೇಶದ ರಾಷ್ಟ್ರೀಯ ಭಾಷೆಯಾಗಿ ರಚಿಸಬೇಕೆಂದಿರುವರು. ನಮ್ಮ ದೇಶದ ಜನರು ನಮ್ಮ ಊರು ನೆರೆಯ ಊರು ಒಂದೇ ತಾಲೂಕಿನವು; ನಮ್ಮ ತಾಲೂಕು ಮತ್ತು ನೆರೆಯ ತಾಲೂಕುಗಳು ಒಂದೇ ದೇಶದ ಭಾಗಗಳೆಂದೂ ನಾವೆಲ್ಲರೂ ಒಂದೇ ಊರಿನ ಒಂದೇ ದೇಶದ ಜನರು; ನಾವೆಲ್ಲಾ ಒಂದೇ ಎಂದೂ ತಿಳಿಯುವ ಮೊದಲೇ ಲೇಖಕರು ಪ್ರಪಂಚವನ್ನೇ ಒಂದು ದೇಶವಾಗಿ ಮಾಡಿ ಅದರಲ್ಲಿಯ ಹೆಚ್ಚಿನ ಜನರು ತಿಳಿಯಬಲ್ಲ ಭಾಷೆ ಇಂಗ್ಲೀಷು ಆದುದರಿಂದ ನಮ್ಮ ದೇಶಕ್ಕೆ ಅದನ್ನೇ ರಾಷ್ಟ್ರೀಯ ಭಾಷೆಯಾಗಿ ರಚಿಸಬೇಕಾಗಿಯೂ ಬರೆದಿರುವರು. ಹಾಗಿದ್ದಲ್ಲಿ ಪ್ರಪಂಚದ ದೊಡ್ಡ ದೊಡ್ಡ ರಾಷ್ಟ್ರಗಳೆಲ್ಲಾ ಇಂಗ್ಲೀಷನ್ನು ತಮ್ಮ ರಾಷ್ಟ್ರೀಯ ಭಾಷೆಯಾಗಿಟ್ಟುಕೊಳ್ಳದೇ ತಮ್ಮ ಮಾತೃಭಾಷೆಯನ್ನೇ ರಾಷ್ಟ್ರಭಾಷೆಯಾಗಿಟ್ಟುಕೊಂಡಿರುವುದು?

ಮತ್ತು ಲೇಖಕರು ಳ ನೆಯ ಇಸವಿಯ ಜಗತ್ತಿನ ಇಂಗ್ಲೀಷೆಂದರೆ ಏನೆಂದು ಬಲ್ಲದು ಎಂದು ಹೇಳಿರುವರು— ಇಂಗ್ಲೀಷು ಎಂದರೆ ಏನೆಂದು ಬಲ್ಲ ಕೂಡಲೆ ಇಂಗ್ಲೀಷು ಬಲ್ಲರೆನ್ನಬಹುದೇ? ಅದೇ ಮಕ್ಕಳೂ ಹಿಂದೀ ಎಂದರೆ ಏನೆಂದು ತಿಳಿದಿಲ್ಲವೇ? ಅದಕ್ಕೆ ಅವು ಏಕೆ ಮೈ ತೆಗೆಯುವುವು.

ಭೂಲೋಕದ ಹೆಚ್ಚಿನ ಜನರು ಬಲ್ಲ ಇಂಗ್ಲೀಷನ್ನು ದೇಶದ ಹೊರ ವ್ಯವಹಾರಕ್ಕಾಗಿ ಇಟ್ಟುಕೊಳ್ಳಬಹುದು. ಆದರೆ ದೇಶೀಯ ವ್ಯವಹಾರಗಳಿಗೂ ಇಂಗ್ಲೀಷು ಸರಿಯಲ್ಲ. ಅದಕ್ಕೆ ದೇಶದ ಹೆಚ್ಚಿನ ಜನರು ತಿಳಿದ ಭಾಷೆ ಅಂದರೆ "ಹಿಂದಿ" ಅಥವಾ "ಹಿಂದುಸ್ತಾನಿ" ಯನ್ನು ರಾಷ್ಟ್ರಭಾಷೆಯಾಗಿರಿಸಬೇಕು. ಮತ್ತು ಪ್ರಾಂತರಚನೆಯನ್ನು ಭಾಷಾ ಪ್ರಕಾರ ಮಾಡಬೇಕು. ಆಗ ಪ್ರಾಂತದೊಳಗಿನ ವ್ಯವಹಾರಗಳಿಗೆ ಮಾತೃಭಾಷೆಯನ್ನೆ ಉಪಯೋಗಿಸಲು ಅನುಕೂಲವಾಗುವುದು. ಉಚ್ಚ ಶಿಕ್ಷಣವನ್ನು ಹಿಂದಿ ಇಂಗ್ಲಿಷು ಎರಡೂ ಭಾಷೆಗಳಲ್ಲಿ ಕೊಡಬಹುದು. ದೇಶದ ಅಭ್ಯುದಯಕ್ಕೆ ದೇಶದ ಭಾಷೆಯೇ ಕಾರಣ. ಅದುದರಿಂದಲೇ ಪರಭಾಷೆಯನ್ನು ರಾಷ್ಟ್ರೀಯ ಭಾಷೆಯೆಂದು ಒಪ್ಪಿದ ಭಾರತವು ಇನ್ನೂ ಅಚೇತನಾವಸ್ಥೆಯಲ್ಲಿದೆ. ಅದುದರಿಂದಲೇ ಪ್ರಪಂಚದ ಅನ್ಯ ರಾಜ್ಯಗಳು ಪ್ರಗತಿಪಥದಲ್ಲಿ ಮುಂದರಿಯುತ್ತಿರುವಾಗ ಭಾರತವು ಹಿಂದೆ ಬೀಳುತ್ತಿದೆ. ಪ್ರಪಂಚದ ಯಾವುದೇ ರಾಷ್ಟ್ರಗಳು ಅನ್ಯ ಭಾಷೆಯನ್ನು ತಮ್ಮ ರಾಷ್ಟ್ರೀಯ ಭಾಷೆಯಾಗಿರಿಸಿಕೊಂಡಿರದಿರುವುದರಿಂದಲೇ ಅವು ಅಭ್ಯುದಯ ಹೊಂದುತ್ತಿವೆ. ಭಾರತದ ಅಭ್ಯುದಯಕ್ಕೆ ಭಾರತದ ಭಾಷೆಯೇ ಬೇಕು. ನಮಗೆ ಪರಭಾಷೆ ಬೇಡ.

ಸಂಸ್ಕೃತವು ನಮ್ಮ ದೇಶದ ಎಲ್ಲಾ ಭಾಷೆಗಳ ಮೂಲ ಭಾಷೆ. ಮತ್ತು ಆರ್ಯರ ಭಾಷೆಯಾಗಿದ್ದರೂ ಅದು ಆಡಿಕೆಯ ಭಾಷೆಯಾಗಿ ಎಲ್ಲಿಯೂ ಪ್ರಚಾರದಲ್ಲಿಲ್ಲ. ಅದು ಬರೇ ಗ್ರಂಥ ಭಾಷೆಯಾಗಿದೆ. ಅದುದರಿಂದ ಅದನ್ನು ರಾಷ್ಟ್ರೀಯ ಭಾಷೆಯಾಗಿರಿಸುವುದರಿಂದ ದೇಶಕ್ಕೆ ಹಿತವಿಲ್ಲವೆಂದು ನನ್ನ ಭಾವನೆ. ಮಹಾತ್ಮಾಜಿಯವರು ಭಾವೀ ಭಾರತದ ರಾಷ್ಟ್ರಭಾಷೆ ಹಿಂದುಸ್ತಾನಿಯಾಗಿರಬೇಕೆಂದೂ ಆದರ ಲಿಪಿ ಮಾತ್ರ ಸಂಸ್ಕೃತ (ದೇವನಾಗರಿ) ವಾಗಿರಬೇಕೆಂತಲೂ ಅಭಿಪ್ರಾಯಪಟ್ಟಿದ್ದರು. ಅದಕ್ಕಾಗಿಯೇ ಅವರು ದಕ್ಷಿಣ ಭಾರತದಲ್ಲಿ ಹಿಂದುಸ್ತಾನಿ ಪ್ರಚಾರ ಸಭೆಯನ್ನು ಸ್ಥಾಪಿಸಿದುದು. ಈ ಸಂಸ್ಥೆಯು ಬಾಪುವಿನ ಹೆಸರನ್ನು ಸುರಿಸುತ್ತಿದೆ. ಮತ್ತು ತನ್ನ ಕಾರ್ಯವನ್ನು ಯಶಸ್ವಿಯಾಗಿ ಜರುಗಿಸುತ್ತಿದೆ.

ಹೊಸಂಗಡಿ ರೆ. ರಾ. ಪೈ.

× × ×

ಲಂಚದ ಹೊಣೆ

ತಾ. ೨೨-೫-೪೯ ರ "ಹರಿಜನ" ದಲ್ಲಿ ಲಂಚದ ಹೊಣೆಯನ್ನು ಲಂಚ ಕೊಡುವವರ ಮೇಲೆ ಹೆಚ್ಚಾಗಿ ಹೊರಿಸಲಾಗಿದೆ. ಸ್ವತಂತ್ರ ರಾಷ್ಟ್ರದಲ್ಲಿ, ಸರಕಾರವೆಂದರೆ ಸ್ವತಃ ಸೇವೆಯನ್ನು ಸ್ವೀಕರಿಸುವದರ ಉದ್ದಿಷ್ಯ ನಿರ್ಮಿಸಲ್ಪಟ್ಟ ಅದೊಂದು ಸ್ವತಂತ್ರವಾದ ಸಂಸ್ಥೆಯಲ್ಲ. ರಾಷ್ಟ್ರದ ಸಕಲ ನಾಗರಿಕರು ಸ್ವಸೇವಾ ಸೌಲಭ್ಯಕ್ಕಾಗಿ ತಮ್ಮೊಳಗಿಂದ ಕೆಲವರನ್ನು ಸ್ವಂತ ಆದಾಯದ ಮೇಲೆ ನೇಮಿಸಿಕೊಂಡ ನೌಕರದೊಂದು ತಂಡವಾಗಿರುವದು. ಆ ನೌಕರರು ತಮ್ಮ ಅಧಿಕಾರ ಕ್ಷೇತ್ರದಲ್ಲಿ ಬರುವ ಒಬ್ಬಿಬ್ಬರಿಗೆ ಮಾತ್ರವಲ್ಲ, ಪ್ರತಿಯೊಬ್ಬ ನಾಗರಿಕನಿಗೂ ಪ್ರಾಮಾಣಿಕತನದ ಸೇವೆಯನ್ನು ಸಲ್ಲಿಸುವದು ಅವರವರ ಆದ್ಯ ಕರ್ತವ್ಯವಾಗಿರುವದು. ಎಲ್ಲಿಯ ವರೆಗೆ ಪ್ರತಿಯೊಬ್ಬನಾಗರಿಕನಿಂದ ಒಬ್ಬಿಬ್ಬ ನೌಕರರು ಮಾತ್ರವಲ್ಲ, ಸಕಲ ನೌಕರರೂ ಪ್ರಾಮಾಣಿಕ ನೌಕರರೆಂದೆನಿಸಿಕೊಳ್ಳುವದಿಲ್ಲವೋ ಅಂದರೆ ಪ್ರತಿಯೊಬ್ಬ ನಾಗರಿಕನಿಗೆ ಅವರೆಲ್ಲರ ಸೇವೆಯು ಸಲ್ಲಿಸಲ್ಪಡುವದಿಲ್ಲವೋ ಅಲ್ಲಿಯ ವರೆಗೆ ಅವರು ಪ್ರಾಮಾಣಿಕ ನೌಕರರಲ್ಲ. ಅರ್ಥಾತ್ ಅವರ ತಂಡವು ಪ್ರಾಮಾಣಿಕ ಸರಕಾರವಲ್ಲ.

ಅದರಂತೆ, ಪ್ರಾಮಾಣಿಕರೆಂದು ಹೇಳಿಕೊಳ್ಳುವ ನೌಕರರು ತಮ್ಮ ಸಹಕೆಲಸಗಾರರಿಂದ ಮತ್ತು ಸಾರ್ವಜನಿಕರಿಂದ ವಿಪರೀತ ಲಂಚಗುಳಿ ವಾತಾವರಣವು ನಿರ್ಮಿಸಲ್ಪಟ್ಟದ್ದು ಅದರಲ್ಲಿ ಪ್ರಾಮಾಣಿಕ ಮನುಷ್ಯನಿಗೆ ಸುರಕ್ಷಿತವಾಗಿ ಜೀವಿಸಲು ಸಹ ಕಠಿಣವಿರುತ್ತದೆನ್ನುವದು ಮೂಢತನವಲ್ಲವೆ? ಬೇಕಾದಷ್ಟು ವಿಪರೀತ ಲಂಚಗುಳಿ ವಾತಾವರಣವು ನಿರ್ಮಿಸಲ್ಪಟ್ಟಿದ್ದರೇನಾಯಿತು, ನಿಜವಾದ ಪ್ರಾಮಾಣಿಕ ಮನುಷ್ಯನು ಸುರಕ್ಷಿತವಾಗಿ ಜೀವಿಸದಿರಲು ಕೊಂಚವೂ ಕಾರಣವಿಲ್ಲ. ಯಾಕೆಂದರೆ ಲಂಚಗುಳಿ ವಾತಾವರಣದಲ್ಲಿಯು ಪ್ರಾಮಾಣಿಕ ಮನುಷ್ಯನು ಸ್ವತಃ ಲಂಚ ತೆಗೆದುಕೊಳ್ಳದಿದ್ದರಾಯಿತಲ್ಲವೆ?

ಪ್ರೀತಿಯಿಂದ ಕೊಟ್ಟದ್ದು ಲಂಚವಲ್ಲವೆಂದು ತಿಳಿದು ಸ್ವೀಕರಿಸುವವರೂ ಅನೇಕ ಮಂದಿ ಇದ್ದಿರಬಹುದು. ಸರಕಾರೀ ಸಂಬಳದ ವಿನಾ ಒಂದು ಕಾಸು ಕೂಡ ಸ್ವೀಕರಿಸುವದು ಮಾತ್ರವಲ್ಲ, ಪಕ್ಷಗಾರರು ಪ್ರೀತಿಯಿಂದ ಕೊಡುತ್ತಾರೆನ್ನುವ ಚಹಾಪಾನ ಮುಂತಾದ್ದನ್ನು ಸ್ವೀಕರಿಸುವದು ಸಹ ಲಂಚವೇ ವಿನಾ ಬೇರೆಯಲ್ಲ.

ಲಂಚಗುಳಿಗಳಲ್ಲಿ ಲಂಚವನ್ನು ಕೊಡುವವರು ಮತ್ತು ಲಂಚವನ್ನು ತೆಗೆದುಕೊಳ್ಳುವವರು ಹೀಗೆ ಎರಡು ವಿಭಾಗಗಳನ್ನು ಮಾಡಬಹುದು. ಲಂಚವನ್ನು ಕೊಡುವವರ ಮೂಲಕ ಲಂಚವನ್ನು ತಗೆದುಕೊಳ್ಳುವಿಕೆಯೂ ಮತ್ತು ಲಂಚವನ್ನು ತೆಗೆದುಕೊಳ್ಳುವವರ ಮೂಲಕ ಲಂಚವನ್ನು ಕೊಡುವಿಕೆಯೂ ರೂಢಿಯಲ್ಲಿ ಬಂದಿವೆ. ಆದ್ದರಿಂದ ಲಂಚಗುಳಿತನಕ್ಕೆ ಲಂಚವನ್ನು ಕೊಡ-ತೆಗೆದುಕೊಳ್ಳುವವರೀರ್ವರೂ ಹೊಣೆಗಾರರೆನ್ನುವದು ಮತ್ತು ಅವರೀರ್ವರೂ ಸಂಕುಚಿತ ಮನೋವೃತ್ತಿಯ ಅಜ್ಞಾನಿಗಳೆನ್ನುವದು ನಿರ್ವಿವಾದ ಸಂಗತಿ.

ಅದರೆ ಜ್ಞಾನಿಗಳ ಪ್ರಭಾವದಿಂದಲೇ ಅಜ್ಞಾನಿಗಳು ಸುಜ್ಞಾನಿಗಳಾಗಲು ಸಾಧ್ಯ. ಜ್ಞಾನಿಗಳೆನಿಸುವವರಲ್ಲಿ ಅಜ್ಞಾನಾಂಧಕಾರವು ಅಳಿಸಿಹೋದಾಗಲೇ ಅಜ್ಞಾನಿಗಳು ಸುಜ್ಞಾನಿಗಳಾಗಬಲ್ಲರು. ರಾಷ್ಟ್ರದಲ್ಲಿಯ ಸಕಲ ನಾಗರಿಕರೂ ಸುಜ್ಞಾನಿಗಳಾಗಿದ್ದರೆ. ಸರಕಾರದ ಅವಶ್ಯಕತೆಯೇ ಇರುತ್ತಿದ್ದಿಲ್ಲ. ಸರಕಾರವು ಜನತೆಯನ್ನು ಆಳಲು ಸಮರ್ಥವಿರುವ ಜ್ಞಾನಿಗಳಾದ ಪ್ರತಿನಿಧಿಗಳದೊಂದು ಸಮೂಹವೆಂತಲೂ ಗ್ರಹಿಕೆಯುಂಟು. ಹೀಗೆ ಸರಕಾರವು ತಜ್ಞರದೊಂದು ತಂಡವೆಂದ ಮೇಲೆ ಲಂಚಗುಳಿತನದಲ್ಲಿ ಲಂಚವನ್ನು ಕೊಡುವವರಿಗಿಂತ ತೆಗೆದುಕೊಳ್ಳುವವರೇ ಹೆಚ್ಚು ಹೊಣೆಗಾರರಲ್ಲವೆ?

ಸಕಲರಿಗೂ ತೃಪ್ತಿಕರವಾದ ಮತ್ತು ಪಕ್ಷಪಾತರಹಿತವಾದ ಸೇವೆಯನ್ನು ಸಲ್ಲಿಸುವದೇ ಪ್ರಾಮಾಣಿಕತನದ ನಿಜವಾದ ತಿರುಳು. ಆದ್ದರಿಂದ ಪ್ರತಿಯೊಬ್ಬ ಸರಕಾರೀ ನೌಕರನು ಲಜ್ಜಾಸ್ಪದ ಲಕ್ಷಣವಾದ ಲಂಚಗುಳಿತನವನ್ನು ಈಗಲಾದರೂ ತ್ಯಜಿಸಲಿ! ಪ್ರಾಮಾಣಿಕ ಸೇವೆಯನ್ನು ಅಖಂಡವಾಗಿ ಆಚರಣೆಯಲ್ಲಿ ತರಲಿ!! ಸುದೀರ್ಘವಾದ ಶಾಂತ ಸಂಗ್ರಾಮದಿಂದ ಸಂಪಾದಿಸಿದ ಸ್ವಾತಂತ್ರ್ಯವನ್ನು ಸ್ಥಿರಗೊಳಿಸಲಿ!!!

ಕಾರವಾರ — ರಾಧಾಬಾಯಿ ಗಾಂಜೇಕರ

ಈ ಭಾರತ!

● ಮುಂಬಯಿಯ ಶಿವಾಜಿ ಪಾರ್ಕಿನ ವನಿತಾ ಸಮಾಜದ ಭವನದಲ್ಲಿ ಕಳೆದ ರವಿವಾರ ಭಯಂಕರ ಗೊಂದಲವಾಯಿತು. "ಸಾಖರಪುಡಾ" ಎಂಬ ಹೊಸ ಮರಾಠಿ ಚಲಚ್ಚಿತ್ರದ ಬಗ್ಗೆ ಆಚಾರ್ಯ ಅತ್ರೆಯವರ ಅಧ್ಯಕ್ಷತೆಯಲ್ಲಿ ಸೇರಲಿದ್ದ ಚರ್ಚಾಕೂಟದಲ್ಲಿ ಲೀಲಾ ಚಿಟ್ನೀಸಳನ್ನೊಳಗೊಂಡು ಆ ಚಿತ್ರ ವಿಮರ್ಶಕರು ಭಾಗವಹಿಸಲಿದ್ದುದರಿಂದ ದೂರದೂರದಿಂದ ಮರಾಠಿ ಚಲಚಿತ್ರ ಪ್ರೇಕ್ಷಕರು ಸಾವಿರಗಟ್ಟಲೆಯಲ್ಲಿ ನೆರೆದು ಭವನದಲ್ಲಿ ಜಾಗೆ ಸಾಲದೆ ಕೂಗಾಟವೆದ್ದುದರಿಂದ ಸಭೆಯನ್ನು ಮುಂದೆ ತಳ್ಳಲಾಯಿತು. ನಿರಾಶರಾದ ಸಭಿಕರು ಕುರ್ಚಿ ಮೇಜುಗಳನ್ನು ಒಗೆದು ಮುಗುಚಿ ಹಾಕಿ ಒಂದು ತಾಸಿನ ವರೆಗೆ ಗೊಂದಲ ಹಾಕಿದರು. ಪುಣ್ಯಕ್ಕೆ ಯಾರಿಗೂ ಗಾಯವಾಗಲಿಲ್ಲ.

—ಮುಂಬಯಿ "ಕ್ರಾನಿಕಲ್"

● ಬನಾರಸದ ದಶಾಶ್ವಮೇಧ ಪೋಲೀಸು ಸ್ಟೇಶನ್ನಿನ ಒಬ್ಬ ಹವಾಲದಾರ ಮತ್ತು ಇನ್ನೊಬ್ಬ ಪೋಲೀಸನನ್ನು ಒಬ್ಬ ಹುಡುಗಿಯನ್ನು ಅಪಹರಿಸಿದ್ದಕ್ಕಾಗಿ ಸಸ್ಪೆಂಡ್ ಮಾಡಲಾಗಿದೆ.... ವೃಂದಾವನದ ಪೋಲೀಸ್ ಸ್ಟೇಶನ್ ಅಧಿಕಾರಿಯೊಬ್ಬನ ಮನೆಯನ್ನು ಹೊಕ್ಕು ಕಳ್ಳರು ೩೦೦ ರೂಪಾಯಿಗಳನ್ನೂ ಬಂದೂಕಿನ ಗುಂಡುಗಳನ್ನೂ ಕದ್ದೊಯ್ದರು!

— ಲಕನೌ "ನ್ಯಾಶನಲ್ ಹೆರಾಲ್ಡ"

● ಪೂರ್ವ ಪಂಜಾಬಿನ ಹರಿಜನ ಶಾಸನ ಸಭಾ ಸದಸ್ಯ ಚೌಧರಿ ಸುಂದರಲಾಲರ ಮೇಲೆ ಕಬ್ಬಿನ ಮತ್ತು ಉಕ್ಕಿನ ಪರಮಿಟ್ಟುಗಳ ದುರುಪಯೋಗಕ್ಕಾಗಿ ಅಂಬಾಲಾ ಸ್ಪೆಶಲ್ ಮ್ಯಾಜಿಸ್ಟ್ರೇಟರಲ್ಲಿ ಪ್ರಕರಣ ಪ್ರಾರಂಭವಾಯಿತು. ಬೇರೊಂದು ನ್ಯಾಯಾಸ್ಥಾನಕ್ಕೆ ಈ ಪ್ರಕರಣವನ್ನು ವರ್ಗಾಯಿಸುವ ಪ್ರಯತ್ನ ನಡೆದಿರುವದಾಗಿ ಸುಂದರಲಾಲರ ವಕೀಲನು ಹೇಳಿದ್ದರಿಂದ ಪ್ರಕರಣವನ್ನು ಮುಂದುವರಿಸಲಾಯಿತು.

—ಪಿ. ಟಿ. ಐ.

● ಹಿಂದೂ ಕಾಯದೆಯ ಕ್ರೋಡೀಕರಣದ ಪುರಸ್ಕರ್ತರಿಗೆ ಅನಿರೀಕ್ಷಿತ ಸ್ಥಾನದಿಂದ ಬೆಂಬಲ ಬರತೊಡಗಿದೆ. ಭಾರತದ ಸೈನ್ಯ ಖಾತೆಯ ಒಂದು ಆಜ್ಞೆಯ ಮೇರೆಗೆ ಸೈನಿಕರಲ್ಲಿ ಬಹುಪತ್ನೀತ್ವವನ್ನು ತೀವ್ರವಾಗಿ ಪ್ರತಿಷೇಧಿಸಲಾಗುವದು. ಸೈನಿಕರು ೨ನೆ ೩ನೆ ಮದುವೆ ಮಾಡಿಕೊಳ್ಳಬೇಕಾದರೆ ಸೈನ್ಯಾಧಿನಾಯಕನ ಅಪ್ಪಣೆ ಪಡೆದುಕೊಳ್ಳಲೇ ಬೇಕಾಗುವದು. —ಕಲಕತ್ತಾ "ಸ್ಟೇಟ್ಸಮನ್"

ಸಮಸ್ತ ಭಾರತ

ಮುಂಬಯಿ

ಮುಂಬಯಿ ಸರಕಾರದವರು ಪ್ರಾಂತದ ಅಭಿವೃದ್ಧಿಗಾಗಿ ೧೦೦ಕ್ಕೆ ೩ ಬಡ್ಡಿದರದಂತೆ ೬ ಕೋಟಿ ರೂಪಾಯಿ ಸಾಲತೆಗೆಯುವದನ್ನು ಸಾರಿದ್ದಾರೆ. ೧೯೬೦ ನೇ ಅಗಷ್ಟ ೧ಕ್ಕೆ ಈ ಸಾಲವನ್ನು ತಿರುಗಿ ಕೊಡಲಾಗುವದು. ಆರು ತಿಂಗಳಿಗೊಮ್ಮೆ ಬಡ್ಡಿಯನ್ನು ಕೊಡಲಾಗುವದು.

ಸದ್ಯಕ್ಕೆ ಕಾಂಗ್ರೆಸ ಸರಕಾರವು ರಾಜೀನಾಮೆ ಕೊಟ್ಟಿದ್ದಾದರೆ ಅದರ ಸ್ಥಳದಲ್ಲಿ ಒಂದು ವಾರದೊಳಗಾಗಿ ಸಾಮ್ಯವಾದಿ ಸರಕಾರವನ್ನು ಸ್ಥಾಪಿಸಲಾಗುವದಾಗಿ ತಮಗೆ ತುಂಬ ವಿಶ್ವಾಸವಿದೆಯೆಂದು ಪ್ರಜಾತಂತ್ರ ಸಾಮ್ಯವಾದೀ ಪಕ್ಷದ ಸಂಸ್ಥಾಪಕ ಅಧ್ಯಕ್ಷ ಶ್ರೀ ಶರಚ್ಚಂದ್ರಬೋಸರು ಮುಂಬಯಿಯಲ್ಲಿ ಪತ್ರಿಕೋದ್ಯೋಗಿಗಳ ಪರಿಷತ್ತಿನಲ್ಲಿ ಹೇಳಿದರು.

ಮುಂಬಯಿ ಸರಕಾರದವರು ಬಟ್ಟೆಯ ಲಾಯಸೆನ್ಸಿಂಗ ಪದ್ಧತಿಯನ್ನು ಕೂಡಲೆ ಸಡಲಿಸಿ ಸಿರಕಳ ಲಾಯಸೆನ್ಸಿಗಾಗಿ ಅರ್ಜಿಮಾಡುವ ವ್ಯಾಪಾರಿಗಳಿಗೂ ಲಾಯಸೆನ್ಸು ಕೊಡಲು ನಿರ್ಧರಿಸಿದ್ದಾರೆ. ಈ ಲಾಯಸೆನ್ಸಿಗಾಗಿ ಮುಂಬಯಿ ಅಹಮದಾಬಾದಗಳಲ್ಲಿ ವರ್ಷಕ್ಕೆ ೨೫ ರೂ ಮತ್ತು ಇತರ ಕಡೆಗಳಲ್ಲಿ ೧೨॥ ರೂಪಾಯಿ ಇಡಲಾಗುವದು.

ಹಿಂದುಸ್ತಾನದ ನಿವಾಸಿಗಳೆಂದು ಹೇಳಿಕೊಳ್ಳುವ ಮತ್ತು ಶಾಸನಸಭೆಯ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರಿರಬೇಕೆಂದು ಇಚ್ಛಿಸುವ ಗೋವಾನಿಗಳು ಪಠಾಣರು ಮತ್ತು ಇರಾಣೀಯರು ಮುಂತಾದವರು. ಆಯಾ ಜಿಲ್ಲಾ ಕಲೆಕ್ಟರರ ಕಚೇರಿಯಲ್ಲಿ ಸಪ್ಟಂಬರ ೨೨ ರ ವರೆಗೆ ತಮ್ಮ ಹಕ್ಕನ್ನು ಪ್ರಸ್ಥಾಪಿಸಿಕೊಳ್ಳಬಹುದು ಎಂದು ಮುಂಬಯಿ ಸರಕಾರದವರ ಪ್ರಕಟನೆ ಹೊರಟಿರುವದು.

ಇದೇ ಅಗಷ್ಟ ಒಂದನೇ ತಾರೀಖಿನಿಂದ ಮುಂಬಯಿ ಪ್ರಾಂತದಲ್ಲಿಯ ಕುಡುಕರಿಗೆ ಪ್ರತಿದಿನ ಎಂಟು ಡ್ರಾಮಿಗಿಂತ ಹೆಚ್ಚು ಸೇಂದಿ ಸಿಗಲಾರದು. ಇಂದಿನಿಂದ ೧೯೫೦ ರ ಮಾರ್ಚ ೩೧ ರ ವರೆಗೆ ಸೇಂದಿ ಅಂಗಡಿಗಳು ವಾರದಲ್ಲಿ ನಾಲ್ಕು ದಿನ ಮುಚ್ಚುವವು. ಅಗಷ್ಟದಿಂದ ಮಾರ್ಚ ವರೆಗೆ ಸೇಂದಿಗಾಗಿ ಕಟ್ಟುತಿದ್ದ ಈಚಲಗಿಡಗಳ ಸಂಖ್ಯೆ ೧೯೪೮-೪೯ ಕ್ಕೆ ಮುಕ್ಕಾಲು ಪಾಲು ಕಡಮೆಯಾಗಿದೆಯೆಂದು ತಿಳಿಯುತ್ತದೆ.

ಹಿಂದುಸ್ತಾನ ಸರಕಾರದ ಸುದ್ದಿ ಮತ್ತು ಆಕಾಶವಾಣಿ ಖಾತೆಯ ಮಂತ್ರಿಗಳಾದ ಶ್ರೀ ದಿವಾಕರ ರಂಗರಾಯರು ಚಲಚ್ಚಿತ್ರ ಸಲಹೆ ಸಮಿತಿಗಾಗಿ ಕಳೆದ ೧೯ ಕ್ಕೆ ಮುಂಬಯಿಗೆ ಬಂದು ತಮ್ಮ ಕಾರ್ಯ ಮುಗಿಸಿಕೊಂಡು ೨೫ ಕ್ಕೆ ದಿಲ್ಲಿಗೆ ಮರಳಿದರು.

ಪ. ಬಂಗಾಲ

ಹಿಂದುಸ್ತಾನದ ಕ್ರಿಕೆಟ ಕಪ್ತಾನರಾದ ಲಾಲಾ ಅಮರನಾಥರು ತಮ್ಮನ್ನು ಕ್ರಿಕೆಟ ರಂಗದಿಂದ ಹೊರಗೆಹಾಕಿದ್ದರ ವಿರುದ್ಧ ಹಿಂದುಸ್ತಾನ ಕ್ರಿಕೆಟ ಬೋರ್ಡಿನ ಮೇಲೆ ದಾವೆ ಮಾಡಲಿರುವರೆಂದು ತಿಳಿಯುತ್ತದೆ.

ದಕ್ಷಿಣ ಕಲಕತ್ತೆಯಲ್ಲಿ ಟ್ಯಾಕ್ಸಿಯಲ್ಲಿ ಕುಳಿತು ರಾಜಮಾರ್ಗದಿಂದ ಸಾಗಿದ್ದ ಇಬ್ಬರನ್ನು ಪೋಲೀಸರು ಸಂಶಯದಿಂದ ಝಡತಿ ಮಾಡಲಾಗಿ ಅವರ ಹತ್ತರ ಒಂದು ಪಿಸ್ತೂಲು ಮತ್ತು ಕೆಲವು ಕಾಡತೂಸುಗಳು ದೊರೆತವು. ಅವರಿಬ್ಬರನ್ನು ಬಂಧಿಸಲಾಗಿದೆ. ಹೌರಾ ಶಿವಪುರದಲ್ಲಿ ಒಂದು ಬಾಂಬು ಸಿಕ್ಕಿದೆ.

ಕಾಂಗ್ರೆಸ ಕಾರ್ಯಕಾರೀ ಸಮಿತಿಯ ಸದಸ್ಯರಾದ ಡಾ. ಪಿ. ಸಿ. ಘೋಷರು ಕಲಕತ್ತೆಯಲ್ಲಿ ಕಾಂಗ್ರೆಸ ಕಾರ್ಯಕರ್ತರನ್ನುದ್ದೇಶಿಸಿ ಭಾಷಣ ಮಾಡುತ್ತ ಇತ್ತೀಚೆ ಭಯೋತ್ಪಾದಕ ಚಟುವಟಿಕೆ ದೇಶದಲ್ಲಿ ಹೆಚ್ಚಾಗಿ ನಡೆದಿದ್ದರಿಂದ ಅದರಿಂದ ದೇಶವನ್ನು ರಕ್ಷಿಸಿಕೊಳ್ಳಬೇಕಾದರೆ ಕಾಂಗ್ರೆಸ್ಸಿಗರು ಧೈರ್ಯದಿಂದ ವರ್ತಿಸುವದು ಅವಶ್ಯವಾಗಿದೆ ಎಂಬಿವು ಮುಂತಾಗಿ ಹೇಳಿದರು.

ಪಾಕಿಸ್ತಾನಕ್ಕೆ ಹೊರಟ ಒಬ್ಬ ಪ್ರವಾಸಿಯನ್ನು ಸೆಲ್ದಾ ಸ್ಟೇಶನದಲ್ಲಿ ಝಡ್ತಿ ಮಾಡಲಾಗಿ ಅವನ ಹತ್ತರ ೧೨ ಸಾವಿರ ರೂಪಾಯಿಗಳ ನೋಟುಗಳು ಬಲ್ಪು ಮೊದಲಾದವು

ಮದ್ರಾಸ

ತೆಲಗು ಪ್ರಾಧಾನ್ಯವಾದ ಭಾಗ ಸಂಪೂರ್ಣ ತೆಲಗು ಭಾಷೆಯುಳ್ಳ ಜಿಲ್ಲೆಗಳನ್ನು ಒಂದುಗೂಡಿಸಿ ಆಂಧ್ರ ಪ್ರಾಂತವನ್ನು ಕೂಡಲೆ ರಚಿಸಬೇಕೆಂದು ಆಂಧ್ರದ ಪ್ರಮುಖ ಕಾಂಗ್ರೆಸ್ಸಿಗರಾದ ಶ್ರೀ ಕೊಂಡಾ ವೆಂಕಟಪ್ಪಯ್ಯನವರು ಅಖಿಲ ಆಂಧ್ರ ಸಮ್ಮೇಲನಅಧ್ಯಕ್ಷಪೀಠದಿಂದ ವಿಜಯವಾಡಾದಲ್ಲಿ ೨೬ ಕ್ಕೆ ಭಾಷಣ ಮಾಡುತ್ತ ಹೇಳಿದರು. ಪ್ರಾಂತೀಯ ಕಾಂಗ್ರೆಸ್ಸಿನ ಅಧೀನದಲ್ಲಿರುವ ಭಾಗವನ್ನು ಒಂದುಗೂಡಿಸಿ ವಾದಗ್ರಸ್ತ ವಿಷಯಗಳನ್ನು ಗಡಿ ನಿರ್ಣಯ ಸಮಿತಿಗೆ ಬಿಟ್ಟುಕೊಡಬೇಕೆಂದೂ ಅವರು ಅಭಿಪ್ರಾಯಪಟ್ಟರು.

ಮದ್ಯಪಾನ ಪ್ರತಿಬಂಧ ಹಾಗು ಕುದುರೆ ಜೂಜಿನ ಪ್ರತಿಬಂಧ ಇವುಗಳ ಬಗ್ಗೆ ಸರಕಾರದವರು ಸ್ವೀಕರಿಸಿದ ಧೋರಣವನ್ನು ಬದಲಿಸುವದು ಸರಕಾರಕ್ಕೆ ಸಾಧ್ಯವಿಲ್ಲವೆಂದು ಲೋಕೋಪಯೋಗಿ ಮತ್ತು ಸುದ್ದಿಖಾತೆಯ ಮಂತ್ರಿಗಳಾದ ಶ್ರೀ ಭಕ್ತವತ್ಸಲಂ ಇವರು ಹೇಳಿದರು.

ಮದುರಾ ನಗರ ಕಾಂಗ್ರೆಸ ಸಮಿತಿಯನ್ನು ಸುಡಲು ೨೪ ಕ್ಕೆ ಸುಮಾರು ೧೦೦ ಜನರು ಪುಂಡರು ಪ್ರಯತ್ನಿಸಿದ್ದಕ್ಕೆ ಮತ್ತು ರಾಷ್ಟ್ರೀಯ ಧ್ವಜವನ್ನು ಸುಟ್ಟಿದ್ದರ ಸಂಬಂಧವಾಗಿ ಪೋಲೀಸರು ಕಮ್ಯುನಿಸ್ಟರೆಂದು ಹೇಳಲಾಗುತಿರುವ ೩೦ ಜನರನ್ನು ಸೆರೆಹಿಡಿದಿದ್ದಾರೆ.

ಮಲಾಯಾದಲ್ಲಿ ಹಿಂದೀ ಕೂಲಿಕಾರ ಧುರೀಣರಾದ ಸಾಂಬಶಿವ ಇವರಿಗೆ ಬಂದೂಕು ಇಟ್ಟುಕೊಂಡ ಬಗ್ಗೆ ಮಲಾಯಾ ಭದ್ರತೆಯ ಕಾನೂನಿನನ್ವಯ ಗಲ್ಲಿನಶಿಕ್ಷೆ ವಿಧಿಸಲಾಗಿದ್ದಿತಷ್ಟೇ. ಈ ಶಿಕ್ಷೆಯ ವಿರುದ್ಧ ಅವರು ಪ್ರೀವಿಕೌನ್ಸಿಲ್ಲಿಗೆ ಅಪೀಲ ಮಾಡಿದ್ದು ಅದು ಸ್ವೀಕೃತವಾಗಿದೆ.

ಅರವಿಂದ ಬಾಬುಗಳು ಬಂಗಾಲಕ್ಕೆ ಮರಳಿ ಬಂದು ತಮ್ಮ ಪ್ರಾಂತದ ಪರಿಸ್ಥಿತಿಯನ್ನು ಸುಧಾರಿಸಬೇಕೆಂಬ ಕಲಕತ್ತೆಯ ಜನರ ಬೇಡಿಕೆಯ ಬಗ್ಗೆ ವಿಚಾರಿಸಲು ಅರವಿಂದಾಶ್ರಮದ ವಕ್ತಾರನು ಈ ಬಗ್ಗೆ ಆಶ್ರಮದ ಅಧಿಕಾರಿಗಳಿಗೆ ಯಾವ ಸುದ್ದಿಯೂ ಬಂದಿಲ್ಲ. ಆದುದರಿಂದ ಈ ಬಗ್ಗೆ ಏನನ್ನೂ ಹೇಳಲು ಬರುವದಿಲ್ಲ ಎಂದು ಮುಂತಾಗಿ ಹೇಳಿದನು.

ಕಳೆದ ಫೆಬ್ರುಅರಿಯಲ್ಲಿ ಕಮ್ಯುನಿಸ್ಟರು ಅರುಂಗಕೊಟ್ಟಾಯಿಯೆಂಬಲ್ಲಿ ಪೋಲೀಸರ ಮೇಲೆ ದಾಳಿಮಾಡಿ ಅವರಿಂದ ಆಯುಧಗಳನ್ನು ಕಸಿದುಕೊಂಡು ಹೋಗಿದ್ದರಷ್ಟೆ. ಆ ಸಂಬಂಧದಲ್ಲಿ ಮತ್ತು ಮದುರೆಯಿಂದ ೩೦ ಮೈಲುಗಳ ಮೇಲೆ ನಡೆದ ದರೋಡೆಯೊಂದರ ಸಂಬಂಧದಲ್ಲಿ ಪೋಲೀಸರು ಕೆಲ ಮನೆಗಳ ಝಡತಿ ಮಾಡಲಾಗಿ ೬ ತೋಟೆಗಳ ಒಂದು ಪಿಸ್ತೂಲು ಎರಡು ತೋಟೆಯ ಬಂದೂಕು ಹಾಗು ಮದ್ದುಗುಂಡುಗಳು ದೊರೆತಿವೆ.

ಹೊಸದಿಲ್ಲಿ

ಆರ್. ಎಸ್. ಎಸ್. ದ ಮೇಲಿನ ನಿರ್ಬಂಧವನ್ನು ತೆಗೆದುಹಾಕದ ಕಾರಣದಿಂದಾಗಿ ಆ ಸಂಸ್ಥೆಯ ಪ್ರಮುಖ ಪತ್ರಿಕೆಗಳಾದ ಆರ್ಗನಾಯಜರ ಮತ್ತು ಭಾರತವರ್ಷ ಇವೆರಡು ಪತ್ರಿಕೆಗಳು ಪ್ರಕಟವಾಗಲು ಕಮೀಶನರರು ಅಪ್ಪಣೆಕೊಟ್ಟಿರುತ್ತಾರೆ. ನಾಲ್ಕು ತಿಂಗಳ ಹಿಂದೆ ಆ ಮುದ್ರಣಾಲಯಕ್ಕೆ ಹಾಕಿದ್ದ ಬೀಗವನ್ನು ತೆಗೆಯಲು ಅಜ್ಞಾಪಿಸಲಾಗಿದೆ.

ಲಾಭಾಂಶ ಯೋಜನೆಯ ಬಗ್ಗೆ ಒಡಂಬಡಿಕೆಯಾಗದೆ ಕೂಲಿಕಾರ ಸಲಹೆ ಸಮಿತಿಯ ಸಭೆ ಮುಕ್ತಾಯವಾಯಿತು. ಯೋಗ್ಯವೇತನ ಸಮಿತಿಯ ವರದಿಯನ್ನು ಮಾತ್ರ ಸ್ವೀಕರಿಸಲಾಯಿತು.

ಲಂಡನದಲ್ಲಿ ನಡೆದ ಕಾಮನ್‌ವೆಲ್ಥ ರಾಷ್ಟ್ರಗಳ ಹಣಕಾಸಿನ ಸಂಬಂಧದ ಮಾತುಕತೆಗಳಿಗಾಗಿ ಹೋಗಿದ್ದ ಡಾ. ಜಾನ ಮಥಾಯಿಯವರು ಮೂರುವಾರ ಅಲ್ಲಿ ಇದ್ದು ಹಿಂದುಸ್ತಾನಕ್ಕೆ ಮರಳಿರುವರು. ಅವರ ಕೂಡ ಹೋದವರೂ ಮರಳಿ ಬಂದಿರುವರು.

ಸರಕಾರದ ನೌಕರರ ನಿವೃತ್ತಿ ವಯಸ್ಸು ಈಗಿರುವಂತೆ ೫೫ ಇರಬೇಕೆಂದು ಹಿಂದುಸ್ತಾನ ಸರಕಾರದವರು ನಿರ್ಣಯಿಸಿ ಪ್ರಕಟಿಸಿರುವರು. ಕೇಂದ್ರ ಸಂಬಳ ಸಮಿತಿಯವರು ಇದನ್ನು ೫೫ ರಿಂದ ೫೮ ಕ್ಕೇರಿಸಬೇಕೆಂದು ಸೂಚಿಸಿದ್ದರು. ಸರಕಾರದವರು ಈ ಬಗ್ಗೆ ವಿಚಾರ ಮಾಡಿ ಬದಲಾವಣೆ ಅವಶ್ಯವಿಲ್ಲೆಂದು ನಿರ್ಣಯಿಸಿದರು.

ರೇಲ್ವೆ ಅಧಿಕಾರಿಗಳಿಗೆ ಶಿಕ್ಷಣ ಕೊಡುವದಕ್ಕಾಗಿ ಬಡೋದೆಯಲ್ಲಿ ಕಾಲೇಜನ್ನು ಸ್ಥಾಪಿಸಲು ಹಿಂದುಸ್ತಾನ ಸರಕಾರವು ನಿರ್ಧರಿಸಿದೆ. ಇದೇ ಅಕ್ಟೋಬರದಿಂದ ಅದು ಪ್ರಾರಂಭವಾಗಬಹುದು. ರೇಲ್ವೆ ಖಾತೆಯಲ್ಲಿಯ ಹಿರಿಯ ಅಧಿಕಾರಿಗಳು ಈ ಕಾಲೇಜನ್ನು ನಡೆಸುವರು.

ಪ್ರಾಂತಗಳಲ್ಲಿ ಮೇಲ್ಮನೆ (ವಿಧಿಮಂಡಲ) ಸ್ಥಾಪಿಸುವ ಬಗ್ಗೆ ಘಟನೆಯ ಕರಡಿನಲ್ಲಿ ಈಗಿರುವ ಕಲಮನ್ನು ತೆಗೆದುಹಾಕಿ ಆ ವಿಷಯವನ್ನು ಭಾವೀ ಪಾರ್ಲಿಮೆಂಟಿಗೆ ಬಿಟ್ಟುಕೊಡಬೇಕೆಂಬ ವಿಚಾರವಿದೆಯೆಂದು ತಿಳಿಯುತ್ತದೆ.

ಕೊಡಗು

ಈಗಿರುವಂತೆ ಜಾತೀಯತೆ ತತ್ವದ ಮೇಲೆ ಪೌರ ಸಭೆಗಳು ಚುನಾವಣೆಗಳನ್ನು ನಡೆಸದೆ ಅವುಗಳನ್ನು ಒಂದು ವರುಷ ಮುಂದೆ ಹಾಕಿ ಪ್ರೌಢಮತದಾನ ತತ್ವಾನುಸಾರವಾಗಿ ನಡೆಸಬೇಕೆಂದು ಮಡಿಕೇರಿ ನಗರ ಸಭೆಯವರು ನಿರ್ಣಯಿಸಿರುವರು ವೀರಾಜಪೇಟೆ ನಗರ ಸಭೆಯವರು ಈಗಿನ ಪದ್ಧತಿಯಂತೆಯೆ ಚುನಾವಣೆ ನಡೆಸಬೇಕೆಂದು ತೀರ್ಮಾನಿಸಿದ್ದಾರೆ. ಮುಂದಿನ ತಿಂಗಳು ಚುನಾವಣೆ ನಡೆಯಲಿದೆ.

ಕೊಡಗು ಜಿಲ್ಲಾಬೋರ್ಡಿನ ವಿಶೇಷ ಸಭೆ ೨೩ ಕ್ಕೆ ಸೇರಿ ತನ್ನ ಅಧೀನದಲ್ಲಿರುವ ಪ್ರಾಥಮಿಕ ಶಿಕ್ಷಣದ ಆಡಳಿತೆಯನ್ನು ಸರಕಾರಕ್ಕೆ ವಹಿಸಿಕೊಡಬೇಕೋ ಹೇಗೋ ಎಂಬ ಬಗ್ಗೆ ಚರ್ಚೆಮಾಡಿ ಸರಕಾರಕ್ಕೆ ವಹಿಸಿಕೊಡುವದು ಬೇಡವೆಂದು ತೀರ್ಮಾನಿಸಲಾಯಿತು.

ಕಾಂಗ್ರೆಸ್ಸಿಗೆ ಆಪದ್ದೇಕೆ?

(೩ ನೇ ಪುಟದಿಂದ)

[illegible] ಕಾಂಗ್ರೆಸ್ಸು [illegible] (ಕಮ್ಯುನಿಸ್ಟ [illegible]) [illegible]

ಕಾಂಗ್ರೆಸ್ಸು ಶುದ್ಧವಾಗಲಿ

ದೇಶದಲ್ಲಿ ಬಿಕ್ಕಟ್ಟಿದ್ದಾಗ ಎಲ್ಲ ಬಗೆಯ ಶಕ್ತಿಗಳ ಸಹಾಯವನ್ನು ನಾವು ಪಡೆಯಬೇಕಾಗಿತ್ತು. ಆದದರಿಂದ ಕಾಂಗ್ರೆಸ್ಸಿನಲ್ಲಿ ಅನೇಕ ಹೊರಗಿನ ಜನರು ಸೇರಿಕೊಂಡರು. ದೇಶವನ್ನು ದೃಢತರವಾದ ಬುನಾದಿಯಮೇಲೆ ನಿಲ್ಲಿಸಲು ಇದು ಅವಶ್ಯವಾಗಿತ್ತು. ಆದರೆ ಇಂದು ಬಿಕ್ಕಟ್ಟು ಕಳೆದು ಹೋಗಿ ಅಖಿಲ [illegible] ಸಮಸ್ಯೆಗಳು ಬಿಡಿಸಲ್ಪಟ್ಟಿವೆಯೆಂದು ನಾವು ಗ್ರಹಿಸಿಕೊಳ್ಳಬೇಕಾಗಿದೆ. ಇನ್ನು ಕಾಂಗ್ರೆಸ್ಸನ್ನು ಉಳಿಸಬೇಕೆಂದಿದ್ದರೆ ನಾವು ಅದರಲ್ಲಿ [illegible] ಹೊರಗಿನ ತತ್ವಗಳನ್ನು ತೆಗೆದೊಗೆಯಬೇಕು. ಸಂಘಟನೆಯಲ್ಲಿ ಶಿಸ್ತುಭಂಗ ಮಾಡಿದವರ ಮೇಲೆ ಕ್ರಮ ಕೈಕೊಳ್ಳುವಲ್ಲಿ ನಾವು ಸಾಕಷ್ಟು ನಿಷ್ಠುರರಾಗಿಲ್ಲ. ನಾವಿನ್ನು ಒಂದು ಪಕ್ಷವೆನಿಸಿದರೂ ಚಿಂತೆಯಿಲ್ಲ. ಇಡಿ ರಾಷ್ಟ್ರದ ಪ್ರತಿನಿಧಿ [illegible] ಹಂಬಲು ಬಿಟ್ಟುಬಿಡೋಣ. ಒಂದೇ ಧ್ಯೇಯಕ್ಕೆ ನಿಷ್ಠರಾಗಿ ದುಡಿಯುವವರು ನಮಗೆ ಸಾಕು. ಹಾಗೆ ಮಾಡಿದರೂ ದೇಶದಲ್ಲಿ ನಾವೇ ಅತಿ ಬಲಿಷ್ಠ ಪಕ್ಷವಾಗಿ ಉಳಿಯುತ್ತೇವೆ. ಇಂದಿಗೂ ನಾವು ಸಾಕಷ್ಟು ಕಳಕಳಿ ತೋರಿಸಿದರೆ ಜನರು ನಮಗೆ ಬೆಂಬಲ ಕೊಟ್ಟೇ ಕೊಡುವರು.

ನಾವು ಸ್ವಾತಂತ್ರ್ಯದ ಹಿಂದಿನ ದಿವಸಗಳಿಗೆ ಮರಳಬೇಕು. ೧೯೪೭ ಅಗಷ್ಟ ೧೫ ಕ್ಕೆ ನಮ್ಮ ಹೋರಾಟವು ಮುಗಿಯಿತೆಂದು ತಿಳಿಯುವದು ತಪ್ಪು. ತ್ಯಾಗ ಕ್ಲೇಶಾನುಭವಗಳ ದಿನಗಳಿನ್ನು ಕಳೆದಿಲ್ಲ. ಲಾಠಿಯೇಟು ತಿನ್ನುವುದೂ ಸೆರೆಮನೆಗೆ ಹೋಗುವುದೂ ಮಾತ್ರ ತ್ಯಾಗದ ಮಾರ್ಗಗಳಲ್ಲ. ಅಧಿಕಾರಸಂಪಾದನೆಯ ಸಂದರ್ಭದಲ್ಲೂ ನಾವು ಜನರ ಬೆಂಬಲಕ್ಕೆ ನಿಂತರೆ, ಮತ್ತು ನಾವು ಸರಕಾರದಲ್ಲಿರಲಿ ಹೊರಗಿರಲಿ, ಸರಳ ಜೀವನವನ್ನು ನಡೆಸಿದರೆ, ಜನರು ನಮ್ಮ ಸಂಗಡವೇ ಬರುವರು. ಕಟ್ಟಕಡೆಗೆ ಕ್ಲೇಶಗಳ ಭಾರ ಹೊತ್ತವನೇ ಜನರ ಹೃದಯವನ್ನು ಆಳುತ್ತಾನೆ.

ಪಾಕಿಸ್ತಾನದಿಂದ ಹಿಂದುಸ್ತಾನಕ್ಕೆ ಬರುವದಕ್ಕಾಗಿ ಕರಾಚಿಯಲ್ಲಿ ಕೊಟ್ಟ ಪರವಾನ್ಗಿಗಳನ್ನು ರದ್ದುಪಡಿಸುತ್ತಿದ್ದುದು ಹಿಂದುಸ್ತಾನ ಸರಕಾರದ ಗಮನಕ್ಕೆ ಬಂದಿದೆಯೆಂದೂ ಅಂಥ ರದ್ದುಪಡಿಸಿದ ಪರವಾನ್ಗಿಗಳ ಮೇಲೆ ಪ್ರಯಾಣ ಮಾಡುವವರನ್ನು ಬಂಧಿಸಲಾಗುವದೆಂದೂ ಹಿಂದುಸ್ತಾನ ಸರಕಾರದ ಪರವಾಗಿ ಸಾರಲಾಗಿದೆ.

ಅಮೇರಿಕನ್ನರ ಬಗ್ಗೆ ಆಂಗ್ಲರ ಗುಪ್ತಾಭಿಪ್ರಾಯ

ರಾಷ್ಟ್ರೀಯ ಭಾವನೆಯ ಶೈಥಿಲ್ಯ— ಪೂರ್ವಗ್ರಹದುಷ್ಟ ದೃಷ್ಟಿ— ಹೆಣ್ಣಿನ ಅತ್ಯವಲಂಬನ— ನೀತಿಯ ಅದೃಢತೆ— ಅಪವ್ಯಯಕ್ಕೆ ಪ್ರೋತ್ಸಾಹ

ಹಿಂದುಸ್ಥಾನವಿಂದು ಸ್ವತಂತ್ರವಾಗಿದೆ. ಆದರೆ ರಾಜಕಾರಣದಲ್ಲಿ ಅದಿನ್ನೂ ಬಾಲ್ಯಾವಸ್ಥೆಯಲ್ಲಿದೆ. ಜಗತ್ತಿನ ರಾಜತಂತ್ರದಲ್ಲಿ ಹಳೆಯಂಗಡಿಕಾರ ಎನಿಸಿದ ಬ್ರಿಟನ್ನು ಅನುಸರಿಸುತ್ತಿರುವ ಒಳಸೂತ್ರವೊಂದೀಗ ಹೊರಬಿದ್ದಿದೆ. ಬ್ರಿಟಿಶ್ ಸರಕಾರವು ತನ್ನ ರಾಜತಂತ್ರಜ್ಞರಿಗೆ ಅಮೇರಿಕನ್ನರೊಡನೆ ಹೇಗೆ ವರ್ತಿಸಬೇಕೆಂಬ ಆದೇಶವನ್ನು ವಿವರಿಸಿದ ಒಂದು ಗುಪ್ತ ಪುಸ್ತಕ ಅಮೇರಿಕನ್ನರ ಕೈಗೆ ಸಿಕ್ಕಿ, ಅದರ ವಿವರ "ನ್ಯೂಯಾರ್ಕ ಹೆರಾಲ್ಡ್ ಟ್ರಿಬ್ಯೂನ್" ಎಂಬ ಪತ್ರಿಕೆಯಲ್ಲಿ ಹೊರಬೀಳುವಂತಾಗಿದೆ:

ಸ್ವಭಾವಯಾತ್ರಿಗಳಲ್ಲಿ ಗೆಳೆಯರನ್ನು ಗಳಿಸಬೇಕು. ಆಗ ಮನುಷ್ಯರಿಗೆ ಭೇದಬುದ್ಧಿ ಉತ್ಪನ್ನವಾಗಿರುತ್ತದೆ. ಅಂಥ ಸಮಯ ನೋಡಿ ಬ್ರಿಟಿಶ್ ರಾಜತಂತ್ರಜ್ಞರು ಅಮೇರಿಕನ್ನರನ್ನು ಒಲಿಸಿಕೊಳ್ಳಲು ಯತ್ನಿಸಬೇಕು. ಅನನುಭವಿಗಳಂತೆ ಯಾವಳಾದರೂ ಅಮೇರಿಕನ್ ಹುಡುಗಿಯ ಬಲೆಗೆ ಬಿದ್ದು ನಷ್ಟ ಹೊಂದಬಾರದು; ಆ ಬಗ್ಗೆ ಬಹಳ ಎಚ್ಚರಿಕೆ ತೆಗೆದುಕೊಳ್ಳಬೇಕು. ಸಾಮಾನ್ಯವಾಗಿ ದಡ್ಡರಿರುವ ಅಮೇರಿಕನ್ನರೊಡನೆ ವ್ಯವಹರಿಸುವ ಚಾಕಚಕ್ಯತೆಯನ್ನು ಬೆಳೆಸಿಕೊಳ್ಳಬೇಕು.

ಆಭಾಸಿಕ ರಾಷ್ಟ್ರೀಯ ಮನೋಭಾವ

ಅಮೇರಿಕವನ್ನು ಒಂದು ರಾಷ್ಟ್ರವೆನ್ನುವದು ಕಾಯದೆಯಂತೆ ಮಾತ್ರ. ಒಳ ಹೊಕ್ಕು ನೋಡಿದರೆ ಅಲ್ಲಿ ಹೆಚ್ಚಿನ ರಾಷ್ಟ್ರೀಯತೆಯಿಲ್ಲ. ಅಮೇರಿಕನ್ನರೇನೋ "ಅಮೇರಿಕನ್" ಜೀವನ ಕ್ರಮ, ಅಮೇರಿಕನ್ ಶೈಲಿ ಹಾಗೆ ಹೀಗೆ ಎಂದು ಜಂಭ ಕೊಚ್ಚಿಕೊಳ್ಳುತ್ತಾರೆ. ಆದರೆ ಅವೆಲ್ಲ ವ್ಯರ್ಥಾಲಾಪ, ಹುರುಳಿಲ್ಲದ ಹೊಟ್ಟು. ಅದಕ್ಕೇನಾದರೂ ಅರ್ಥವಿದೆಯೆಂದರೆ ಇಷ್ಟೆ: ಹೆಚ್ಚು ಕಡಿಮೆ ಒಂದು ವ್ಯಕ್ತಿಗೆ ಮನಸ್ಸಿಗೆ ಬಂದ ಹಾಗೆ ಮಾಡಲು ಅವಕಾಶವಿರುವುದು; ಅಂದರೆ ಪತ್ರಿಕಾ ಭಾಷೆಯಲ್ಲಿ ಅದಕ್ಕೆ "ಒರಟು ವ್ಯಕ್ತಿತ್ವ" ಎನ್ನಬಹುದು. ಕಳೆದ ೬೦ ವರ್ಷಗಳಿಂದ ಹೊರಗಿನವರು ಬಂದು ಬಹು ಸಂಖ್ಯೆಯಿಂದ ಅಮೇರಿಕದ ಸಂಯುಕ್ತ ಸಂಸ್ಥಾನದಲ್ಲಿ ವಸತಿನಿಂದರು. ಅವರ ಅಮೇರಿಕೀಕರಣವಾದುದು ರಾಷ್ಟ್ರೀಯ ದೃಷ್ಟಿಯಿಂದಲ್ಲ, ಒಂದೇ ಸರಕಾರದ ಆಳಿಕೆಗೆ ಒಳಪಟ್ಟದ್ದರಿಂದ ಮಾತ್ರ. ಈ ಮಾತು ಅಮೇರಿಕದ ವಿದೇಶೀಯರೊಡನೆ ಇಟ್ಟುಕೊಂಡ ರಾಜಕೀಯ ಸಂಬಂಧಗಳಿಗೂ ಅನ್ವಯಿಸುತ್ತದೆ. ಆದುದರಿಂದ ಬ್ರಿಟಿಶ್ ರಾಜತಂತ್ರಜ್ಞರು ಜಯಹೊಂದಬೇಕಾದರೆ ಅಮೇರಿಕನ್ನರೊಡನೆ ಇಲ್ಲಿ ಹೇಳಿದಂತೆ ನಡೆದುಕೊಳ್ಳಬೇಕು.

"ಅಮೇರಿಕದ ರಾಷ್ಟ್ರ" ವೆಂದರೆ ಒಂದು ಕ್ಷತ್ರ ಕುಟುಂಬವಲ್ಲ, ಮನೆಯಲ್ಲ. ಅದರ ಇತಿಹಾಸದ ಪರಿಣಾಮವಾಗಿ ಅಲ್ಲಿ ವೈಯಕ್ತಿಕತೆ ಬೆಳೆದು ಬಂದಿದೆ. ಅಮೇರಿಕನ್ನರ ತಾತ ಮುತ್ತಾತರು ಜಗತ್ತಿನ ನಾನಾ ಭಾಗಗಳಿಂದ ತಪ್ಪಿಸಿಕೊಂಡು ಓಡಿಬಂದವರು. ಆ ತಪ್ಪಿಸಿಕೊಂಡು ತಿರುಗುವ ಬುದ್ಧಿ ಅವರಲ್ಲಿ ಅಂತರ್ಗತವಾಗಿ, ಅನುವಂಶಿಕವಾಗಿ ಬಂದಿದೆ. ಇದು ಅವರ ಅಂತಾರಾಷ್ಟ್ರೀಯ ವ್ಯವಹಾರದಲ್ಲಿ ಪ್ರಕಟವಾಗಿದೆ. ಇದೇ ಅವರ ವೈಯಕ್ತಿಕತೆ ಮತ್ತು ಪ್ರತ್ಯೇಕತಾಬುದ್ಧಿಗಳಿಗೆ ಕಾರಣ. ಇದರಿಂದ ರಾಷ್ಟ್ರ ಪ್ರೇಮ ಸಡಿಲಾಗಿ ಸರಕಾರಕ್ಕಿಂತ ವ್ಯಕ್ತಿಗೇ ಹೆಚ್ಚಿನ ಮಹತ್ವಕೊಡುವ ಬುದ್ಧಿಯುಂಟಾಗಿದೆ. ರಾಷ್ಟ್ರೀಯ ಭಾವನೆಯ ಬೆಳವಣಿಗೆಗೆ ಇದು ಕಂಟಕಪ್ರಾಯ.

ಆಂಗ್ಲರ ಬಗ್ಗೆ ಅಸದಭಿಪ್ರಾಯ

ಸಾಮಾನ್ಯ ಬ್ರಿಟಿಶರು ಅಮೇರಿಕನ್ನರನ್ನು ಸಾಕಿ ಬೆಳೆಸಿದ ಸಹನೆಯಿಂದಲೂ ಶ್ರೇಷ್ಠತೋಪಮ ಬುದ್ಧಿಯಿಂದಲೂ ನೋಡುತ್ತಾರೆ. ಇದರ ಫಲವಾಗಿ ತಮ್ಮ ಬಗ್ಗೆ ಅಮೇರಿಕನ್ನರ ಮನದಲ್ಲಿ ಬಲವಾದ ಪೂರ್ವಗ್ರಹಗಳಿರುವುದು ಕಂಡುಬಂದು ಒಮ್ಮೊಮ್ಮೆ ಅವರು ಜಾಗ್ರತರಾಗುವಂತಾಗುತ್ತದೆ. ಈ ಪೂರ್ವಗ್ರಹಗಳು ಐತಿಹಾಸಿಕವಾದ ಅನೇಕ ಸಂಪ್ರದಾಯಗಳನ್ನು ಆಧರಿಸಿ ನಿಂತಿವೆ. ಸ್ವಾತಂತ್ರ್ಯ ಸಂಪಾದಿಸಿಕೊಂಡವರಲ್ಲೇ ಇಂಥ ಪೂರ್ವಗ್ರಹಗಳು ನೆಲಸಿರುವುದು ಆಶ್ಚರ್ಯಕರ.

ಇತಿಹಾಸವನ್ನು ತಪ್ಪಾಗಿ ಬೋಧಿಸುವುದರ ಪರಿಣಾಮವಾಗಿ ಅಮೇರಿಕದಲ್ಲಿ ಒಳಒಳಗೇ ಬ್ರಿಟಿಶ್ ವಿರೋಧ ಭಾವ ಅಡಗಿದೆ. ಅದಕ್ಕೆ ಆಂಗ್ಲ ವಿರೋಧದ ಮೇಲೆಯೇ ಅಮೇರಿಕದ ರಾಷ್ಟ್ರೀಯತೆ ಬೆಳೆದು ಬಂದಿರುವುದೇ ಕಾರಣ. ಇದನ್ನೇ ಮೂಲವನ್ನಾಗಿಟ್ಟುಕೊಂಡು ಇಂದಿಗೂ ಅಲ್ಲಿ ಮಕ್ಕಳಿಗೆ ಅಮೇರಿಕದ ಇತಿಹಾಸವನ್ನು ಕಲಿಸಲಾಗುತ್ತಿದೆ.

ಬೇರೆ ದೇಶಗಳಲ್ಲಿಗಿಂತ ಹೆಚ್ಚಾಗಿ ಅಮೇರಿಕದ ಸಂಯುಕ್ತ ಸಂಸ್ಥಾನದಲ್ಲಿ ರಾಜಕೀಯ ಬಣ್ಣ ಸಾಂದ್ರತರವಾಗಿದೆ; ಅಲ್ಲಿ ಪ್ರಾಂತ ಪ್ರಾಂತಗಳಲ್ಲಿ, ಕುಲಗಳಲ್ಲಿ, ರಾಜಕೀಯ ಪಕ್ಷಗಳಲ್ಲಿ ಪರಸ್ಪರವಾಗಿ ಬಹಳ ಪೂರ್ವಗ್ರಹಗಳಿವೆ. ದಕ್ಷಿಣೋತ್ತರ ಭಾಗದವರಲ್ಲಿ ಇಂದಿಗೂ ಕಹಿವಗೆ ಕುದಿಯುತ್ತಿದೆ. ಅದುದರಿಂದ ವಿದ್ಯಾವಂತಿಕೆಯಲ್ಲಾಗಲಿ, ದೇಶಪ್ರೇಮದಲ್ಲಾಗಲಿ ಅಮೇರಿಕನ್ನರ ಮಟ್ಟ ಆಂಗ್ಲರ ಮಟ್ಟಕ್ಕಿಂತ ಕೆಳಗಿನದಾಗಿದೆ.

ಅಲ್ಪವಿದ್ಯೆ ಮತ್ತು ಸ್ತ್ರೀದಾಸ್ಯ

ಹೊರಹೊರಗೆ ಅಮೇರಿಕನ್ನರು ಬಹಳ ವಿದ್ಯಾವಂತರಂತೆ ತೋರುತ್ತಾರೆ; ಕಾರ್ಯದಲ್ಲಿ ಅದು ಸುಳ್ಳೆಂಬುದು ತಿಳಿದು ಬರುತ್ತದೆ. ಶಿಕ್ಷಣದ ಪೂರ್ವಾವಸ್ಥೆಗಳಲ್ಲಿ ಅವರು ಬ್ರಿಟಿಶ್ ಬಾಲಬಾಲಿಕೆಯರಿಗೆ ಸರಿಸಮಾನವಿರಬಹುದು; ಆದರೆ ಪ್ರೌಢದಶೆಯಲ್ಲಿ ಎಂದೂ ಆಂಗ್ಲರನ್ನು ಸರಿಗಟ್ಟಲಾರರು. ಅಮೇರಿಕದ ಶಾಲೆಗಳಲ್ಲಿ ಬಿಡುವಿದ್ದಾಗ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ದುಡಿಯಲು ಪ್ರೋತ್ಸಾಹ ಕೊಟ್ಟು ರೊಕ್ಕದ ಬೆಲೆಯನ್ನು ತಿಳಿಸುವ ಪದ್ಧತಿಯಿದೆ. ಇದರಿಂದ ಜೀವನದಲ್ಲಿ ರೊಕ್ಕಕ್ಕಿಂತ ಹೆಚ್ಚಿನದಿಲ್ಲ ಎಂದು ಮಕ್ಕಳಾಟಿಕೆಯಲ್ಲೇ ಅವರಿಗೆ ದೃಢ ವಿಶ್ವಾಸ ನೆಲೆನಿಲ್ಲುವಂತಾಗಿದೆ. ಶಾಲೆಗಳಲ್ಲಿ ಎಷ್ಟು ತಿಂಕು ತಮ್ಮ ಅಭಿಪ್ರಾಯವನ್ನು ಹೇಳಲು ಬಾಲಬಾಲೆಯರಿಗೆ ಹೇಳುವ ಹುಚ್ಚು ಜಾಸ್ತಿ. ಇದರಿಂದ ಸ್ವಾಭಿಪ್ರಾಯ ಪ್ರಕಟನ ಶಕ್ತಿ ಬೆಳೆಯುವುದು ನಿಜವಾದರೂ ಅದರ ಜೊತೆಗೇ ಮಾತಿನಲ್ಲೇ ಕಾಲ ಕಳೆದು ಕಾರ್ಯದಲ್ಲಿ ಏನೂ ಮಾಡದ ದಂಭ ಅವರಲ್ಲಿ ಬೆಳೆಯಲು ಅವಕಾಶವುಂಟಾಗಿದೆ. ಸಹವಿದ್ಯಾಭ್ಯಾಸದ ವೈಲಕ್ಷಣ್ಯದ ದೆಸೆಯಿಂದ ಹುಡುಗರು ಯಾವಾಗಲೂ ಹುಡುಗಿಯರ ನಡುವೆ ಇರುವದಲ್ಲದೆ ಚಿಕ್ಕ ವಯಸ್ಸಿನಲ್ಲೇ ಮದುವೆಯಾಗಿ ಎಲ್ಲದಕ್ಕೂ ಹೆಂಗಸರನ್ನು ಆಶ್ರಯಿಸಿ ಬಾಳುವ ಪರಾವಲಂಬನವೃತ್ತಿ ಮತ್ತು ಸ್ತ್ರೈಣ ಬುದ್ಧಿಗಳನ್ನು ಅವಲಂಬಿಸಿದ್ದಾರೆ.

ವ್ಯವಹಾರದ ಟೊಳ್ಳುನೀತಿ

ಅಮೇರಿಕನ್ನರ ಸಾಮಾನ್ಯ ನೀತಿ ವಿಚಿತ್ರವಾಗಿದೆ. ಜಯಶಾಲಿತ್ವವೊಂದೇ ಅಲ್ಲಿ ಮಾನ್ಯತೆ ಪಡೆಯತಕ್ಕದ್ದು. [Wealth ಐಶ್ವರ್ಯ Fame ಕೀರ್ತಿ ಮತ್ತು Power ಅಧಿಕಾರ ಈ ಮೂರರ ಒಂದು ಸಂಯೋಗಕ್ಕೆ ಅಮೇರಿಕದಲ್ಲಿ Success ಜಯಶಾಲಿತ್ವ ಎನ್ನುತ್ತಾರೆಂದು ಅಮೇರಿಕದಲ್ಲಿದ್ದ ಚೀನೀ ವಿದ್ವಾಂಸ ಲಿನ್ ಯುಟಾಂಗನೆಂದಿರುವುದನ್ನು ನಾವು ಇಲ್ಲಿ ನೆನಪು ಮಾಡಿಕೊಳ್ಳಬಹುದು.] ಒಬ್ಬನು ದೊಡ್ಡ ಮನುಷ್ಯನಾದನೆಂದರೆ ಸರಿ; ಅವನು ಮಾನ್ಯ. ಅವನು ಜೀವನದಲ್ಲಿ ಹೇಗೆ ಯಶಸ್ಸನ್ನು ಸಂಪಾದಿಸಿದನೆಂದು ಯಾರೂ ಪ್ರಶ್ನಿಸುವುದಿಲ್ಲ. ಇದರ ಫಲವಾಗಿ ಪ್ರಾಮಾಣಿಕತೆ ಮತ್ತು ನೇರ ನಡೆಗಳ ಮಟ್ಟ ಆಂಗ್ಲರಲ್ಲಿರುವುದಕ್ಕಿಂತ ಬಹಳ ಕಡಿಮೆಯಾಗಿದೆ. ಅಮೇರಿಕನ್ನರೊಡನೆ ಯಾವುದಾದರೂ ಒಪ್ಪಂದ ಮಾಡಿಕೊಂಡರೆ ಅವರು ಏನಾದರೂ ಲಾಭ ಸಿಗುವುದೆಂದೆನಿಸಿದರೆ ಹೇಳದೆ ಕೇಳದೆ ಅದನ್ನು ಮುರಿದುಬಿಡುವರು. ವೈಯಕ್ತಿಕತೆಯ ಇನ್ನೊಂದು ಫಲವಾಗಿ ಅವರು ಏನಾದರೊಂದು ಮುಖ್ಯನಿರ್ಣಯ ತೆಗೆದುಕೊಳ್ಳುವಾಗ ಕೂಡ ಸಂಬಂಧಿಸಿದ ಎಲ್ಲ ಪಕ್ಷಗಳೊಡನೆಯೂ ವಿಚಾರ ವಿನಿಮಯ ಮಾಡಲು ಪ್ರಯತ್ನಿಸುವುದಿಲ್ಲ.

ಅಮೇರಿಕದ ಉದ್ಯಮ ಅದರ ಮುಂದಾಳುತನದ ಮತ್ತೊಂದು ಗುರುತಾಗಿದೆ. ಸದ್ಯಕ್ಕೆ ಅಗತ್ಯವೆನಿಸಿದ್ದನ್ನು ಮಾತ್ರ ಅಮೇರಿಕನ್ನರು ತಯಾರುಮಾಡುವರು. ಕಡೆತನಕ ಬಾಳಿಕೆ ಬರುವ ಸಾಮಾನುಗಳನ್ನು ತಯಾರಿಸಬೇಕೆಂಬ ಬುದ್ಧಿಯೇ ಅವರಿಗಿಲ್ಲ. ಇದರ ಫಲವಾಗಿ ಅವರು ರಾಶಿಗಟ್ಟಲೆಯಲ್ಲಿ ಸಿದ್ಧಮಾಡುವ ಸಾಮುಗ್ರಿಗಳೆಲ್ಲವೂ ಎರಡನೆಯ ತರಗತಿಯವಾಗುವಂತಾಗಿದೆ; ಬ್ರಿಟಿಶ್ ಸಾಮಾನುಗಳಂತೆ ಪ್ರಥಮ ಶ್ರೇಣಿಗೆ ಸೇರಲು ತಕ್ಕವಾಗಿಲ್ಲ. ಮೇಲುದರ್ಜೆಯ ಸಾಮಾನುಗಳನ್ನು, ಕೇಳುವವರೂ ಇಲ್ಲ; ಒಮ್ಮೆ ಕೇಳಿದರೆ ಅದನ್ನು ಪರದೇಶಗಳಿಂದ ತರಿಸಿ ಮಾರುವರು. ಒಟ್ಟಿನಲ್ಲಿ ಬಲಿಷ್ಠ ಪ್ರಚಾರಸಾಧನಗಳಿಂದ ಅವರು ಸುಸಂಘಟಿತವಾದ ಅಪವ್ಯಯಪದ್ಧತಿಯನ್ನು ಪ್ರೋತ್ಸಾಹಿಸುವವರಾಗಿದ್ದಾರೆ.

ಬುದ್ಧಿ ಪರಿವರ್ತನೋಪಾಯ

ಪರಿಸ್ಥಿತಿ ಹೀಗಿರುವಾಗ ಬ್ರಿಟಿಶ್ ರಾಜತಂತ್ರಜ್ಞರು ತಮ್ಮ ಸತ್ಕಲ್ಪನೆಗಳನ್ನು ಅಮೇರಿಕನ್ನರ ಮಿದುಳಿನಲ್ಲಿ ಬಿತ್ತಲು ಸುಯುಕ್ತಿಗಳನ್ನು ಅವಲಂಬಿಸಬೇಕು. ಸ್ವಾಭಾವಿಕವಾಗಿ ಅಮೇರಿಕನ್ನರು ಯಾವುದಾದರೊಂದು ವಿಷಯದ ಬಗ್ಗೆ ತಾವು ಮಾಡಿಕೊಂಡ ಅಭಿಪ್ರಾಯವೇ ನಿಜವೆಂದು ನಂಬಿ ಅದನ್ನೇ ಗಟ್ಟಿಹಿಡಿದು ನಡೆಯಲು ಉಪಕ್ರಮಿಸುತ್ತಾರೆ. ಒಮ್ಮೆಲೇ ಅವರ ಮೇಲೆ ಬಲಾತ್ಕಾರ ಅಥವಾ ಒತ್ತಾಯದ ಬುದ್ಧಿವಾದವನ್ನು ಹೇರಲು ಹೋಗಬಾರದು. ಈ ನೇರವಾದ ಕ್ರಮವನ್ನು ಬಿಟ್ಟು ಅಪ್ರತ್ಯಕ್ಷ ರೀತಿಯನ್ನು ಹಿಡಿಯಬೇಕು. ಅಪ್ರತ್ಯಕ್ಷವಾಗಿ ಅವರ ತಲೆಯಲ್ಲಿ ಆಂಗ್ಲ ಭಾವನನ್ನು ಬಿತ್ತಿ ಅದು ಅವರ ಸ್ವಂತದ ಕಲ್ಪನೆಯಾಗಿ ಅರಳುವಂತೆ ಮಾಡಬೇಕು. ಅಭಿಪ್ರಾಯವನ್ನು ವಸ್ತುಶಃ ಅವರಿಗೆ "ಮಾರ" ಬೇಕಲ್ಲದೆ ಬಲವಂತದ ಮಾಘಸ್ನಾನ ಮಾಡಿಸಲು ಹೋಗಬಾರದು. ಗುಳಿಗೆಗಳಾಗಿ ಮಾಡಿದರೆ ಆ ಕ್ರಮ ಈ ರೂಪಕ್ಕೆ ಬರುತ್ತದೆ:

(೧) ಒಳ್ಳೆಯದಾಗಲಿ, ಕೆಟ್ಟದ್ದಾಗಲಿ– ಅಮೇರಿಕನ್ನರ ಗುಣವನ್ನು ಇದ್ದಕ್ಕಿದ್ದ ಹಾಗೆ ಸ್ವೀಕರಿಸತಕ್ಕದ್ದು.

(೨) ಹುಬ್ಬುಗಂಟಿಕ್ಕುವ ಅಥವಾ ಹುಬ್ಬು ಹಾರಿಸುವ ತಂತ್ರದಿಂದ ಅಮೇರಿಕನ್ನರ ಅಭಿಪ್ರಾಯದ ಮೇಲೆ ಪ್ರಭಾವ ಬೀರಲು ಪ್ರಯತ್ನಿಸಕೂಡದು.

(೩) ಒಂದು ಹೊಸ ಕಲ್ಪನೆಯನ್ನು ಅವರ ಮುಂದಿಡುವಾಗ ಅದನ್ನು ನಾಟಕೀಯವಾಗಿ ಚಿತ್ರಿಸಿ ಅವರ ಊಹಾಶಕ್ತಿಗೆ ಮೆಚ್ಚಿಗೆಯಾಗುವಂತೆ ಮಾಡಬೇಕು–ಇದೇ ಕಲ್ಪನೆಯನ್ನು "ಮಾರುವ" ಬಗೆ.

(೪) ಮೇಲಿನ ರೀತಿಯಿಂದ ವರ್ತಿಸಿದ ಬಳಿಕ ಥಟ್ಟನೆ ಯಾವ ಪರಿಣಾಮವೂ ಆಗದಿದ್ದರೆ ಆಶ್ಚರ್ಯಪಡಬೇಕಾಗಿಲ್ಲ. ಕೂಡಲೇ ಏನೂ ಆಗದು; ಆದರೆ ಕಾಲಕ್ರಮೇಣ ನಿಮ್ಮ ಕಲ್ಪನೆ ಅಥವಾ ಅದಕ್ಕೆ ಅತಿಹತ್ತಿರವಾದ ಭಾವನೆಯನ್ನು ನಿಮ್ಮ ಅಮೇರಿಕನ್ ಗೆಳೆಯರು ತಮ್ಮ ಸ್ವಂತದ ಸ್ವತಂತ್ರ ವಿಚಾರವೆಂದು ಹೊರಗೆಡಹುವರು. ಆಗ ನಿಮಗೆ ನಿಮ್ಮ ಪ್ರಯತ್ನ ಸಫಲವಾದುದು ತಿಳಿದುಬರುತ್ತದೆ.

ಬೆಳ್ಳಗಿರುವುದೆಲ್ಲ ಹಾಲೆಂದು ತಿಳಿಯುವ ಬುದ್ಧಿ ಭಾರತಕ್ಕೆ ಒಳ್ಳೆಯದಲ್ಲ ಎಂಬ ಅಂಶವನ್ನು ನಾವಿಂದು ಬ್ರಿಟನ್ನಿನಿಂದ ಕಲಿತುಕೊಳ್ಳಬೇಕಾಗಿದೆ. ಮೇಲಿನ ಅಭಿಪ್ರಾಯದಲ್ಲಿ ನೂರಕ್ಕೆ ನೂರು ಸತ್ಯಾಂಶವಿರದಿರಬಹುದು; ಆದರೆ ನಮಗಿಂತ ಅಮೇರಿಕನ್ನರೊಡನಾಟ ಹೆಚ್ಚಾಗಿರುವ ಬ್ರಿಟಿಶರ ಅಭಿಪ್ರಾಯಕ್ಕೆ ಏನೂ ಮಹತ್ವವಿಲ್ಲವೆನ್ನುವುದು ಮೂರ್ಖತನವೇ ಸರಿ. ಈ ಅಭಿಪ್ರಾಯವನ್ನು ಪ್ರಕಟಿಸಿದ ಅಮೇರಿಕನ್ನರಾದರೂ ಇದರಲ್ಲಿಯ ಕೆಲ ಸಂಗತಿಗಳು ಯಥಾರ್ಥವಿರುವುದಾಗಿ ಒಪ್ಪಿಕೊಂಡಿದ್ದಾರೆ. ನಾಗರಿಕತೆಯೆಂದಕೂಡಲೇ ಅಮೇರಿಕದ ಮಾದರಿಯನ್ನು ಎತ್ತಿ ಆಡುವ ಭಾರತೀಯ ವಿದ್ಯಾವಂತರೂ ಅಧಿಕಾರಿ ವರ್ಗದವರೂ ಸ್ವಲ್ಪ ಎಚ್ಚರಿಕೆಯಿಂದ ತಮ್ಮ ವಿಚಾರವನ್ನು ಪರಾಮರ್ಶಿಸಿಕೊಳ್ಳುವುದು ಅವಶ್ಯಕ; ನಮ್ಮದು ಲೌಕಿಕ ರಾಜ್ಯವೆಂದು ಹೆಗ್ಗಳಿಸುವವರು ಕಣ್ತೆರೆದು ಅಮೇರಿಕದ ಲೌಕಿಕತೆಯನ್ನು ಕಾಣಲಿ.

— ಅರ್ಜುನ




ಆಫ್ರಿಕದ ಒಂದೇ ಒಂದು ನೀಗ್ರೋ ಪ್ರಜಾರಾಜ್ಯವಾದ ಲೈಬೀರಿಯದ ಪೋಸ್ಟ್ ಮಾಸ್ಟರ್ ಜನರಲ್ಲರಾದ ಮಾನ್ಯ ಮೆಕ್ ಕಿನ್ಲಿ ಎ. ಡೆಶೀಲ್ಡರು ಯುರೋಪಿನ ಪ್ರವಾಸವನ್ನು ಆರಂಭಿಸಿ ಲಂಡನ್ನಿಗೆ ಬಂದಾಗ ತೆಗೆದ ಚಿತ್ರ.

ಆಂಧ್ರ ಜಿಲ್ಲಾ ಕಾಂಗ್ರೆಸ ಸಮಿತಿಯ ಕಾರ್ಯಸಮಿತಿಯು ಮದ್ರಾಸನಗರವು ಆಂಧ್ರ ಮತ್ತು ತಮಿಳ ಪ್ರಾಂತಗಳ ಸಂಯುಕ್ತ ರಾಜಧಾನಿಯಾಗಬೇಕೆಂಬ ಗೊತ್ತುವಳಿಯನ್ನು ಸ್ವೀಕರಿಸಿರುವದು. ಇದು ಸಾಧ್ಯವಾಗದಿದ್ದರೆ ನಗರವನ್ನು ಇಬ್ಭಾಗಿಸಿ ಉತ್ತರ ಭಾಗವನ್ನು ಆಂಧ್ರದ ರಾಜಧಾನಿಯನ್ನಾಗಿಯೂ ದಕ್ಷಿಣ ಭಾಗವನ್ನು ತಮಿಳ ರಾಜಧಾನಿಯನ್ನಾಗಿಯೂ ಮಾಡಬೇಕೆಂದು ಗೊತ್ತುವಳಿಯನ್ನಾಗಿ ಸೂಚಿ-

ಚಿತ್ರಪ್ರಕಾಶ

ಫಿಲ್ಮಿಸ್ತಾನದವರ 'ಶಾಬ್ನಾಂ' ಎಂಬ ಚಿತ್ರ ಜನಪ್ರಿಯವಾಗುವುದೆಂದು ತಿಳಿಯಲಾಗಿದೆ. ಅದರ ದಿಗ್ದರ್ಶಕ ಶ್ರೀ ಬಿ. ಮಿತ್ರ, ನಿರ್ಮಾತೃ ಶ್ರೀ ಎಸ್. ಮುಕರ್ಜಿ, ತಾರೆಗಳಾದ ದಿಲೀಪ ಕುಮಾರ ಕಾಮಿನೀ ಕೌಶಲರು ಪತ್ರಿಕೆಗಳಲ್ಲಿ ವಿಶೇಷ ಬೆಳಕನ್ನು ಕಂಡಿದ್ದಾರೆ.

'ಶಾಬ್ನಾಂ' ಒಂದು ಸಂಗೀತಮಯ ಶೃಂಗಾರನಾಟಕದ ರೂಪದಲ್ಲಿ ಪ್ರಕಾಶಿತವಾಗಿದೆ. ಮುಂಬಯಿಯ ರಾಕ್ಸಿ, ರಿವೋಲಿ, ಪ್ಯಾರಾಡೈಸ್ ರೂಪರಂಗಗಳಲ್ಲಿ ಏಕಕಾಲದಲ್ಲಿ ಪ್ರದರ್ಶಿಸಲ್ಪಡುತ್ತಿದೆ. 'ಸಂಗೀತ ನೃತ್ಯಗಳ' ದೃಶ್ಯ ಇದರಲ್ಲಿ ಪ್ರಧಾನ; ಎಂದ ಮೇಲೆ



ಹಿಂದುಸ್ತಾನ ಚಿತ್ರದವರ "ರಿಮ್ ಝಿಮ್" ಚಿತ್ರದಲ್ಲಿ ನಾಯಕ ನಾಯಿಕೆಯರ ಪಾತ್ರಗಳಲ್ಲಿ ಕಿಶೋರ್ ಸಾಹು ಮತ್ತು ರಮೋಲಾ

ಸಿನೇಮಾದವರಿಗೆ ದುಡ್ಡಿನ ಸುರಿಮಳೆ ನಿಶ್ಚಿತ. ಇದರಲ್ಲಿ ಕಥೆಯ ಪ್ರಕಾಶವನ್ನು ಸಂಗೀತವೂ ವಾಸ್ತವತೆಯದನ್ನು ಕಾಲ್ಪನಿಕತೆಯೂ ಮಂಕುಗೊಳಿಸಿಬಿಟ್ಟಿವೆ ಎಂಬುದು ಸೂಕ್ಷ್ಮಜ್ಞರಿಗೆ ಹೊಳೆಯದಿರದು. ಅತಿಯಾದ ಭಯಂಕರ ದೃಶ್ಯಗಳ ಬಲದಿಂದ ಕರುಣೆಯನ್ನು ಪ್ರೇಕ್ಷಕರಲ್ಲಿ ಹುಟ್ಟಿಸುವ ಮತ್ತು ಅಸ್ವಾಭಾವಿಕ (ಕಾರ್ಯಕಾರಣ ಸಮನ್ವಯ ಸಾಕಷ್ಟಿಲ್ಲದ) ಕೃತ್ಯಗಳಿಂದ ಪಾತ್ರಗಳತ್ತ ನೋಟಕರ ರಾಗದ್ವೇಷಗಳನ್ನು ಕೆರಳಿಸುವ ದುರ್ನಯ ಇದರಲ್ಲಿ ಸಾಕಷ್ಟಿದೆಯೆಂಬುದು ಬುದ್ಧಿವಂತರ ಅನುಭವ.

\+ + +

ಜೆಮಿನಿಯವರ ವರ್ಣರಂಜಿತವಾದ ಮಧ್ಯಯುಗೀನ ಶೃಂಗಾರ ಲಹರಿಯ ಚಿತ್ರ "ಚಂದ್ರಲೇಖ"ಯನ್ನು ಭಾರತ ಸರಕಾರವು ಪ್ರೇಗಿನಲ್ಲಿ ನಡೆಯಲಿರುವ ನಾಲ್ಕನೆಯ ಅಂತಾರಾಷ್ಟ್ರೀಯ ಚಿತ್ರದ ಹಬ್ಬಕ್ಕೆ ಕಳಿಸಲಿದೆಯೆಂದು ಸುದ್ದಿ.

\+ + +

ನಿರ್ಮಾತೃವ್ಯಾಸರು "ಬಚಪನ್‌ಕೀ ಸಾಥಿ" ಎಂಬ ಹೊಸ ಚಿತ್ರವನ್ನು ನಿರ್ಮಿಸಲು ಸಿದ್ಧತೆ ನಡೆಸಿದ್ದಾರೆಂದು ತಿಳಿಯುತ್ತದೆ.

\+ + +

ಬಹುಮಾನ ಪಡೆದ ಶ್ರೀ ಕಿಶೋರ್ ಸಾಹು ಜಯಪ್ರದವಾದ ತನ್ನ "ಸಾವನ್ ಆಯಾರೇ" ಚಿತ್ರದ ಬಳಿಕ ಈಗ "ರಿಮ್ ಝಿಮ್" ಎಂಬ ಹೊಸ ಚಿತ್ರವನ್ನು ನಿರ್ಮಿಸಲಿದ್ದಾನೆ. ನಾಯಕ ನಾಯಿಕೆಯರ ಪಾತ್ರಗಳನ್ನು ಕಿಶೋರ್ ಸಾಹು ಮತ್ತು ರಮೋಲರು ವಹಿಸುತ್ತಾರೆ. ಮುಬಾರಕ್ ಮತ್ತು ಮೋಹನ, ಜಾನಕೀದಾಸ್ ಮತ್ತು ಜುಗನು ಮಿಕ್ಕ ಪಾತ್ರಗಳನ್ನು ವಹಿಸುತ್ತಾರೆ. ಖೇಮಚಂದ ಪ್ರಕಾಶರು ಸಂಗೀತ ನಿರ್ದೇಶಕರು.

\+ + +

ಕುಲದೀಪದವರು "ನಾಚ್" ಎಂಬ ಚಿತ್ರವನ್ನು ತಯಾರಿಸುತ್ತಿದ್ದಾರೆಂದೂ ಅದು ಈಗ ಮುಗಿಯುತ್ತ ಬಂದಿದೆಯೆಂದೂ ಸುದ್ದಿ. ಅದರಲ್ಲಿ ಶ್ಯಾಮ ಮತ್ತು ಸುರೈಯರು ನಾಯಕ ನಾಯಿಕೆಯರ ಪಾತ್ರಗಳನ್ನು ಅಭಿನಯಿಸಿದ್ದಾರೆ. ಜೊತೆಗೇ ರಹಮಾನ ಮತ್ತು ಗೀತಾಬಲಿ ಎಂಬ ತಾರೆಗಳ ಮುಖ್ಯ ಪಾತ್ರಾಭಿನಯದಲ್ಲಿ "ಜಲತರಂಗ" ಎಂಬ ಚಿತ್ರವನ್ನೂ ತಯಾರಿಸಲಾಗುತ್ತಿದೆ.

\+ + +

ಹಿಂದೆ ಕಮಲ ಪಿಕ್ಚರ್ಸಿನಲ್ಲಿ ಸುರೇಂದ್ರ ಮತ್ತು ಮುನ್ವಾರ ಸುಲ್ತಾನಾ ಭಾಗ ವಹಿಸಲಿದ್ದಾರೆ. ಜೀವನ ಮತ್ತು ಮುದನಪುರಿ ಇವರ ಸಹಾಭಿನಯವನ್ನು ಅಲ್ಲಿ ಕಾಣಬಹುದು.

\+ + +

ಮೈಸೂರಿನ ಸಾಬುವನ್ನು ತಿಳಿಯದವರಿಲ್ಲ. ಅವನಿಗೀಗ ೨೫ ವರ್ಷ ವಯಸ್ಸು. ಅಮೇರಿಕವೆಂದರೆ ಸ್ತ್ರೀ ರಾಜ್ಯ ಎಂಬ ಕಟು ಅನುಭವ ಅವನಿಗೀಗ ಆಗಿದೆ. ಅವನ ಗುರುತಿನವಳಾದ ಕುಮಾರಿ ಬ್ರೆಂಡಾ ಮೇರಿಯನ್ ಜೂಲಿಕಾ ಎಂಬ ಒಬ್ಬಳು ೨೩ ವರ್ಷದ ಬ್ರಿಟಿಶ್ ನರ್ತಕಿ ಅವನಿಂದ ತನಗೊಂದು ಹೆಣ್ಣುಮಗು ಹುಟ್ಟಿದೆಯೆಂದೂ ಅದರ ಪೋಷಣೆಗಾಗಿ ಅವನು ತಿಂಗಳಿಗೆ ೫೦೦ ಡಾಲರುಗಳನ್ನು ಕೊಡಬೇಕೆಂದೂ ಸುಳ್ಳು ಹೇಳಿ ದಾವೆ ಮಾಡಿದ್ದಾಳೆ. ಅಲ್ಲದೆ, ಈ ವರೆಗೆ ಅದಕ್ಕಾಗಿ ತಾನು ಖರ್ಚು ಮಾಡಿದ ೧೦೦೦ ಡಾಲರುಗಳನ್ನು ಕೊಡಬೇಕೆಂದೂ ಹೇಳಿದ್ದಾಳೆ. ಸಾಬು ಇವಳಿಗೆ ಸರಿಯಾಗಿ ಮದ್ದರೆಯದೆ ತಾನೆಂದೂ ಬಿಡೆನೆಂದು ಹಟ ಹಿಡಿದು ವಾದಿಸುತ್ತಿದ್ದಾನೆ. ಇದು ಅಮೇರಿಕದ ಸ್ತ್ರೀ ಸ್ವಾತಂತ್ರ್ಯ! "ಕಲಿತ" ಭಾರತೀಯ ಮಹಿಳೆಯರು ಕಂಡು ಆನಂದಿಸುವ ಒಂದು ಸಂಗತಿ!

\+ + +

ವೆರೈಟಿ ಪ್ರೊಡಕ್ಷನ್ನಿನ ಆಶ್ರಯದಲ್ಲಿ ಶ್ರೀಮತಿ ಆಶಾಬಿಶ್ವಾಸರು "ಲಾ ಜವಾಬ್" ಎಂಬ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ಅದರಲ್ಲಿ ಶ್ರೀ ಅನಿಲವಿಶ್ವಾಸರು ತಮ್ಮ ಸಂಗೀತ ಪಾಂಡಿತ್ಯದಿಂದ ಕೆಲ ಹೊಸ ಹೊಸ ವಿಧಾನಗಳನ್ನು ಅಳವಡಿಸಲಿದ್ದಾರೆ. ಶ್ರೀ ಜೆ. ಪಿ. ಅದವಾನಿ ಅದಕ್ಕೆ ದಿಗ್ದರ್ಶಕರು. ಪ್ರೇಮಧವರು ತಮ್ಮ ನೃತ್ಯಕಲೆಯನ್ನು ಕೆಲ ಹೊಸ ಬಗೆಗಳಿಂದ ಅದರಲ್ಲಿ ಪ್ರಯೋಗಿಸಲಿದ್ದಾರೆ; ಗೀತಗಳೂ ಅವರವೇ. ಕವಿತಾ ಕುಲದೀಪ, ರೇಹನಾ, ಪ್ರವೀಣ, ಡೇವಿಡ್, ಸೋಹನ್, ಪ್ರೇಮಧವ, ರಣಧೀರ ಇವರು ತಾರೆಗಳು.

\+ + +

ನ್ಯೂಯಾರ್ಕಿನ ಟೈಮ್ಸ್‌ಚೌಕದ ಹತ್ತಿರದ ರಂಗದಲ್ಲಿ "ಭಾರತ ಮಾತಾಡುತ್ತದೆ" ಎಂಬ ಅಪಪ್ರಚಾರಕ ಚಿತ್ರ ಪ್ರದರ್ಶಿಸಲ್ಪಡುತ್ತಿದ್ದರೂ ಭಾರತದ ರಾಯಭಾರಿ ವಿಜಯಲಕ್ಷ್ಮಿಯವರು ತಣ್ಣಗೆ ಕುಳಿತಿದ್ದಾರಂತೆ. ಅವರಿಗೆ ಬಹುಶಃ ಬಿಡುವೇ ಇರಲಿಕ್ಕಿಲ್ಲ!

\+ + +

ಹಾಲಿವುಡ್ಡಿನ ನಟ ಟೈರೋನ್ ಪವರನು ಆಕರ್ಷಕಳಾದ ಲಿಂಡಾ ಕ್ರಿಶ್ಚಿಯನ್ನೆಂಬವಳನ್ನು ರೋಮಿನ ಚರ್ಚಿನಲ್ಲಿ ಮದುವೆಯಾದನು. ಅದರಿಂದ ಅವನಿಗೆ ತುಂಬ ಸಂತೋಷವಾಗಿದೆ. ಇವನನ್ನು ಕಂಡು ಆಕರ್ಷಿಸಲ್ಪಡದೆ ಇರುವ ಅವಳ ಪ್ರೇಮ ಪಾತಿವ್ರತ್ಯಗಳು ೬ ತಿಂಗಳು ತುಂಬಿದ ಬಳಿಕ ವಿಚ್ಛೇದದ ಕೋರ್ಟಿನಲ್ಲಿ ಇವನಿಗೆ ಗೊತ್ತಾಗಬಹುದು!

\+ + +

ತಮ್ಮ ಹೆಣ್ಣು ಮಕ್ಕಳಿಗೆ ಚಿಕ್ಕಂದಿನಿಂದ "ಶೃಂಗಾರ ವಿದ್ಯೆ" ಕಲಿಸುವುದು ಹಾಲಿವುಡ್ ನಟಿಯರ ರೂಢಿಯಂತೆ!

— ರಸವಿದ್ಯಾಧರ

ಮೂಲೆ ಮೂಲೆಗಳಿಂದ

ಲಂಡನ್ನಿನ ಧಕ್ಕೆಕೆಲಸಗಾರರ ಸಂಪು ಕೊನೆಗೊಂಡಿತು. ೨೫ ದಿನಗಳ ವರೆಗೆ ೧೫೦೦೦ ಕೆಲಸಗಾರರು ಹೂಡಿದ ಸಂಪಿನ ಚರ್ಚೆ ಕೆಲಸಕ್ಕೆ ಹಿಂದಿರುಗುವ ನಿರ್ಣಯದಿಂದ ಮುಕ್ತಾಯವಾಗಲು ಕೆನಡದ ಧಕ್ಕೆ ಕೆಲಸಗಾರರ ಅನುಕೂಲ ಮತವೇ ಕಾರಣ.

ಹೊಸದಾಗಿರಚಿಸಿದರಕ್ಷಣಾಯೋಜನೆಯನ್ವಯ **ಹಾಂಕಾಂಗಿನಲ್ಲಿರುವ** ಸೈನಿಕರ ಸಂಖ್ಯೆ ೨೫೦೦೦ ಕ್ಕೆ ಏರುತ್ತದೆ. ಸದ್ಯ: ಅವರ ಸಂಖ್ಯೆ ೧೪೦೦೦.

ಚೀನೀ ಕಮ್ಯುನಿಸ್ಟರು ಚಂಗಶಾ ಎಂಬ ಸಮರ ನೈತಿಕ ಮಹತ್ವದ ಪಟ್ಟಣದ ಸನಿಹಕ್ಕೆ ಬಂದಿದ್ದಾರೆ. ಕಮ್ಯುನಿಸ್ಟ್ ಆಕಾಶವಾಣಿಯ ಪ್ರಕಾರ ಕೀನ್ಯಾಂಗಿನ ಮೇಲೆ ರಾಷ್ಟ್ರೀಯ ಸೈನಿಕರು ಬಾಂಬು ಹಾಕಿದ್ದರಿಂದ ೨೦,೦೦೦ ಪ್ರಜೆಗಳು ನಿರಾಶ್ರಿತರಾಗಿದ್ದಾರೆ. ಚೀನದ ೨೦ ಕೋಟಿ ಡಾಲರ ಬೆಲೆಯ ಬಂಗಾರದ ಶಿಲ್ಕನ್ನು ಫಿಲಿಫೈನ್ಸಿಗೆ ಸಾಗಿಸಲಾಗಿದೆಯೆಂದು ಸುದ್ದಿ.

ತಿಬೇಟಿನ ವಿದೇಶ ಶಾಖೆಯ ಮುಖ್ಯಸ್ಥನ ದೆಸೆಯಿಂದ ಲ್ಹಾಸಾದಲ್ಲಿ ಚೀನೀ ರಾಷ್ಟ್ರೀಯ ಸರಕಾರದ ವಿರುದ್ಧವಾಗಿ ದಂಗೆಯೆದ್ದಿದೆ. ಅದರ ಫಲವಾಗಿ ಚೀನೀರಾಷ್ಟ್ರೀಯ ಅಧಿಕಾರಿಗಳಿಗೆ ಮನೆಗೆ ಹೋಗಲು ಅಪ್ಪಣೆಯಾಗಿದೆ.

ಅಟ್ಲಾಂಟಿಕ್ ಒಪ್ಪಂದಕ್ಕೆ ಬೆಂಬಲವೀಯಲು **ಅಮೇರಿಕದ** ಅಧ್ಯಕ್ಷ ಟ್ರೂಮನ್ನರು ವಿದೇಶೀಯ ಸಮರ ನೈತಿಕ ಸಹಾಯ ಯೋಜನೆಯೊಂದನ್ನು ಕಾಂಗ್ರೆಸ್ಸಿನೆದುರು ಇಡಲಿದ್ದಾರೆಂದು ತಿಳಿಯುತ್ತದೆ.

ಚಂದ್ರನಗರದ ಆಡಳಿತೆಯ ಖಾತೆಯ ಅಧ್ಯಕ್ಷ ದೇವೇಂದ್ರದಾಸರು ಅಲ್ಲಿ ನಡೆಯುತ್ತಿರುವ ಹಿಂಸಾಕೃತ್ಯಗಳನ್ನು ನಿಯಂತ್ರಿಸಲು ಕಲಕತ್ತದಿಂದ ಪೋಲೀಸರನ್ನು ಕರೆಸುವುದು ಅಗತ್ಯವೆಂದು ಫ್ರೆಂಚ್ ಕಮಿಶನರಿಗೆ ಹೇಳಿದರೆ ಹಾಗೆ ಮಾಡದೆ, ಅವರು ಪಾಂಡಿಚೇರಿಯಿಂದ ಸೈನ್ಯವನ್ನು ಕರೆಸಲು ವ್ಯವಸ್ಥೆ ಮಾಡಿದ್ದು ತಿಳಿದುಬಂದಿತು.

ಬ್ರಹ್ಮೀ ಸರಕಾರದ ಸಂರಕ್ಷಣ ಮಂತ್ರಿತ್ವ ವಹಿಸಿರುವ ಉಪಮುಖ್ಯ ಮಂತ್ರಿ ಜನರಲ್ ಬೋನೇವಿನ್ನರು ಸದ್ಯ: ನ್ಯೂಯಾರ್ಕಿಗೆ ತೆರಳಿದ್ದಾರೆ. ಅಲ್ಲಿ ಅವರು ಕೊಟ್ಟ ಹೇಳಿಕೆಯ ಪ್ರಕಾರ ೧೩೦೦೦ ಕಮ್ಯುನಿಸ್ಟ್ ಭಟರೂ ೪೦೦೦ ಕಾರೆನ್ ಯೋಧರೂ ಸರಕಾರದ ವಿರುದ್ಧ ದಂಗೆಯೆದ್ದಿದ್ದರೂ ಅವರಲ್ಲಿ ಸಹಕೃತ ಕಾರ್ಯಕ್ರಮವಿಲ್ಲದುದರಿಂದ ಸರಕಾರ ಪರಿಸ್ಥಿತಿಯನ್ನು ಸುಧಾರಿಸಲು ಶಕ್ತವಾಗುತ್ತಿದೆ ಎಂದು ಗೊತ್ತಾಗುತ್ತದೆ.

ವಾಯವ್ಯ ಇಂಡೋಚೀನ ಮತ್ತು ಬ್ರಹ್ಮಗಳ ನಡುವಣ ಗಡಿಯನ್ನು ರಕ್ಷಿಸಲು ಫ್ರೆಂಚ್ ಸೈನಿಕರು ತೆರಳಿದರೆಂದು ಸೈಗಾನಿನ ವಾರ್ತಾಸಂಸ್ಥೆ ತಿಳಿಸುತ್ತದೆ,

ಯುದ್ಧಾಪರಾಧದ ಆರೋಪದ ಮೇಲೆ **ಪ್ಯಾರಿಸ್ಸಿನಲ್ಲಿ** ಯುದ್ಧಕಾಲೀನ ಜರ್ಮನ್ ರಾಯಭಾರಿಯಾಗಿದ್ದ ಒಟ್ಟೋ ಅಬೆಜ್ಜನಿಗೆ ಫ್ರೆಂಚ ದಂಡನ್ಯಾಯ ಸಮಿತಿ ೨೦ ವರ್ಷಗಳ ಕಠಿನ ಶಿಕ್ಷೆಯನ್ನು ವಿಧಿಸಿತು.

ಸಿಂಹಳದ ಎಲ್ಲೆಡೆಯಲ್ಲೂ ಅಲ್ಲಿಯ ರಬ್ಬರ್ ಮತ್ತು ಚಹಾ ತೋಟಗಳ ಕೆಲಸಗಾರರು ತಮ್ಮ ಮೊದಲನೆಯ ಸಂಪು ಮುಗಿದ ಎಂಟೇ ದಿನಗಳಲ್ಲಿ ಎರಡನೆಯ ಸಂಪನ್ನು ಹೂಡಿದ್ದಾರೆ.

ಮಧ್ಯಪೂರ್ವದ ರಾಜಕಾರಣಿಗಳ ವಿಶೇಷ ಸಭೆ ಲಂಡನ್ನಿನಲ್ಲಿ ಜರುಗಿದಾಗ ಅದಕ್ಕೆ ಮೂವರು ಬ್ರಿಟಿಶ್ ಸೈನ್ಯಾಧಿಕಾರಿಗಳು ಹಾಜರಿದ್ದರು. ಮಧ್ಯಪೂರ್ವದ ರಾಜಕೀಯ ಮತ್ತು ಆರ್ಥಿಕ ಅಭಿವೃದ್ಧಿಗಳೇ ಮುಂತಾದ ಪ್ರಶ್ನೆಗಳನ್ನು ಚರ್ಚೆಗೆ ತೆಗೆದುಕೊಳ್ಳಲಾಯಿತು.

ಅಮೇರಿಕದ ಸಿನೇಟರ್ ವಿಲಿಯಂ ಎಫ್ ನೋಲೆಂಡನು ಅಧ್ಯಕ್ಷ ಟ್ರೂಮನ್ನರು ಬ್ರಿಟನ್ನು ಅಥವಾ ಇನ್ನಾವ ರಾಷ್ಟ್ರಕ್ಕಾಗಲಿ ಅಣುಬಾಂಬಿನ ಗುಟ್ಟನ್ನು ಹೊರಪಡಿಸದಂತೆ ಒಂದು ಮಸೂದೆಯನ್ನು ತರುವುದಾಗಿ ಬೆದರಿಸಿದ್ದಾನೆ.

ಬ್ರಿಟನ್ನು ಮುಂದಿನ ವರ್ಷದಲ್ಲಿ ರಶಿಯ ಮತ್ತು ಇತರ ಕಮ್ಯುನಿಸ್ಟ್ ರಾಷ್ಟ್ರಗಳೊಡನೆ ನೂರುಕೋಟಿ ಡಾಲರುಗಳ ವ್ಯಾಪಾರವನ್ನು ಮಾಡಲು ಆಶಿಸುತ್ತದೆ.

ಜಾರ್ಜಿಯದ ಪಿಲ್ಕಿಂಗ್ಟನ್ ಹಳ್ಳಿಯಲ್ಲಿ ಜೇಲಿನಿಂದ ಹೊರಗೆಳೆದು ನೀಗ್ರೊ ಒಬ್ಬನನ್ನು ಬಿಳಿಯರು ಚಿತ್ರಹಿಂಸೆಗೊಳಿಸಿ ಕೊಂದದ್ದು ನ್ಯಾಯ್ಯವೆಂದು ಅಲ್ಲಿಯ ಕೋರ್ಟು ತೀರ್ಮಾನಿಸಿತು!

ಇಂಡೋನೇಶಿಯದಲ್ಲಿ ಸಂಯುಕ್ತ ಸಂಸ್ಥಾನವನ್ನು ರಚಿಸುವುದರ ಕುರಿತಾಗಿ ಮಾತುಕತೆ ನಡೆಸುತ್ತಿದ್ದ ಪ್ರಜಾಸತ್ತಾತ್ಮಕ ಮತ್ತು ಮಹಾಮಂಡಲೀಯ ಪ್ರತಿನಿಧಿಗಳು ಆ ವಿಷಯದಲ್ಲಿ ಒಮ್ಮತಕ್ಕೆ ಬಂದರೆಂದು ತಿಳಿದಿದೆ.

ಟ್ರೈಗ್ರೀವ್ ಲೈ ಅವರ ಪ್ರಧಾನ ಕಾರ್ಯದರ್ಶಿತ್ವದಲ್ಲಿ ಕೆಲಸಮಾಡುತ್ತಿರುವ ಸಂ. ರಾ. ಸಂಘದ ಕಚೇರಿಯನ್ನು ಕಮ್ಯುನಿಸ್ಟರು ಬೆದರಿಕೆ ಹಾಕಿ ತಮ್ಮ ಇಷ್ಟದಂತೆ ಕೆಲಸಮಾಡಿಸಲು ಹವಣಿಸುತ್ತಿರುವುದಾಗಿ ವಾಶಿಂಗ್ಟನ್ನಿನಲ್ಲಿ ಒಬ್ಬ ಜೆಕ್ಕನ ಮಾಜಿ ಅಧಿಕಾರಿ ಸಾಕ್ಷ್ಯವನ್ನು ಮಾಡಿದ್ದಾನೆ.

ಬರುವ ಚುನಾವಣೆಗಾಗಿ ಈಗಿಂದಲೇ ಬ್ರಿಟನ್ನಿನ ಕನ್ಸರ್ವೆಟಿವ್ ಮತ್ತು ಕಾರ್ಮಿಕ ಪಕ್ಷಗಳ ಮುಖಂಡರಾದ ಮುಖ್ಯಮಂತ್ರಿ **ಅಟ್ಲೀ** ಮತ್ತು ವಿರೋಧಿ ಪಕ್ಷದ ನೇತೃವಾದ ವಿನ್‌ಸ್ಟನ್ ಚರ್ಚಿಲ್ಲರು ತಮ್ಮ ಪ್ರಚಾರ ಪ್ರತಿಪ್ರಚಾರಗಳಿಗಾರಂಭಿಸಿದ್ದಾರೆ.

ರಶಿಯದ ವ್ಯಾಪಾರ ಸಮಿತಿಯೊಂದು ಪಾಕಿಸ್ತಾನಕ್ಕೆ ಬಂದಿದೆ. ಅಗಲೇ ಅದು ಕರಾರೊಂದನ್ನು ತಲುಪಿರಬಹುದಾಗಿ ತಿಳಿಯುತ್ತದೆ.

ಸೋವಿಯಟ್ ಒಕ್ಕೂಟದೊಡನೆ ಪ್ರಾಮಾಣಿಕ ಮಿತ್ರತ್ವದಿಂದಿರುವುದಾಗಿ **ಬಲ್ಗೇರಿಯದ** ಹೊಸ ಮುಖ್ಯಮಂತ್ರಿ ವಾಸಿಲ್ ಕೋಲರೊವರು ಹೇಳಿಕೆ ಯಿತ್ತಿದ್ದಾರೆ.

ಬೆಲ್ಜಿಯಮ್ಮಿನ ಪೋಷಕ ರಾಜನಾದ ರಾಜಕುಮಾರ ಚಾರಲ್ಸನು ಎಂ. ಗ್ಯಾಸ್ಟನ್ ಐಸ್ಕೆನ್ಸರಿಗೆ ಮಂತ್ರಿಮಂಡಲದ ಬಿಕ್ಕಟ್ಟನ್ನು ಪರಿಹರಿಸಲು ಆಜ್ಞೆ ಮಾಡಿದ್ದಾನೆ.

ದ. ಆಫ್ರಿಕದ ಏಶಿಯಾಟಿಕ್ ಭೂಸ್ವಾಮ್ಯ ನಿಷೇಧದ ಕಾಯದೆಯಿಂದ ಬ್ರಿಟಿಶ್ ಮತ್ತು ಇತರ ಸಾಗರೋತ್ತರ ಕಂಪೆನಿಗಳಿಗೆ ಆಗಬಹುದಾದ ತೊಂದರೆಗಳನ್ನು ತಪ್ಪಿಸಲು ತಿದ್ದುಪಡಿಯನ್ನು ಮಾಡಲಾಗಿದೆ.

ಪಾಕಿಸ್ತಾನವು ದ. ಆಫ್ರಿಕದ ಕುಲಭೇದ ನೀತಿಯನ್ನು ಖಂಡಿಸುವುದರಲ್ಲಿ ಹಿಂದುಸ್ತಾನದೊಡನೆ ಭುಜಕ್ಕೆ ಭುಜಕೊಟ್ಟು ನಿಂತಿದೆಯೆಂದು ದ. ಆಫ್ರಿಕದ ಹಿಂದೀ ಮುಖಂಡ **ಡಾ. ದಾದೂ** ಅವರು ಒಂದು ಸಂದರ್ಶನದಲ್ಲಿ ಹೇಳಿದರು.

ಅಥೆನ್ಸ್ ಆಕಾಶವಾಣಿಯ ಪ್ರಕಾರ ಯುಗೋಸ್ಲೇವಿಯವು ಗ್ರೀಕ್ ಧ್ವಜವನ್ನು ಮನ್ನಿಸಿ ಗ್ರೀಕ್ ಸರಕಾರದೊಡನೆ ಸ್ನೇಹದಿಂದ ಇರಲು ನಿಶ್ಚಯಿಸಿದೆಯೆಂದು ತಿಳಿಯುತ್ತದೆ.

ಕಮ್ಯುನಿಸ್ಟರನ್ನು ಬಹಿಷ್ಕರಿಸುವ ಪೋಪರ ಆದೇಶವನ್ನು **ಜರ್ಮನಿಯ** ಸೋವಿಯಟ್ ವಲಯದ ಯಾವ ಕ್ಯಾಥೊಲಿಕ್ ಚರ್ಚನಲ್ಲೂ ಪ್ರಕಟಪಡಿಸಲಾಗುವುದಿಲ್ಲ ಎಂದು ಬರ್ಲಿನ್ನಿನ ಕ್ಯಾಥೋಲಿಕ್ ವಕ್ತಾರನೊಬ್ಬನು ಸಾರಿದ್ದಾನೆ.

[illegible]

ಧಾರವಾಡ

ಕರ್ನಾಟಕ ಗ್ರಂಥಾಲಯದ ಕಾರ್ಯಾಲಯದಲ್ಲಿ ಕರ್ನಾಟಕ ಪ್ರಾದೇಶಿಕ ಸಲಹೆಗಾರ ಮಂಡಲದ ಮೊದಲನೆ ಸಭೆಯು ಶ್ರೀ ನಲವಡಿಯವರ ಅಧ್ಯಕ್ಷತೆಯಲ್ಲಿ ಸೇರಿ ಮಂಡಲದ ಕಾರ್ಯನಿಯಮಗಳನ್ನು ಸ್ವೀಕರಿಸಿದ ನಂತರ ಶ್ರೀ ನಲವಡಿಯವರು ಅಧ್ಯಕ್ಷರಾಗಿಯೂ ಶ್ರೀ ಎಂ. ಪಿ. ಪಾಟೀಲರು ಉಪಾಧ್ಯಕ್ಷರಾಗಿಯೂ ಶ್ರೀ ವೆಂಕಟರಾವ ನಾಯಕರು ಕೇಂದ್ರ ಸಲಹೆಗಾರ ಮಂಡಲದ ಪ್ರತಿನಿಧಿಗಳಾಗಿಯೂ ಆರಿಸಲಾಯಿತು.

ಹುಬ್ಬಳ್ಳಿಯಲ್ಲಿ ಕರ್ನಾಟಕ ಏಕೀಕರಣ ವಿಚಾರಣೆಯ ನಿಮಿತ್ತ ೨೪ ಕ್ಕೆ ನಗರಸಭೆಯ ಅಧ್ಯಕ್ಷ ಮೇಲೆ ಶ್ರೀ ಕೆಂಬಳಿ ಸಿದ್ದಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಕೂಡಲೆ ಕರ್ನಾಟಕ ಪ್ರಾಂತರಚನೆಯಾಗಬೇಕೆಂಬ ಗೊತ್ತುವಳಿ ಒಮ್ಮತದಿಂದ ಸ್ವೀಕೃತವಾಯಿತು. ಇಂಥ ಗೊತ್ತುವಳಿಗಳಿಂದ ಕಾರ್ಯವಾಗದೆಂದು ಘಟನಾ ಸಮಿತಿಯಲ್ಲಿ ಈ ಪ್ರಶ್ನೆ ಬಗೆಹರಿಯದಿದ್ದರೆ ಮುಂದೇನು ಎಂಬವನ್ನು ನಿರ್ಧರಿಸಬೇಕು ಎಂದು ಮುಂತಾಗಿ ಶ್ರೀ ಕೆಂಬಳಿಯವರು ಹೇಳಿದರು.

ಆಲೂರ ಗ್ರಾಮಪಂಚಾಯತಿ ಸದಸ್ಯರಾಗಿರುವ ಶ್ರೀ ಮುದ್ದಪ್ಪ ಫಕೀರಪ್ಪಾ ಕಲ್ಲಾಪುರ ಕೋಟಿ ಇವರು ೨೦ ಕ್ಕೆ ಕಳ್ಳತನದಿಂದ ಅಪ್ರಾಧಿಯಾಗಿದ್ದಕ್ಕಾಗಿ ೮೦ ರೂ ದಂಡ ಮತ್ತು ೧ ದಿನದ ಶಿಕ್ಷೆ ವಿಧಿಸಲಾಯಿತು.

ಹುಬ್ಬಳ್ಳಿ ರೇಲ್ವೆ ವರ್ಕಶಾಪಿನಲ್ಲಿ ಸ್ಟೀಮ ಕ್ರೇನ ಡ್ರಾಯವರನಾಗಿದ್ದ ರಾಮದಾಸ ಎಂಬಾತನು ರೇಲ್ವೆಯ ನೋಕರಿ ದೊರಕಿಸಲು ಪ್ರಯತ್ನಿಸುತ್ತಿದ್ದ ಉಮೇದವಾರರಿಗೆ ಶಾಲೆಯ ಹಾಗು ನಿವೃತ್ತ ರೇಲ್ವೆ ನೋಕರರ ಹೆಸರಿನಲ್ಲಿ ಶಿಫಾರಸು ಮತ್ತು ಸರ್ಟಿಫಿಕೇಟುಗಳನ್ನು ಕೊಡುತ್ತಿದ್ದನೆಂದು ಅವನನ್ನು ಸಸ್ಪೆಂಡ ಮಾಡಲಾಗಿದೆ.

ಗದಗ ಬೆಟಗೇರಿಯ ಸುಪ್ರಸಿದ್ಧ ವರ್ತಕರಾದ ಶ್ರೀ ತಿಪ್ಪಣ್ಣಾ ಪುಟ್ಟಯವರು ರಾಣೆಬೆನ್ನೂರಿನಿಂದ ಮರಳಿ ಗದುಗಿಗೆ ಹೋಗುವಾಗ ೨೩ ಕ್ಕೆ ಹುಬ್ಬಳ್ಳಿ ಸ್ಟೇಶನದಲ್ಲಿ ಗದುಗಿನ ಗಾಡಿಯಲ್ಲಿರುವಾಗ ಒಮ್ಮೆಲೆ ಹೃದಯ ವಿಕಾರದಿಂದ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ಕಾಂಗ್ರೆಸ ಕಾರ್ಯಕರ್ತರು ಆಗಿದ್ದರಲ್ಲದೆ ಹಲವು ಸಂಘ ಸಂಸ್ಥೆಗಳ ಸದಸ್ಯರಾಗಿದ್ದರು.

ಹುಬ್ಬಳ್ಳಿ ನಗರ ಸಭೆಯ ಸಭೆ ಸೇರಿ ಪ್ರಾಥಮಿಕ ಶಿಕ್ಷಣಕ್ಕೆ ತಗಲುವ ವೆಚ್ಚದಲ್ಲಿ ಸರಕಾರದವರು ಎರಡು ಮೂರು ಅಂಶ ಹಣವನ್ನು ಕೊಟ್ಟರೆ ಅದನ್ನು ಸಾಗಿಸಿಕೊಂಡು ಹೋಗುವದಾಗಿಯೂ ಈಗಿನಂತೆ ಅರ್ಧ ವೆಚ್ಚವನ್ನು ಕೊಟ್ಟರೆ ಸರಕಾರದವರೆ ಅದನ್ನು ನೋಡಿಕೊಳ್ಳಬೇಕೆಂದೂ ನಿರ್ಧರಿಸಲಾಯಿತು.

ನಿವೃತ್ತ ಜಿಲ್ಲಾ ನ್ಯಾಯಾಧೀಶ ಶ್ರೀ ಸಿ. ಸಿ. ಹುಲಕೋಟಿ ಇವರು ಮುಂಬಯಿ ಪಬ್ಲಿಕ್ ಸರ್ವಿಸ್ ಕಮಿಶನದ ಓರ್ವ ಸದಸ್ಯರಾಗಿರುವರು. ಮುಂಬಯಿ ಪಬ್ಲಿಕ್ ಸರ್ವಿಸ್ ಕಮೀಶನ್ನಿನ ಸದಸ್ಯರೆಂದು ನೇಮಿಸಲ್ಪಟ್ಟ ಕನ್ನಡಿಗರಲ್ಲಿ ಇವರೆ ಮೊದಲಿಗರು. ಈ ಮೊದಲು ಸದಸ್ಯರಾಗಿದ್ದ ಶ್ರೀ ಮೈಕಿಮಾನದು ಇತರೆಕ್ಕೆ ರಾಯಭಾರಿಗಳಾಗಿ ಹೋಗುತ್ತಿರಿಂದ ಒಂದು ಸ್ಥಳವು ತೆರವಾಗಿದ್ದಿತು.

ಮುಂಬಯಿಯ ದೇಶೀ ವೈದ್ಯಕ ಬೋರ್ಡಿನ ಅಧ್ಯಕ್ಷರಿಗೆ ಹುಬ್ಬಳ್ಳಿಯ ವೈದ್ಯಶಾಸ್ತ್ರಿ ಡಾ. ಅ. ಹಲಸಂಗಿಕರರು ತಿಂಗಳು ಕಳಿಸಿ ವೈದ್ಯಕ ಸಂಪಾದನ ಅವರಿಗೆ ದಾಬಲ ಕೊಟ್ಟಿದ್ದಾರೆ.

ಕನ್ನಡ ಸಂಸ್ಕೃತಿ

ಆಹಾರದ ಮಳ್ಳಿಕ ವಿಸಂತಿಯ ಮೇರೆಗೆ ಒಂದು ಅಳೆಯನ್ನು ಕೆಳಸಬೇಕೆಂದು ಪಂಡಿತ ಆಹಾರಲಾಲರು ವಿಸಂತಿಸಿದ ಮೇರೆಗೆ ಮೈಸೂರಿನ ಅರ್ಥಸಚಿವ ಶ್ರೀ ಎಚ್. ಸಿ. ದಾಸಪ್ಪನವರು ಪತ್ನಿಯವರಿಗೆ ಹೋಗಿ ಅವರ್ಗ್ಯಾದಿಗಳ ಸಹಾಯದಿಂದ ೧೫ ವರ್ಷ ಹಳೆಯ ಸುಂದರ ಆನೆಯೊಂದನ್ನು ಹಿಡಿದು ಅದನ್ನು ಜಪಾನಿಗೆ ಕಳಿಸಲಾಗುವದು.

ಮೈಸೂರು ಆಹಾರಪಾತ್ರೆಯನ್ನು ಕೇಂದ್ರದ ಆಡಳಿತಕ್ಕೊಳಪಡಿಸುವ ಸಂಬಂಧದಲ್ಲಿ ಪರಿಶೀಲನೆ ನಡೆಸಲು ಕೇಂದ್ರ ಸರಕಾರದ ಆಹಾರ [illegible]

ಬೆಳಗಾವಿ

ಬೆಳಗಾವಿ ಜಿಲ್ಲೆಯ ಕಾಂಗ್ರೆಸ ಕಾರ್ಯಕರ್ತರಾಗಿರುವ ಶ್ರೀ ಚನ್ನಪ್ಪಾ ವಾಲಿಯವರ ಮೇಲೆ ಮುಂಬಯಿ ಸರಕಾರದವರು ಗುಂಡಾ ಕಾಯದೆಯನ್ವಯ ಬೆಳಗಾವಿ ಧಾರವಾಡ ವಿಜಾಪುರ ಜಿಲ್ಲೆಗಳನ್ನು ಬಿಟ್ಟು ಹೋಗಬೇಕೆಂದು ೨೦ ನೇ ತಾರೀಕಿನ ದಿನ ಹುಕುಂ ಜಾರಿ ಮಾಡಿದ್ದರು. ಆದರೆ ೨೨ ಕ್ಕೆ ಅದನ್ನು ಹಿಂತೆಗೆದುಕೊಳ್ಳಲಾಯಿತು.

ಗೋಕಾಕ ತಾಲೂಕಿನ ಮುಣಧೋಳಿಯಲ್ಲಿ ಶ್ರೀ ರುದ್ರಪ್ಪಾ ಹಳಿಂಗಳಿ ಎಂಬವರ ಅಮಾನುಷ ಕೊಲೆ ಕಳೆದ ಶನಿವಾರ ಅಂದರೆ ೨೪ ಕ್ಕೆ ರಾತ್ರಿ ೧೦-೧೧ ಕ್ಕೆ ಸಂಭವಿಸಿದೆ. ಕೆಲ ದಿನಗಳ ಹಿಂದೆಯೆ ಮೋಳವಂಕಿಯಲ್ಲಿ ಎರಡು ಕೊಲೆಗಳು ಸಂಭವಿಸಿದ್ದವು. ಈ ಕೊಲೆಗಳಿಂದ ಜನರು ಭಯಭೀತರಾಗಿರುವರು.

ಬೆಳಗಾವಿ ನಗರ ಸಭೆಯ ಹೊಸ ಸದಸ್ಯರ ಸಭೆ ಸೇರಿ ಶ್ರೀ ಹಣಮಂತರಾವ ಸಾಮಂತರು ಬರುವ ಮೂರು ವರುಷಗಳಿಗೆ ಅಧ್ಯಕ್ಷರಾಗಿಯೂ ಶ್ರೀ ಬಳವಂತರಾವ ಪೋತದಾರರು ಉಪಾಧ್ಯಕ್ಷರಾಗಿಯೂ ಆರಿಸಲ್ಪಟ್ಟರು.

ವಿಜಾಪುರ

ಹೆಚ್ಚು ಆಹಾರ ಬೆಳೆಯುವ ಬಾಗಲಕೋಟಿ ತಾಲೂಕ ಸಮಿತಿಯ ಸಭೆಯು ತಾಲೂಕ ಕಚೇರಿಯಲ್ಲಿ ಕೂಡಿ ಹೆಚ್ಚಿನ ಆಹಾರೋತ್ಪಾದನೆಯ ಬಗ್ಗೆ ಚರ್ಚೆ ಮಾಡಲಾಯಿತು. ತಾಲೂಕಿನಲ್ಲಿ ೧೦ ಸಾವಿರ ಎಕರೆ ಮುಂಗಾರಿ ಭೂಮಿ ಈಗಾಗಲೆ ಬಿತ್ತನೆಯಾಗಿದ್ದು ೪೦ ಹಳ್ಳಿಗಳಲ್ಲಿ ಜಿಟ್ಟೆಗಳ ಉಪದ್ರವ ಸುರುವಾಗಿದೆ. ಜಿಟ್ಟೆ ನಾಶಕ ಪುಡಿಯನ್ನು ಹೆಚ್ಚಿಗೆ ತರಿಸಬೇಕೆಂದು ನಿರ್ಧರಿಸಲಾಯಿತು. ಜಿಟ್ಟೆಯ ಉಪದ್ರವಕ್ಕಾಗಿ ಹಲವರು ಬೆಳೆಯನ್ನು ಮುರಿದು ಕೆಂಗಾ ಬಿತ್ತುತ್ತಿರುವರೆಂಬ ಬಗ್ಗೆಯೂ ವಿಚಾರಿಸಲಾಯಿತು.

ವಿಜಾಪುರ ಜಿಲ್ಲಾ ಸರ್ವೋದಯ ಕಾರ್ಯವನ್ನು ಆರಂಭಿಸುವ ವಿಚಾರದಿಂದ ಅದರ ಸಂಚಾಲಕರಾದ ಶ್ರೀ ಕೌಜಲಗಿ ತಿರುಮಲರಾಯರು ಬಾಗಲಕೋಟಿ ಸಮೀಪದ ೭ ಹಳ್ಳಿಗಳಿಗೆ ಹೋಗಿ ಬಂದರು. ಬಾಗಲಕೋಟಿಯಲ್ಲಿ ಕೋಆಪರೇಟಿವ್ ಕನ್ಸುಮರ್ಸ ಸ್ಟೋರ್ಸದ ಕಟ್ಟಡದ ಮೇಲೆ ಕಚೇರಿಯನ್ನು ತೆರೆಯಲಾಗಿದೆ.

ಹೈದರಾಬಾದ

ರಾಯಚೂರು ಜಿಲ್ಲೆಯ ಲೂಟಿ ಪ್ರಕರಣಗಳ ವಿಚಾರಣೆಯು ೨೭ ನೇ ತಾರೀಕಿನಿಂದ ಪ್ರಾರಂಭವಾಗಿದೆ ಶ್ರೀ ಎಸ್. ಆರ್. ಬೈತಮಂಗಳಕರ ಇವರು ನ್ಯಾಯಮಂಡಲದ ಅಧ್ಯಕ್ಷರಿರುವರು. ಹೈದರಾಬಾದ ಶ್ರೀ ಅಪ್ಪಾರಾವ ಇವರು ಪಬ್ಲಿಕ್ ಪ್ರೊಸಿಕ್ಯೂಟರರಾಗಿರುವರು. ಈ ಪ್ರಕರಣಗಳ ವಿಚಾರಣೆ ಮುಗಿಯಬೇಕಾದರೆ ಎರಡು ತಿಂಗಳು ಹಿಡಿಯುವವು.

ಹೈದರಾಬಾದ ಸಂಸ್ಥಾನದಲ್ಲಿ ಜುಲೈ ೨೦ಕ್ಕೆ ಮುಗಿಯುವ ವಾರದಲ್ಲಿ ನಾಲ್ಕು ಕೊಲೆಗಳಾದ ವರದಿಯಾಗಿದೆ. ಈ ಜಿಲ್ಹೆಗಳಲ್ಲಿನ ಸಮಾಜ ವಿಘಾತಕರು ಹೈದರಾಬಾದದಲ್ಲಿ ಆಶ್ರಯ ಪಡೆಯುತ್ತಿರುವರೆಂದು ತಿಳಿಯುತ್ತದೆ. ಅವರನ್ನು ಅಲ್ಲಿಂದ ಹೊರದೂಡಲಾಗುತ್ತದೆ.

ಮುನೀರಾಬಾದದ ಬಳಿ ಕಟ್ಟಲಾಗುತಿರುವ ತುಂಗಭದ್ರಾ ಆಣೆಕಟ್ಟಿನ ಪರಿಣಾಮವಾಗಿ ೬೭ ಹಳ್ಳಿಗಳನ್ನೊಳಗೊಂಡು ೩೫ ಸಾವಿರ ಎಕರೆ ಕರ್ನಾಟಕ ಭಾಗದ ಭೂಮಿಯು ಮುಳುಗುವದೆಂದು ತಿಳಿಯುತ್ತದೆ. ಒಡೆಯರ ಪರಿಹಾರದ ಪ್ರಶ್ನೆಯನ್ನು ಕಂದಾಯ ಮಂತ್ರಿಗಳೀಗ ವಿಚಾರಿಸುತಿರುವರು. ಅಲ್ಲದೆ ಈ ಪ್ರದೇಶಗಳಲ್ಲಿಯ ಜನರ ಪುನರ್ವಸತಿಯ ವಿಚಾರವನ್ನು ನಡೆಸಿದ್ದಾರೆ.

ಸಂಸ್ಥಾನದಲ್ಲಿಯ ಸದ್ಯದ ವಿಚಿತ್ರ ಪರಿಸ್ಥಿತಿಯನ್ನು ಗಮನಿಸಿ ತಾತ್ಪೂರ್ತಿಕ ಲೋಕಪ್ರಿಯ ಮಂತ್ರಿಮಂಡಲವನ್ನು ಮಿಲಿಟರಿ ಗವರ್ನರ ಆಡಳಿತೆಯಲ್ಲಿ ರಚಿಸಬೇಕೆಂದು ಹೈದ್ರಾಬಾದ ಕಾಂಗ್ರೆಸ್ಸು ನೇಮಿಸಿದ ಉಪಸಮಿತಿಯು ಸೂಚಿಸಿದೆಯೆಂದು ತಿಳಿಯುತ್ತದೆ. ೧೯೩೫ ನೆಯ ಇಸ್ವಿಯ ಹಿಂದುಸ್ತಾನ ಸರಕಾರದ ಕಾಯದೆಯನ್ವಯ ಗವರ್ನರ ಮತ್ತು ಮಂತ್ರಿಮಂಡಳದ ನಡುವೆ ಇರುವ ಸಂಬಂಧವೇ ಹೈದರಾಬಾದ ಮಂತ್ರಿಮಂಡಳ ಮತ್ತು ಮಿಲಿಟರಿ ಗವರ್ನರರಲ್ಲಿ ಇರಬೇಕೆಂದು ಅವರ ಅಭಿಪ್ರಾಯ.

ಉತ್ತರ ಕನ್ನಡ

ಉತ್ತರ ಕನ್ನಡ ಜಿಲ್ಲೆಯಲ್ಲಿ ಕಳೆದ ಆಗಸ್ಟ ಚಳವಳಿಗಳಲ್ಲಿ ಹಣ್ಣುವದರಲ್ಲಿ ಮೇಲಿನ ನಂಬರು ಬಂದ ಶಿರಾಲಿ, ಸಾವಂತವಾಡಾ ಮತ್ತು ಹಾರೇಪಾಲ ಈ ಊರುಗಳಿಗೆ ಅನುಕ್ರಮವಾಗಿ ೧೦೦,೬೦ ಮತ್ತು ೪೦ ರೂಪಾಯಿ ಬಹುಮಾನ ಕೊಡಲು ಜಿಲ್ಹಾ ಗ್ರಾಮೋದ್ಧಾರ ಮಂಡಲದವರು ಪುರಸ್ಕರಿಸಿದ್ದಾರೆ. ಮುಂದಿನ ವರುಷ ಈ ಬಹುಮಾನ ೨೦೦,೧೦೦ ಮತ್ತು ೫೦ ರೂ. ಗಳದಿರುವದೆಂದೂ ಭತ್ತದ ಬೆಳೆಯ ವೈಯಕ್ತಿಯ ಸ್ಪರ್ಧೆಯಲ್ಲಿ ಮೊದಲಿನ ಮೂರು ನಂಬರು ಪಡೆದವರಿಗೆ ೫೦ ಮತ್ತು ೨೫ ರೂ ಬಹುಮಾನವಿಡಲಾಗಿದೆಯೆಂದೂ ತಿಳಿಯುತ್ತದೆ.

ಹಿಂದುಸ್ತಾನ ಸರಕಾರದವರು ರಚಿಸಿದ ಮಲೆನಾಡ ಕೇಂದ್ರ ಯೋಜನಾ ಸಮಿತಿಯಲ್ಲಿ ಕಾರವಾರ ಜಿಲ್ಹಾ ಒಕ್ಕಲತನಾಧಿಕಾರಿಗಳಾದ ಶ್ರೀ ವಿ. ಎಸ್. ಹಬ್ಬೂ ಇವರು ಸದಸ್ಯರಾಗಿ ಆರಿಸಲ್ಪಟ್ಟಿದ್ದಾರೆ. ಮಲೆನಾಡಿನಲ್ಲಿ ೧೫೦-೨೦೦ ಇಂಚು ಮಳೆಯಾಗುತ್ತಿದ್ದರೂ ಈ ಪ್ರದೇಶ ಹಿಂದುಳಿದಿದೆ. ಸರಕಾರದವರು ಇದರ ಅಭಿವೃದ್ಧಿಗಾಗಿ ಮುಂದೆ ಬಂದಿದ್ದು ಅಭಿನಂದನೀಯ ಎಂದು ಮುಂತಾಗಿ ಶ್ರೀ ಹಬ್ಬೂ ಇವರು ಒಂದು ಸಂದರ್ಶನದಲ್ಲಿ ಹೇಳಿದರು.

ಕಾರವಾರ ನಗರ ಮಧ್ಯದಲ್ಲಿರುವ ಕುಡಿಯುವ ಅಡ್ಡೆಗೆ ಪೋಲೀಸರು ಕಳೆದ ಶನಿವಾರ ಮುತ್ತಿಗೆ ಹಾಕಿ ಅಡ್ಡೆಯ ಒಡೆಯರನ್ನು ಹಿಡಿದು ೭ ಜನರನ್ನು ಬಂಧಿಸಿದ್ದಾರೆ. ಓರ್ವ ಮುನಿಸಿಪಲ್ ಸದಸ್ಯರು ಮಾತ್ರ ಕಣ್ಣುತಪ್ಪಿಸಿ ಪಾರಾಗಿರುವರು. ಇವರೆಲ್ಲ ಗೋವಾ ದೇಶಿ ಶರೆಯನ್ನು ಕುಡಿಯುತ್ತಾ ಕುಳಿತಿದ್ದರಂತೆ.

ಬಳ್ಳಾರಿ

ಮಂತ್ರಾಲಯ ಯಾತ್ರಿಕರ ಸಂಘದ ವಾರ್ಷಿಕ ಸಭೆಯು ಆಗಸ್ಟ ೧೧ ಕ್ಕೆ ರಾತ್ರಿ ೯ ಗಂಟೆಗೆ ಸಂಘದ ಬಿಡಾರದಲ್ಲಿ ಜರುಗುವದು. ಸಂಘದ ಆಢಾವೆ ಪತ್ರಿಕೆಯನ್ನು, ವರದಿಯನ್ನು ಸ್ವೀಕರಿಸುವದು ಮುಂದಿನ ವರುಷದ ಬಗ್ಗೆ ವ್ಯವಸ್ಥಾಪಕ ಮಂಡಲವನ್ನು ನಿಯಮಿಸುವದು ಮೊದಲಾದ ಕಾರ್ಯಕ್ರಮ ನಡೆಯುವದು.

ಮಂತ್ರಾಲಯದಲ್ಲಿ ಬರುವ ತಿಂಗಳು ಎರಡನೇ ವಾರದಲ್ಲಿ ನಡೆಯುವ ಶ್ರೀ ರಾಘವೇಂದ್ರ ಸ್ವಾಮಿಗಳ ಆರಾಧನಾ ಮಹೋತ್ಸವವು ಯಥಾವಿಧಿ ಜರುಗುವದು. ಈ ಕಾಲಕ್ಕೆ ಪರಿವೇಷಣಾದಿ ಕಾರ್ಯಗಳನ್ನು ಮಾಡಲು ಶ್ರೀಗಳ ಮಂತ್ರಾಲಯ ಯಾತ್ರಿಕರ ಸಂಘದವರಿಗೆ ಅಪ್ಪಣೆ ಕೊಟ್ಟದ್ದು ಇದಕ್ಕಾಗಿ ೨೦೦ ಸ್ವಯಂಸೇವಕರು ಬೇಕಾಗುವರು. ಅವರು ಸಂಘದ ಅಧ್ಯಕ್ಷರಿಗೆ ಮೊದಲೆ ತಿಳಿಸಬೇಕು. ಎಂದು ಮುಂತಾಗಿ ಪ್ರಕಟಿಸಲಾಗಿದೆ.

ದಕ್ಷಿಣ ಕನ್ನಡ

ಪ್ರಾಣಿದಯಾ ಸಂಘದ ಕಾರ್ಯಕಾರೀ ಸಮಿತಿಯ ಸಭೆಯು ದಿನಾಂಕ ೧೫ ರಂದು ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಜರಗಿದಾಗ (೧) ಕೃತಕ ಸಂತಾನೋತ್ಪತ್ತಿಯ ಮೂಲಕ ಜಾನುವಾರಗಳ ಸುಧಾರಣೆ ಮಾಡುವುದಕ್ಕೆ ಮಂಗಳೂರ ಜಾನುವಾರು ಆಸ್ಪತ್ರೆಯಲ್ಲಿ ತಕ್ಕ ವ್ಯವಸ್ಥೆ ಮಾಡಬೇಕು. (೨) ಇಲ್ಲಿಯ ಆಸ್ಪತ್ರೆಯಲ್ಲಿರುವ ಎರಡು ಬೀಜದ ಹೋರಿಗಳ ಹೊರತು ಇನ್ನೆರಡು ಹೋರಿಗಳನ್ನು ಕೊಡಿಸಬೇಕು. (೩) ಜಾನುವಾರು ಆಸ್ಪತ್ರೆಯ ಕೇಂದ್ರಕ್ಕೊಂದು ಬೀಜದ ಕೋಣವನ್ನು ಕೊಡಿಸಬೇಕು- ಎಂದು ಮುಂತಾದ ಠರಾವುಗಳಾದವು.

ಬೈಲೂರಿನ ಗಾಂಧೀ ಸ್ಮಾರಕ ಸಂಘದ ಪರವಾಗಿ ನಡೆಯುವ ವಾಚನಾಲಯದಲ್ಲಿ ೨೨ ಕ್ಕೆ ಜೆ ನಾಗಣ್ಣ ಹೆಗ್ಡೆ ಇವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಶ್ರೀ ಅನಂತಪ್ಪಾ ಶಿಣಯವರ ಆರಂಭ ಭಾಷಣವಾಯಿತು. ಕಾರ್ಕಳ ಭಾಗದ ಶಾಲಾಧಿಕಾರಿ ಶ್ರೀ ಉಜ್ವಲ ಇವರು ಪುಸ್ತಕ ಭಾಂಡಾರದ ಅವಶ್ಯಕತೆ ಮೊದಲಾದ್ದನ್ನು ಕುರಿತು ಮಾತಾಡಿದರು. ಅಧ್ಯಕ್ಷರ ಸಮಾರೋಪ ಮತ್ತು ಧನ್ಯವಾದಗಳ ನಂತರ ಸಭೆ ಕೊನೆಗೊಂಡಿತು.

ದಿನಾಂಕ ೩೦ ರಂದು ಪಶ್ಚಿಮ ಕರಾವಳಿಯ ಪಂಚಾಯತಗಳ ಪರಿಷತ್ತು ಮಂಗಳೂರಿನ ಗಣಪತಿ ಹೈಸ್ಕೂಲಿನಲ್ಲಿ ಜರಗುವುದು. ಅಧಿವೇಶನದಲ್ಲಿ ಭಾಗವಹಿಸಬಯಸುವವರು ಕಾರ್ಯದರ್ಶಿ ಡಿ. ವೋಹನರಾಯರಿಂದ ಮುಂಚಿತವಾಗಿ "ಪಾಸು" ಪಡೆದುಕೊಳ್ಳಬೇಕಾಗಿದೆ.

ಅಗ್ರಲೇಖ

ಆಹಾರಮಿತವ್ಯಯ

ಕಳೆದ ವಾರ ನಾನು ಆಹಾರದ ಉತ್ಪಾದನೆಯನ್ನು ಹೆಚ್ಚಿಸುವ ಉಪಾಯಗಳನ್ನೂ ಆಹಾರವನ್ನು ವಸೂಲುಮಾಡಿ ಅದರ ಸಂಗ್ರಹ ಮಾಡಿಟ್ಟುಕೊಳ್ಳುವ ರೀತಿಗಳನ್ನೂ ಚರ್ಚಿಸಿದ್ದೆ. ಈ ವಾರ ಅದನ್ನು ಕಾಪಾಡುವ, ಬಳಸುವ ಮತ್ತು ಹಂಚುವ ವಿಚಾರದಲ್ಲಿ ಮಿತವ್ಯಯದ ಉಪಾಯಗಳನ್ನು ವಿವೇಚಿಸಲು ಸಂಕಲ್ಪಿಸಿದ್ದೇನೆ.

ದೇಶದಲ್ಲಿ, ಅವಶ್ಯ ಬೇಕಾದ ಆಹಾರದಲ್ಲಿ ನೂರಕ್ಕೆ ಹತ್ತಕ್ಕಿಂತ ಹೆಚ್ಚು ಕೊರತೆಯಿದೆಯೆಂದು ಯಾವ ಸಂಖ್ಯಾತಜ್ಞನೂ ಹೇಳಿಲ್ಲವೆಂದು ನಂಬಿದ್ದೇನೆ. ಭಾರತದಂಥ ವಿಶಾಲವಾದ ದೇಶದಲ್ಲಿ ಇಷ್ಟೊಂದು ಕೊರತೆಯಿಂದ ಗಾಬರಿಯಾಗಿ ಕೈಕಾಲುಬಿಡುವ ಪ್ರಸಂಗವೇನೂ ಇಲ್ಲ. ೨೦ ಔನ್ಸಿನ ಪೂರ್ಣ ಸೀದಾ ಬೇಕಾದ ಮನುಷ್ಯನಿಗೆ ತಲಾ ದಿನಕ್ಕೆ ಎರಡು ಔನ್ಸು ಮಾತ್ರ ಕೊರತೆ ಬಿದ್ದಂತಾಯಿತು. ಯೋಗ್ಯವಾದ ಜೋಪಾನ ಮಿತವ್ಯಯವಾದ ಉಪಯೋಗ ಎಂದಾದರೊಮ್ಮೆ ಧಾನ್ಯರೂಪವಾದ ಆಹಾರವನ್ನು ಬಿಟ್ಟು ದಿನ ಸಾಗಿಸುವದು ಮತ್ತು ಯೋಗ್ಯ ಹಂಚುವ ವ್ಯವಸ್ಥೆ ಇವುಗಳಿಂದ ದೇಶದ ಪ್ರತಿಯೊಬ್ಬ ಪ್ರಜೆಗೂ ಅನ್ನವನ್ನು ಪೂರೈಸುವದು ವಿಶೇಷ ಕಷ್ಟವಿಲ್ಲದೆ ಸಾಧ್ಯವಾಗಬೇಕು. ಬಾಳೆಹಣ್ಣು, ಗೆಣಸು, ಬಟಾಟೆ ಮತ್ತು ಇತರ ಉಪಾಹಾರಗಳ ಸಹಾಯವನ್ನೂ ಅಷ್ಟಿಷ್ಟು ಪಡೆಯಬಹುದು. ಈ ಉಪಾಹಾರ ವಸ್ತುಗಳು ಸಾಕಷ್ಟು ಪರಿಮಾಣದಲ್ಲಿ ಮತ್ತು ಅಗ್ಗವಾಗಿ ದೊರೆತರೆ ಅವುಗಳನ್ನು ಬಳಸಲು ಪ್ರಚಾರ ಮಾಡುವ ಅವಶ್ಯಕತೆ ಕೂಡ ಇಲ್ಲ- ಏಕೆಂದರೆ, ಅವುಗಳು ಸರ್ವಥಾ ಸೇರುವದಿಲ್ಲೆಂದು ಯಾರೂ ಹೇಳಲಾರರು. ಆದರೆ ನಮ್ಮೀ ಬಡದೇಶದಲ್ಲಿ ಬಾಳೆಹಣ್ಣು ಬಟಾಟೆಗೇನಿರಲಿ, ಕಾಯಿಪಲ್ಲೆಗಳು ಕೂಡ ವರ್ಷದಲ್ಲೆಲ್ಲಾ ದೊರೆಯುವದಿಲ್ಲ. ಕೃಷಿಯಲ್ಲಾದ ಕೊರತೆಯನ್ನು ಕೆಲ ದನಗಳನ್ನು ಸಾಕುವ ಮೂಲಕ ಪರಿಹರಿಸಿಕೊಳ್ಳಬೇಕೆಂದೂ ದನಕರುಗಳ ಹೈನದಲ್ಲಿ ಬೀಳುವ ಕೊರತೆಯನ್ನು ಕೃಷಿಯಿಂದ ತುಂಬಿಕೊಳ್ಳಬೇಕೆಂದೂ ಹೇಳುವ ವಿಚಿತ್ರ ತರ್ಕಸರಣಿಯುಂಟಾಗಿದೆ ಇದು!

ಅಂಕೆ ಸಂಖ್ಯೆಗಳ ತಜ್ಞರು ಕಲೆ ಹಾಕಿದ ಲೆಕ್ಕಗಳ ಮೇಲಿಂದಲೆ ನಿಯಂತ್ರಣ, ಸೀದಾ ಮೊದಲಾದ ಕ್ರಮಗಳನ್ನು ಕೈಕೊಳ್ಳುವದು ಯೋಗ್ಯವಾಗಲಾರದು. ಹೆಸರಿಸುವಷ್ಟು ಕೊರತೆಯು ಇಲ್ಲವೆಂದು ನಂಬಲು ಆಸ್ಪದವುಂಟು. ಅನೇಕ ಲೇಖಕರು ಈ ಆಧಾರದಿಂದ ಸರಕಾರದ ನಿಯಂತ್ರಣ ಕ್ರಮಗಳನ್ನು ಟೀಕಿಸಿದ್ದಾರಲ್ಲದೆ, ವಿನಿಯಂತ್ರಣವನ್ನು ವಿರೋಧಿಸಿದ ಅಧಿಕಾರಿಗಳ ಸದುದ್ದೇಶವನ್ನೇ ಸಾಶಂಕರಾಗಿ ನೋಡಿದ್ದಾರೆ.

ನಿಜವಾದ ಅನುಭವದಲ್ಲಿ ಆಹಾರದ ಕೊರತೆ ಅಂಕೆ ಸಂಖ್ಯೆಗಳು ತೋರಿಸುವುದಕ್ಕಿಂತಲೂ ತೀವ್ರವಾಗಿದೆಯೆಂಬಲ್ಲಿ ಸಂಶಯವೇ ಇಲ್ಲ. ಗೋಪುರದ ತುದಿಯಿಂದ ಏಕಕಾಲದಲ್ಲಿ ಕೆಳಗೆ ಒಗೆದರೆ ಒಂದು ಭಾರವಾದ ಕಲ್ಲೂ ಒಂದು ಹುಲ್ಲು ಕಡ್ಡಿಯೂ ಏಕಕಾಲದಲ್ಲಿ ಭೂಮಿಯನ್ನು ತಲುಪಬೇಕೆಂಬ ಗುರುತ್ವಾಕರ್ಷಣ ಸಿದ್ಧಾಂತವು ಪ್ರಯೋಗದಲ್ಲಿ ಹೇಗೆ ಸುಳ್ಳಾಗಲ್ಪಡುವದೋ ಹಾಗೆಯೇ ಸಂಖ್ಯಾಶಾಸ್ತ್ರೀಯ ಲೆಕ್ಕವೂ ಅನುಭವದಲ್ಲಿ ಬೇರಾಗುವದು. ಸೈದ್ಧಾಂತಿಕ ಗಣನೆಯ ಸಂಗಡವೇ ಇತರ ಸ್ಥಿತಿಗತಿಗಳನ್ನೂ ಲೆಕ್ಕಕ್ಕೆ ತೆಗೆದುಕೊಂಡು ಹಿಡಿತಕ್ಕೆ ತರಬೇಕಾಗುವುದೆಂದೇ ಇದರ ಅರ್ಥ.

ಆಹಾರ ವಸ್ತುಗಳ ವಿಷಯವೂ ಉತ್ಪನ್ನದ ವಿಷಯದಂತೆಯೇ ಇದೆ. ಅರ್ಥಶಾಸ್ತ್ರಜ್ಞರು ಭಾರತೀಯನ ಸರಾಸರಿ ತಲಾ ಉತ್ಪನ್ನ ೧೮೦ ರೂಪಾಯಿ ಅಥವಾ ಅದಕ್ಕಿಂತಲೂ ಹೆಚ್ಚು ಎಂದು ಎಣಿಸಿ ಹೇಳುತ್ತಾರೆ. ಭಾಗಹಾರ ಮಾಡಿದರೆ ಅದು ತಲಾ ತಿಂಗಳಿಗೆ ೧೫ ರೂಪಾಯಿಯಾಗುವದರಿಂದ ಐವರಿಂದೊಡಗೂಡಿದ ಸಾಮಾನ್ಯ ಕುಟುಂಬವೊಂದರ ಸರಾಸರಿ ಮಾಸಿಕ ಉತ್ಪನ್ನ ೭೫ ರೂಪಾಯಿಯೆಂಬಾಯ್ತು. ಪ್ರತಿಯೊಬ್ಬನಿಗೂ ಇಷ್ಟು ಉತ್ಪನ್ನ ದೊರೆಯುವದು ನಿಜವಾಗಿದ್ದರೆ ರೊಕ್ಕದ ಕೊರತೆಗೆ ಅಷ್ಟೇನೂ ಕಾರಣವಿದ್ದಿಲ್ಲ. ಆದರೆ ಈ ಸರಾಸರಿ ಬರಿ ಮಾಯೆಯೆಂದು ನಮಗೆ ಗೊತ್ತು. ಅದು ಈ ಕೆಳಗಿನ ಮಾದರಿಯ ಉತ್ಪನ್ನಗಳನ್ನು ಕೂಡಿಸಿ ಭಾಗಿಸಿ ಲಬ್ಧವಾದ ಸರಾಸರಿ:

ಜನರ ಸಂಖ್ಯೆ	ಉತ್ಪನ್ನ ರೂ.	ಒಟ್ಟು ಉತ್ಪನ್ನ ರೂ.
೧	೧೦ ಲಕ್ಷ	೧೦ ಲಕ್ಷ
೧	೫ ,,	೫ ,,
೧೮	೦.೦೨ ಲಕ್ಷ	೦.೩೬ ಲಕ್ಷ
೮೦	೫೦ ರೂಪಾಯಿ	೦.೦೪ ಲಕ್ಷ
		೧೫.೪ ಲಕ್ಷ

ಸರಾಸರಿ ತಲಾ ಉತ್ಪನ್ನ ರೂ. ೧೫,೪೦೦

ಈ ಸರಾಸರಿ ಎಷ್ಟು ಅಡ್ಡದಾರಿ ಹಿಡಿಸುವದೆಂದೂ ಅದು ತೋರಿಸುವ ಸಮೃದ್ಧಿಯ ಚಿತ್ರ ಎಷ್ಟು ತಕ್ಕೇದೂ ವಿವರಿಸುವ ಅವಶ್ಯಕತೆಯೇ ಇಲ್ಲ. ಆಹಾರವಸ್ತುಗಳ ವಿಷಯದಲ್ಲಿ ಹೇಳಲ್ಪಡುವ ಸರಾಸರಿಯಾದರೂ ಇಷ್ಟೇ ಪೊಳ್ಳಯಾಗಿದೆ. ಈ ಲೆಕ್ಕಾಚಾರದಲ್ಲಿ ವಿತರಣದ ರೀತಿಯನ್ನು ಲಕ್ಷ್ಯಕ್ಕೆ ತೆಗೆದುಕೊಂಡೇ ಇಲ್ಲ. ಆದರೆ ಅದು ಅತ್ಯಂತ ಮಹತ್ವದ್ದು. ನೂರಕ್ಕೆ ಹತ್ತರಷ್ಟು ಆಹಾರದ ಉತ್ಪಾದನೆಯನ್ನು ಹೆಚ್ಚಿಸುವ ಕಾರ್ಯದಲ್ಲಿ ನಾವು ಗೆದ್ದರೂ ಅದು ಲೆಕ್ಕಾಚಾರದಲ್ಲಿ ಆಹಾರದ ಕೊರತೆಯನ್ನು ಬಾಯಿಗೂಡಿಸೀತೇ ಹೊರತು, ಪ್ರತಿಯೊಬ್ಬನಿಗೂ ಹೊಟ್ಟೆತುಂಬ ಆಹಾರ ದೊರೆತೀತೆಂದು ಹೇಳಲಳವಲ್ಲ. ಆಹಾರ ಧಾನ್ಯದ ರಕ್ಷಣೆ, ಹಂಚಿಕೆ ಮತ್ತು ಬಳಕೆಯ ವ್ಯವಸ್ಥೆಗಳು ಈಗಿರುವಂತೆಯೆ ಮುಂದೆಯೂ ಉಳಿದರೆ, ಹೊಟ್ಟೆತುಂಬ ಊಟ ದೊರೆಯದ ಲಕ್ಷಾಂತರ ಜನರು ದೇಶದಲ್ಲಿ ಇನ್ನೂ ಉಳಿದೇ ಉಳಿಯುವರು.

ಧಾನ್ಯಗಳ ಮಿತಿಮೀರಿದ ಕೊರತೆಯೆ ಹಸಿದ ಹೊಟ್ಟೆಗಳಿಗೆ ಕಾರಣವಲ್ಲ. ಬಂಗಾಲದಲ್ಲಿ ಹತ್ತು ಲಕ್ಷ ಜನರು ಉಪವಾಸ ಸತ್ತ ಕಾಲದಲ್ಲಿಯೂ ಕಲಕತ್ತೆಯಲ್ಲಿ ಎಷ್ಟೋ ಅಕ್ಕಿಯೂ ಹಿಟ್ಟೂ ಇತ್ತು. ಹುಳುಹುಪ್ಪಡಿ ಹಿಡಿದು ಹಾಳಾದ ಕಾರಣ ಸಾವಿರಾರು ಚೀಲ ಆಹಾರ ವಸ್ತುಗಳನ್ನು ಧ್ವಂಸ ಮಾಡಲಾಗಿತ್ತು. ಇಂದಿಗೂ ಟನ್‌ಗಟ್ಟಲೆ ಧಾನ್ಯಗಳು ಕೂಲಿಗೆ ಜನ ಸಾಲದೆ ಅಥವಾ ಗಾಡಿಯಲ್ಲಿ ಡಬ್ಬಿ ಸಾಲದೆ ಮತ್ತು ಇತರ ಕಾರಣಗಳಿಂದ ಧಕ್ಕೆಯನ್ನೋ ರೇಲ್ವೆ ಅಂಗಳಗಳನ್ನೋ ಬಿಟ್ಟು ಹೊರ ಹೋಗುವ ಮುನ್ನವೇ ಕೆಟ್ಟುಹೋಗುತ್ತವೆ. ೧೯೪೬ ರಲ್ಲಿ ನಾಗಪುರದ ಜನರು ಆಹಾರ ಸಾಲದೆ ಬಳಲುತಿದ್ದಾಗ ಕೇಂದ್ರ ಸೆರೆಮನೆಯಲ್ಲಿ ಮಣಗಟ್ಟಲೆ ಚಪಾತಿ, ತೊವೆ ಮೊದಲಾದವುಗಳನ್ನು ಗಟಾರಕ್ಕೆ ಸುರಿಯುವುದನ್ನು ಕಂಡಿದ್ದೆವು; ಪರಿಣಾಮವಾಗಿ ನೆರೆಹೊರೆಯಲ್ಲಿದ್ದ ಎಲ್ಲ ಕಾಗೆಗಳೂ ಅಲ್ಲಿ ಭೂರಿ ಭೋಜನ ಪಡೆಯ ಬರುತ್ತ ಸೆರೆಮನೆಯಲ್ಲಿ ತಮ್ಮ ಬಳಗವನ್ನೆ ಬೆಳೆಸಿಬಿಟ್ಟವು. ಉಗ್ರಾಣದ ವ್ಯವಸ್ಥೆಯಲ್ಲಿ ಅಸಡ್ಡೆ, ಸಾಗಿಸುವಲ್ಲಿ ವಿಲಂಬ, ತಿನ್ನುವುದರಲ್ಲಿ ಉದ್ದೇಶಪೂರ್ವಕ ದುಂದು, ಅಸಮಾನವಾದ ಹಂಚುವಿಕೆ, ಇವೀಗ ಆಹಾರ ಸಮಸ್ಯೆಯನ್ನು ನಿಜವಾಗಿ ಇರಬೇಕಾದುದಕ್ಕಿಂತ ಹೆಚ್ಚು ತೀಕ್ಷ್ಣವಾಗಿ ಮಾಡಿರುವ ಸಂಗತಿಗಳು. ಸೇವಕರು ಅಡಿಗೆ ಮಾಡುವ ಮನೆಗಳಲ್ಲಿ, ಜೋಪಾನದಲ್ಲಿ ಅಸಡ್ಡೆ, ಅಡಿಗೆ ಮಾಡುವಾಗ ಬಡಿಸುವಾಗ, ಉಣ್ಣುವಾಗ ಬೇಕೆಂದೇ ಹಾಳು ಮಾಡುವುದು ಇವುಗಳಿಂದ ತಿಂದಷ್ಟೇ ಆಹಾರ ಹಾಳಾಗುತ್ತದೆ.

ಒಳ್ಳೆಯ ಸ್ಥಿತಿಯಲ್ಲಿ ೨ ಅಥವಾ ೩ ವರ್ಷಗಳ ವರೆಗೆ ಧಾನ್ಯವನ್ನು ಸಂಗ್ರಹಿಸಿ ಇಡುವುದು ಅಸಾಧ್ಯವಲ್ಲ. ೪೦ ವರ್ಷಗಳ ಹಿಂದೆ ಮಧ್ಯ ವರ್ಗದ ಎಲ್ಲ ಕುಟುಂಬಗಳಿಗೂ ಒಕ್ಕಲಿಗರಿಗೂ ಅದು ಗೊತ್ತಿತ್ತು ಮತ್ತು ಅವರು ಹಾಗೆ ಮಾಡುತ್ತಿದ್ದರು. ಓದಿಯ ಹೆಂಗಸರಿದ್ದಲ್ಲಿ ಈಗಲೂ ಹಾಗೆ ಮಾಡುತ್ತಾರೆ. ಆಧುನಿಕ ಕ್ರಿಮಿನಾಶಕಗಳೂ ಸಿಮೆಂಟೂ ಆಗ ಗೊತ್ತಿಲ್ಲದಿದ್ದರೂ ಒಕ್ಕಲಿಗರು ತಮ್ಮ ಕಾಳುಗಳನ್ನು ಇಲಿ ಮತ್ತು ಹುಳುಹುಪ್ಪಡಿಗಳಿಂದ ಹೇಗೆ ಸುರಕ್ಷಿತವಾಗಿಡಬೇಕೆಂಬುದನ್ನು ಅರಿತಿದ್ದರು. ಈಗ ರಾಶಿಗಟ್ಟಲೆಯ ವ್ಯಾಪಾರಿಗಳಿಗೆ ಕೂಡ ಆ ಕ್ರಮಗಳ ಅರಿವಿಲ್ಲದಂತೆ ತೋರುತ್ತದೆ. ಎಷ್ಟೇ ಖರ್ಚು ಮಾಡಿ ಕಟ್ಟಿಸಿದವಿದ್ದರೂ ಸರಕಾರೀ ಕಣಜಗಳೂ ರೇಲ್ವೆ ಗುದಾಮುಗಳೂ ಅಪಮೃತ್ಯುಮಂದಿರಗಳಾಗಿವೆ. ಹೊಸ ಕಾಲದ ಹೆಣ್ಣುಮಗಳಿಗೆ ಇದನ್ನು ತನ್ನ ಗೃಹಕೃತ್ಯದ ಒಂದು ಅಂಗವೆಂದು ತಿಳಿಯಲು ಸೋಮಾರಿತನ ಬಿಟ್ಟಿಲ್ಲ. ಕೂಲಿಕಾರರಿಗೂ ಒಕ್ಕಲಿಗರಿಗೂ ಆಹಾರಧಾನ್ಯದ ಬಗ್ಗೆ ಹಿಂದಿನಂತೆ ಒಂದು ವಿಧದ ಪೂಜ್ಯಭಾವನೆ ಇಂದಿಲ್ಲ. ಮೊದಲು ಆಹಾರ ಧಾನ್ಯದ ಒಂದು ಕಣವನ್ನು ದೇವರ ಮೂರ್ತಿಯೋ ಎಂಬಷ್ಟು ಪವಿತ್ರಭಾವದಿಂದ ಕಾಣಲಾಗುತ್ತಿತ್ತು. ಅದನ್ನು ಕಂಡ ಯಾರೂ ಕಾಲಿನಿಂದ ತುಳಿಯುತ್ತಿದ್ದಿಲ್ಲ. ಕೈಯಲ್ಲಿ ಕಾಳು ಹಿಡಿದು ಪ್ರತಿಜ್ಞೆ ಮಾಡಿಬಿಟ್ಟರೆ ಅದು ಸರ್ವಥಾ ಪ್ರಮಾಣಬದ್ಧವಾಗಿ ಬಿಡುತ್ತಿತ್ತು. ಹೆಚ್ಚು ಬಡಿಸಿಕೊಂಡು ಬಟ್ಟಲಲ್ಲಿ ಚೆಲ್ಲಿಕೊಟ್ಟರೆ ನಮ್ಮನ್ನು ಹಿರಿಯರು ಬಯ್ಯುತ್ತಿದ್ದರು. ಬಟ್ಟಲಲ್ಲಿ ಚೆಲ್ಲುವ ಅಭ್ಯಾಸವನ್ನು ಕುಸಂಸ್ಕಾರವೆಂದು ಗಣಿಸಲಾಗುತ್ತಿತ್ತು. ಇಂದಿನ "ಫ್ಯಾಶನ್ನು" ಅದಕ್ಕೆ ತೀರ ವಿರುದ್ಧವಾಗಿರುವಂತೆ ಕಾಣುತ್ತದೆ. ಬಟ್ಟಲಲ್ಲಿಪ್ಪುದೆಲ್ಲವನ್ನೂ ಆರಿಸಿ ತಿನ್ನುವುದು ಕ್ಷುದ್ರತನವೆಂದೂ ಸಾಕಾದಷ್ಟನ್ನೇ ಬಡಿಸಿದ್ದರೂ ಅದರಲ್ಲಿ ಸ್ವಲ್ಪ ಚೆಲ್ಲಿ ಕೊಡುವುದು ನಿಯಮಗತ ಎಂದೂ ಇಂದು ಅತಿಥಿಗಳು ತಿಳಿದಿರುವಂತೆ ತೋರುತ್ತದೆ. ಈ "ಫ್ಯಾಶನ್ನು" ಹುಚ್ಚುತನವಷ್ಟೇ ಅಲ್ಲದೆ, ಅತಿಥಿಯ ಆರಾಧಕನಿಗೆ ಅವಮಾನಕರವೆಂದೂ ಭೂಮಿತಾಯಿಗೆ ಪಾಪವಾದಿಸಂತೆಯೆಂದೂ ತಿಳಿಯಬೇಕಾಗಿದೆ. ಚೆಲ್ಲುವುದನ್ನು ಒಂದು ವಿಲಾಸವೆಂದು ತಿಳಿದ ರಾಷ್ಟ್ರಕ್ಕೆ ಆಹಾರಾಭಾವ ಮತ್ತು ಕ್ಷಾಮಗಳ ಬಗ್ಗೆ ದೂರಿಕೊಳ್ಳಲು ಅಧಿಕಾರವಿಲ್ಲ; ಒಳ್ಳೆಯ ಬೆಳೆಗಾಗಿ ಕಾಲಕ್ಕೆ ಸರಿಯಾಗಿ ಮಳೆಗರೆಯಲಿಲ್ಲ ಎಂದು ದೇವರನ್ನು ದೂಷಿಸಲು ಹಕ್ಕಿಲ್ಲ. ಅಂಥ ವಿಲಾಸಗಳನ್ನು ಪ್ರೋತ್ಸಾಹಿಸುವ ಮುಖಂಡರು ಒಕ್ಕಲಿಗರಿಗೆ ಹೆಚ್ಚು ಬೆಳೆಯಲು ಮತ್ತು ಮಿಗಿತಾಯವನ್ನು ಮಾರಲು ತಾವು ಬಿನ್ನವಿಸಿಕೊಂಡದ್ದು ಬುಡ ಮೇಲಾದ ಥಾಲಿಯಲ್ಲಿ ನೀರು ಸುರಿದಂತೆ ವ್ಯರ್ಥವಾದರೆ ಆಶ್ಚರ್ಯಪಡಕೂಡದು.

ಈ ಎರಡು ಅತಿಗಳಕ್ಕೆ ಮಧ್ಯೆಯುಳ್ಳ [illegible] ಅನುಸರಿಸಿದ ಬರೆಯೂ ಸಮಾಜದ ದೃಷ್ಟಿ [illegible] ಉಳಿದೇ ಉಳಿಯುತ್ತದೆ. ಹೀಗೆ [illegible] ವಿರಲಿ, ಅತಿಯುಂಡವರಿರಲಿ, ಹೀಗಾ [illegible] ಇಲ್ಲದಿರಲಿ– ಬೇರೆಯವರಿಗೆ [illegible] ನಮಗೆ ಆಗತ್ಯವಾದುದಕ್ಕಿಂತ ಎಷ್ಟೋ ಹೆಚ್ಚು ಹೆಚ್ಚಿನ ಆಹಾರ ಸಾಮಗ್ರಿಯು [illegible] ಲಕ್ಷಾಂತರ ಜನರಿಗೆ [illegible] ಒಂದು ದೊಡ್ಡ [illegible] ಅವರ ಒಂದೆರಡು [illegible] ರೂಪಾಯಿಗಳ ವರೆಗೆ ಏರುವಂತೆ ಅತಿಥಿಗಳಿಗೆ ಊಟ ಮಾಡಿಸುವದು ನಡೆದಿರುತ್ತದೆ; ಅವರ ಮತ್ತೊಂದೆಡೆ ಆ ಅತಿಥಿಗಳು ತಿಂದು ಚೆಲ್ಲಿದ ಎಂಜಲಿಗಾಗಿ ಭಿಕ್ಷುಕರೂ ಭಂಗಿಗಳೂ ಜಗಳ ಮಾಡುತ್ತಿರುವುದು ನಿಮ್ಮ ಕಣ್ಣಿಗೆ ಬೀಳುತ್ತದೆ. ಇದು ಹೊಸದಕ್ಕಲ್ಲೇ ಹೊಲಸು ಒಂದು ಅಪರಾಧ ಮತ್ತು [illegible] ವಾದ ಅಶ್ಲೀಲದ ವಿಧಿಯಂತೆ ಅದು [illegible] ಹೋಗದು. ಅಂಥ ಭೋಜನಸಮಾರಂಭಗಳ ಏರ್ಪಡು ಸಮಾಜಕ್ಕೆ ಮಾಡುವ ಅಪರಾಧಗಳು ಅವನ್ನು ಎಲ್ಲರೂ ಪಾಪವಾಗಿಯೇ ಬಿಡಬೇಕು ಮತ್ತು ಕಾಯದೆಯ ಮೂಲಕವಾಗಿಯೂ ನಿರ್ಬಂಧಿಸಬೇಕು.

ಕಂದಾಯವನ್ನು ಧಾನ್ಯದ ಮೂಲಕ ವಸೂಲು ಮಾಡುವುದು, ಹಾಗೆ ಸಂಗ್ರಹಿಸಿದ ಧಾನ್ಯದ ಬಹ್ವಂಶವನ್ನು ಹಳ್ಳಿಯ ಕಣಜದಲ್ಲೇ ಕೂಡಿಡುವುದು, ಹಳ್ಳಿಯ ಧಾನ್ಯದ ಸಹಕಾರ ಸಂಘಗಳನ್ನು ತೆರೆಯುವುದು, ಎಲ್ಲ ಬಗೆಯ ವಾಹನಗಳನ್ನೂ ಬಳಸುವುದು, ಮತ್ತು ಎಲ್ಲ ಕೆಲಸಗಾರರಿಗೂ ನೌಕರರಿಗೂ ಸಂಬಳ ಕೂಲಿಗಳಲ್ಲಿ ಕೆಲವಂಶವನ್ನು ಧಾನ್ಯರೂಪದಿಂದ ಕೊಡುವುದು ಇವೆಲ್ಲ ಸಮವಿತರಣವನ್ನು ಸಾಧಿಸುವುದರಲ್ಲಿ ನಮ್ಮನ್ನು ಬಹಳ ದೂರ ಒಯ್ಯಬಲ್ಲವಾಗಿವೆ. ಆಹಾರದ ಮಿತವ್ಯಯ, ಸಂರಕ್ಷಣೆ ಮತ್ತು ಸಂಗ್ರಹಗಳು ಆಹಾರದ ಬೆಳೆಯನ್ನು ಹೆಚ್ಚಿಸುವದರಷ್ಟೇ ಮುಖ್ಯವಾದುವು.

ವರ್ಧಾ, ಕಿ. ಘ. ಮಶ್ರುವಾಲಾ
೨೦–೭–೪೮

ತಪ್ಪು ತಿಳಿವಳಿಕೆ

"ಹೇಯ ವರ್ತನೆ" ಎಂಬ ನನ್ನ ಲೇಖದಿಂದ ಹಲವಾರು ಜನರು ರೊಚ್ಚಿಗೆದ್ದು ಪತ್ರ ಬರೆದಿರುವರಲ್ಲದೆ ಟೀಕೆಯನ್ನೂ ಮಾಡಿರುವರು. ಇದಕ್ಕೆ ನಾನು ವಿಷಾದಿಸುತ್ತೇನೆ. ಬಂಗಾಲಿಗಳೆಲ್ಲರ ಅಪಮಾನವಿದೆಂದು ತಿಳಿಯಲಾಗಿದೆ.

"ನಾನು ಉಲ್ಲೇಖಿಸಿದ ಎರಡೂ ಘಟನೆಗಳನ್ನು ಕೆಲವು ಲೇಖಕರು ಎತ್ತಿ ಹಿಡಿದಿದ್ದಾರೆ. ರಾಷ್ಟ್ರಧ್ವಜಕ್ಕೆ ಈ ಮೊದಲು ಇದೇ ರೀತಿ ಅವಮಾನಗೊಳಿಸಲಾಗಿದೆಂದು ಒಬ್ಬ ಲೇಖಕನು ಬರೆದಿರುವನು. ಉಳಿದ ಪ್ರಾಂತಗಳಲ್ಲಿ ಆದ ಇದೇ ಬಗೆಯ ಎರಡು ಘಟನೆಗಳನ್ನೂ ಅವನು ಉಲ್ಲೇಖಿಸಿರುವನು. ಮತ್ತೊಮ್ಮೆ ಅದನ್ನು ಅವಮಾನಗೊಳಿಸಿದ್ದಾದರೆ ಅದೇನು ಮಹತ್ವದ್ದಲ್ಲ! ಎಂದು ಅವನ ಅಭಿಪ್ರಾಯ. ಅರಸನ ಜನ್ಮದಿನ ಸರಕಾರೀ ಕಚೇರಿಗಳ ಮೇಲೆಲ್ಲ ರಾಷ್ಟ್ರೀಯ ಧ್ವಜದ ಜೊತೆಯಲ್ಲಿ ಯೂನಿಯನ್ ಜ್ಯಾಕನ್ನು ಹಾರಿಸಿ ಸರಕಾರದವರೇ ರಾಷ್ಟ್ರಧ್ವಜಕ್ಕೆ ಅಷ್ಟೇ ಅಪಮಾನ ಮಾಡಿರುವರೆಂದು ಮತ್ತೊಬ್ಬ ಲೇಖಕನು ಬರೆಯುತ್ತಾನೆ. ಭಾವನೆಗಳು ಉದ್ರಿಕ್ತವಾದಾಗ ವಿಚಾರ ಶಕ್ತಿಯು ಹೇಗೆ ಮಸುಳಿಸುತ್ತದೆ ಎಂಬುದರ ನಿದರ್ಶನವಿದು. ಹಿಂದೆ ಸಂಭವಿಸಿದೆಂದು ಹೇಳಲಾಗುತಿರುವ ಎರಡು ಘಟನೆಗಳ ಉಲ್ಲೇಖವು ಸರಿಯಿದ್ದರೆ ಜನತೆಯಲ್ಲಿ ಸಾಕಷ್ಟು ಶಿಸ್ತು ಸಂಯಮಗಳು ಉಂಟಾಗುವವರೆಗೆ ನಾವು ರಾಷ್ಟ್ರಧ್ವಜವನ್ನೇ ಹಾರಿಸತಕ್ಕದ್ದಲ್ಲ ಎಂಬುದರ ನಿದರ್ಶಕವೂ ಆಗಿದೆ. ಆದರೆ ಮೂರನೆಯ ಘಟನೆಯು ಮಾತ್ರ ನ್ಯಾಯ್ಯಬದ್ಧವಾಗಿರುವುದಿಲ್ಲ. ಏನೇ ಆದರೂ ಯಾವದೇ ಪಕ್ಷದವರು ಚುನಾವಣೆಗಳಲ್ಲಿ ರಾಷ್ಟ್ರಧ್ವಜವನ್ನು ಉಪಯೋಗಿಸಬಾರದು.

ಯೂನಿಯನ್ ಜ್ಯಾಕನ್ನು ಹಾರಿಸುವದು ಸದ್ಯದ ಘಟನಾತ್ಮಕ ಪರಿಸ್ಥಿತಿಗೆ ಅನುಗುಣವಾಗಿದೆಯೆಂದು ನನ್ನ ನಂಬಿಕೆ. ಹಿಂದುಸ್ತಾನವಿನ್ನೂ ಯೂನಿಯನ್ ಜ್ಯಾಕಿನ ಅಧೀನದಲ್ಲಿರುವ ಸಾಮಂತರಾಜ್ಯವು ಅದು ೬ ನೇ ಜಾರ್ಜ ಮಹಾರಾಜರಿಗೆ ಹಿಂದುಸ್ತಾನದ ನಿಷ್ಠೆಯನ್ನು ವ್ಯಕ್ತಪಡಿಸುತ್ತದೆ; ಅವರ ಗವರ್ನರ ಜನರಲ್ಲರೆ ಹಿಂದುಸ್ತಾನ ಸರಕಾರದ ಮುಖ್ಯಸ್ಥರು. ಹಿಂದುಸ್ತಾನವು ತನ್ನ ಘಟನೆಯನ್ನು ಪಾಸು ಮಾಡಿಕೊಂಡು ಸ್ವತಂತ್ರ ಸಾರ್ವಭೌಮ ಸರಕಾರವೆಂದು ಘೋಷಿಸಿದನಂತರ ಅದೇ ಕ್ಷಣ ಅರಸರಾಗಲಿ ಅವರ ಪ್ರತಿನಿಧಿಗಳಾದ ಗವರ್ನರ ಜನರಲ್ಲರಾಗಲಿ ಉಳಿಯುವ [illegible] ಅನಂತರವೆ [illegible] ಘಟನೆಯನ್ನು ಹೊಂದುತ್ತದೆ. ಶ್ರೀ ಸುಚೇತಾ ಕೃಪಲಾನಿಯವರ ಮೇಲೆ ಆದ ಹಲ್ಲೆಯನ್ನೂ ಇದೇ ರೀತಿಯಾಗಿ ನ್ಯಾಯ್ಯವೆಂದು ಪ್ರತಿಪಾದಿಸಲಾಗುತ್ತದೆ. ಚುನಾವಣೆಯೆಂದರೆ ಯಾವಾಗಲೂ ಸ್ವಲ್ಪ ಗೊಂದಲಗೋಳ, ಆ ಪ್ರಸಂಗಕ್ಕನುಸಾರವಾಗಿ ಏಳಬಹುದಾದ ಭಾವೋದ್ರೇಕಗಳಲ್ಲಿ ಗದ್ದಲ ಗುದ್ದಾಟ ಮೊದಲಾದವನ್ನು ಅನುಭವಿಸಲು ಸಿದ್ಧರಿದ್ದವರೆ ಅದರಲ್ಲಿ ಸೇರಬೇಕು ಎಂದು ಕೆಲವು ಲೇಖಕರು ಹೇಳುತ್ತಾರೆ. ಗೌರವಪೂರ್ವಕವಾದ ಮರ್ಯಾದೆ ಬೇಕೆನ್ನುವ ಹೆಣ್ಣುಮಕ್ಕಳು ಚುನಾವಣೆರಂಗಗಳನ್ನೇ ಪ್ರವೇಶಿಸಬಾರದು. ಸೈನಿಕರೆಂದು ಯುದ್ಧರಂಗದಲ್ಲಿ ಸೇರಿದ ಹೆಣ್ಣುಮಕ್ಕಳು ತಮಗೆ ಗುಂಡಿನೇಟುಗಳು ಬೀಳದಿರಲೆಂದು ಹೇಳಿದರೆ ನಡೆಯುವುದೇ? ನಮ್ಮ ಪಾಡಿಗೇ ಬಿಟ್ಟದ್ದಾದರೆ ಚುನಾವಣೆರಂಗಗಳನ್ನು ಸ್ವಾತಂತ್ರ್ಯದಲ್ಲಿ ಯಾವದೇ ಕಲಹ ಭೂಮಿಗಳನ್ನಾಗಿ [illegible] ಪರಿವರ್ತಿಸಿಕೊಳ್ಳುವವರೆಂದು [illegible] ಅರ್ಥವಾಗುವದು. ನಮ್ಮ ನಾಗರಿಕತೆಗೆ ದೊರೆತ ಈ ಕುಶಿಕ್ಷಣವನ್ನೇ ನಾನು ತೆಗಳ್ದೇನೆ. ನಾನು ಅದನ್ನು ತೆಗಳಲೇಬೇಕು. ಈ ಬಗೆಯ ನಾಗರಿಕತೆಯಿಂದ ಪ್ರಜಾಪ್ರಭುತ್ವ ಬಾಳಲಾರದು.

ಸಂಯುಕ್ತ ಪ್ರಾಂತದಲ್ಲಿಯ ಚುನಾವಣೆಯೊಂದರಲ್ಲಿ [illegible]

([illegible] ನೆಯ ಪುಟಕ್ಕೆ)

ಗ್ರಹಗಳ ಮುನ್ನೋಟ

ಅಗಸ್ಟ್ ೧ ರಿಂದ ೭ ರ ವರೆಗೆ

ಜ್ಯೋತಿಷಿ:— ಶ್ರೀ ಕೃಷ್ಣಶಾಸ್ತ್ರಿ ಭಿಡೆ, ಬೆಳಗಾಂವಿ

ಮೇಷ

ನಿಮ್ಮೆಲ್ಲರ ಆರೋಗ್ಯವೂ ಚೆನ್ನಾಗಿರುವ ದಲ್ಲದೆ ಪ್ರಾಪಂಚಿಕ ಸುಖವೂ ಅನುಕೂಲವೆ. ಆದರೆ ನಿಮ್ಮ ಮಕ್ಕಳಲ್ಲೊಬ್ಬನು ಮನೆತನದ ಗೌರವಕ್ಕೆ ಭಂಗ ಬರಬಹುದಾದಂಥ ರೀತಿ ಯಲ್ಲಿ ವರ್ತಿಸುವ ಸಂಭವವಿದೆ. ಸ್ಥಿರಾಸ್ತಿ ಯಲ್ಲಿ ನಿಮಗೆ ಅನುಕೂಲವಾದ ಮಾತುಗಳು. ದೊಡ್ಡ ಮನುಷ್ಯರ ಭೆಟ್ಟಿಯ ಯೋಗವಿದೆ. ಉದ್ಯೋಗದಲ್ಲಿ ಲಾಭವೂ ಪ್ರತಿಷ್ಠೆಯೂ ಯಥೇಷ್ಟ. ಕೋರ್ಟು ಕಚೇರಿ ವ್ಯವಹಾರವೇ ಮೊದಲಾದುದರಲ್ಲಿ ನಿಮಗೇ ಯಶಸ್ಸಾದರೂ ಶತ್ರು ಇನ್ನೂ ಒಂದು ವಾರ ನಿಮ್ಮೊಳಗೆ ಒಡಕು ಹುಟ್ಟಿಸುವ ತಂತ್ರ ಹೂಡಬಹುದು. ಪ್ರವಾಸ ಬೇಡ. ಭೆಟ್ಟಿಯೂ ಫಲಿಸುವ ಸಂಭವ ಕಡಿಮೆ. ಪತ್ರವ್ಯವಹಾರವೇ ಲೇಸು. ಭರಣಿಯವರಿಗೆ ತೊಂದರೆ ಕಡಿಮೆ. ತಾ. ೧, ೩, ೫, ೬ ಅನುಕೂಲ.

ವೃಷಭ

ನಿಮ್ಮ ಪ್ರಕೃತಿ ಚೆನ್ನಾಗಿದ್ದರೂ ಹೆಂಡತಿ ಮಕ್ಕಳಿಗೆ ತುಸು ಕ್ಲೇಶದ ಯೋಗದಿಂದಲೂ ಪತಿಪತ್ನಿಯರಲ್ಲಿ ಅಷ್ಟು ಐಕಮತ್ಯವಿಲ್ಲದ್ದರಿಂದಲೂ ಸಾಂಸಾರಿಕ ಸುಖ ಸ್ವಲ್ಪ ಕಡಿಮೆ. ಉದ್ಯೋಗದಲ್ಲಿ ಸಾಧಾರಣ ಪ್ರತಿಷ್ಠೆಯೂ ಲಾಭವೂ ದೊರಕುವದು. ಶತ್ರುವಿನ ಕಿರುಕುಳ ಕುಗ್ಗದಿದ್ದರೂ ನಿಮಗೆ ಜಯದ ಚಿಹ್ನಗಳು ಸ್ಪಷ್ಟವಾಗಿ ಗೋಚರವಾಗುವವು. ಪ್ರವಾಸ ವಿಶೇಷ ಹಿತಕರವಾಗದು. ಪತ್ರವ್ಯವಹಾರ ವಾಗಲಿ ಭೆಟ್ಟಿಯಾಗಲಿ ಫಲಕಾರಿಯಾಗುವ ಸಂಭವವುಂಟು. ತಾ. ೩, ೪, ೭ ಅನುಕೂಲ.

ಮಿಥುನ

ಪ್ರಕೃತಿ ಉತ್ತಮ, ಪ್ರಾಪಂಚಿಕ ಸುಖಕ್ಕೂ ಕೊರತೆಯಿಲ್ಲ. ಆದರೆ ಇಂದಿನ ಯುಗಧರ್ಮಕ್ಕನುಸಾರವಾಗಿ ನೌಕರ ಚಾಕರರು ಕೊಡುವ ಕಿರುಕುಳಗಳನ್ನು ನೀವು ಉಪಾಯದಿಂದ ನಿವಾರಿಸಿರಿ. ಉದ್ಯೋಗದಲ್ಲಿ ಲಾಭ ಚೆನ್ನಾಗಿದ್ದರೂ ಪ್ರತಿಷ್ಠೆಯನ್ನು ಕುಂದಿಸುವ ಘಟನೆಗಳು ಜರುಗುವ ಸಂಭವ. ಪರಸ್ತ್ರೀ ಮೋಹಕ್ಕೆ ಎಳೆಯುವ ನಿಮ್ಮ ಮನಸ್ಸು ನಿಯಂತ್ರಿಸಲ್ಪಡದಿದ್ದರೆ ಘನತೆಗೆ ಕುಂದು ಬಾರದಿದ್ದೀತೆ? ಪ್ರವಾಸವೂ ಭೆಟ್ಟಿಯೂ ಕಷ್ಟದಿಂದಲೇ ಜರುಗಿದರೂ ನಿಮ್ಮ ಇಷ್ಟವನ್ನು ಪೂರೈಸುವವು. ಪತ್ರವ್ಯವಹಾರಕ್ಕೂ ಅಡ್ಡಿಯಿಲ್ಲ. ಆರ್ದ್ರೆಗೆ ಹೆಚ್ಚು ಉತ್ತಮ. ತಾ. ೧, ೩, ೫, ೬ ಅನುಕೂಲ.

ಕರ್ಕ

ಪ್ರಕೃತಿ ಉತ್ತಮ. ಆದರೆ ನಿಮ್ಮ ಹೆಂಡತಿ ಮಕ್ಕಳನ್ನು ಒಲಿಸಿಕೊಂಡು ಸಾಗುವದು ತುಸು ಕಠಿನವಾದೀತು. ಉದ್ಯೋಗದಲ್ಲಿ ಲಾಭ ನಿರೀಕ್ಷಿಸಿದ್ದಕ್ಕಿಂತ ಕಡಿಮೆಯಾಗಲಾರದಾದರೂ ಪ್ರತಿಷ್ಠೆಗೆ ನಾನಾ ಆತಂಕಗಳೊದಗುವಂತಿವೆ. ವೆಚ್ಚವೂ ತುಂಬ. ಕ್ಷುಲ್ಲಕ ವಿಷಯಗಳಲ್ಲಿ ವಾದವಿವಾದಕ್ಕೆ ನಿಂತು ಮತ್ತೆ ಬೈದಾಟದಲ್ಲಿ ಅವಸಾನಹೊಂದುವ ಸ್ಥಿತಿಯನ್ನು ತಂದುಕೊಳ್ಳಬೇಡಿರಿ. ವಾದ ಸ್ಪರ್ಧೆಗಳಲ್ಲಿ ಇನ್ನೂ ಕೆಲ ವಾರ ಯಾವ ಬದಲಾವಣೆಯೂ ಆಗಲಾರದು. ಪ್ರವಾಸ ಸುಖಕರ. ಪತ್ರವ್ಯವಹಾರವೂ ಸಫಲ. ಭೆಟ್ಟಿಗೆ ಅನುಕೂಲ ಕಾಲವಿಲ್ಲ. ಪುಷ್ಯ ನಕ್ಷತ್ರದವರಿಗೆ ಸ್ವಲ್ಪ ತ್ರಾಸಯೋಗ. ತಾ. ೩, ೪, ೭ ಅನುಕೂಲ.

ಸಿಂಹ

ಹೆಂಡತಿಯ ಆರೋಗ್ಯ ಸರಿಯಾಗಿದ್ದರೂ ನಿಮಗಾಗಲಿ ನಿಮ್ಮ ಮಕ್ಕಳಲ್ಲೊಬ್ಬರಿಗಾಗಲಿ ಅನಾರೋಗ್ಯವಾಗುವಹಾಗಿದೆ. ಉದ್ಯೋಗದಲ್ಲಿ ಪ್ರತಿಷ್ಠೆಯೂ ಲಾಭವೂ ಉತ್ತಮವಾಗಿದ್ದರೂ ಸಿಕ್ಕಾಬಟ್ಟೆ ವೆಚ್ಚಮಾಡುವ ಪ್ರವೃತ್ತಿ ಕಡಿಮೆಯಾಗದಿದ್ದರೆ ಅಡಚಣಿಹೇಗೆತಪ್ಪೀತು? ಮಾತಿನಲ್ಲಿ ಎಚ್ಚರವಿರಲಿ, ನೀವು ಸಹಜವಾಗಿ ಅಂದದ್ದೂ ಜನರು ತಪ್ಪು ತಿಳಿದುಕೊಳ್ಳುವಂತಿದೆ. ಕೋರ್ಟು ಕಚೇರಿ ಮತ್ತು ಸ್ಪರ್ಧೆಗಳ ವಿಚಾರದಲ್ಲಿ ತುಂಬ ಹಾದಾಹಾದಿಯಾದರೂ ಪರಿಣಾಮ ಮಾತ್ರ ಹೇಗೆಂದೂ ಹಿಸುವದು ಸಾಧ್ಯವಿಲ್ಲ. ಮಿತ್ರರಲ್ಲಿ ವಿರೋಧ ಬೆಳೆಯಬಹುದು. ಪ್ರವಾಸ ಮತ್ತು ಭೆಟ್ಟಿ ಉತ್ತಮ. ಪತ್ರವ್ಯವಹಾರ ನಿಷ್ಫಲ. ಪೂರ್ವಾನಕ್ಷತ್ರಕ್ಕೆ ತೊಂದರೆ ಕಡಿಮೆ. ತಾ. ೧, ೩, ೫, ೬ ಅನುಕೂಲ.

ಕನ್ಯಾ

ನಿಮ್ಮಿಬ್ಬರ ಪ್ರಕೃತಿಯೂ ಚೆನ್ನಾಗಿದ್ದರೂ ಪರಸ್ಪರ ಭಿನ್ನಾಭಿಪ್ರಾಯಗಳಿಂದ ತುಸು ಮನಸ್ತಾಪವುಂಟಾದೀತು. ಉದ್ಯೋಗದಲ್ಲಿ ಪ್ರತಿಷ್ಠೆಯೂ ಲಾಭವೂ ಉತ್ತಮವಾಗಿದ್ದರೂ ನಿಮ್ಮ ಉದ್ದೇಶ ಸಾಧಿಸಿಕೊಳ್ಳಲು ತುಂಬ ವೆಚ್ಚಮಾಡಬೇಕಾಗಿ ಬರುವದು. ಸ್ಥಾವರ ಆಸ್ತಿ ಬೆಳೆಯುವಂತಿದೆ. ನೀವು ನೌಕರಿಯಲ್ಲಿದ್ದರೆ ಬದಲಿಯಾಗುವ ಸಂಭವವುಂಟು. ಪ್ರವಾಸ ಹಿತಕರವಲ್ಲ. ಭೆಟ್ಟಿಯೂ ಪತ್ರವ್ಯವಹಾರವೂ ಲೇಸು. ಹಸ್ತಾ ನಕ್ಷತ್ರದವರಿಗೆ ತೊಂದರೆ ಕಡಿಮೆ. ತಾ. ೧, ೩, ೪, ೮ ಅನುಕೂಲ.

ತುಲಾ

ಆರೋಗ್ಯ ಚೆನ್ನಾಗಿದ್ದರೂ ಮನೆಗೆ ಬಂದ ಅತಿಥಿಗಳು ಅಸಂತುಷ್ಟರಾಗುವದೂ ಆಪ್ತರಲ್ಲಿ ಮನಸ್ತಾಪವುಂಟಾಗುವದೂ ನಿಮ್ಮ ಮನಶ್ಶಾಂತಿಯನ್ನು ಕೆಡಿಸಬಹುದು. ಉದ್ಯೋಗದಲ್ಲಿ ಪ್ರತಿಷ್ಠೆಯೂ ಲಾಭವೂ ತುಂಬ. ಆದರೂ ಮೊದಲೇ ಎಣಿಸಿಟ್ಟ ಕಾರ್ಯಗಳಿಗಾಗಿ ಹಣವನ್ನು ಸುರಿಸುವಿರಿ. ವ್ಯಾಜ್ಯ ಸ್ಪರ್ಧೆಗಳಲ್ಲಿ ನಿಮ್ಮ ಕೈಯೇ ಮೇಲಾದರೂ ಪ್ರತ್ಯಕ್ಷವಾಗಿ ನಿಮಗಾಗುವ ಲಾಭ ಮಾತ್ರ ಅಷ್ಟಕ್ಕಷ್ಟೆ. ಪ್ರವಾಸಾದಿ ಕಾರ್ಯಗಳು ಬಯಸಿದಂತೆ. ಸ್ವಾತಿಗೆ ತುಂಬ ಸಾಹಸದಿಂದಲೇ ಜಯ ದೊರಕೀತು. ತಾ. ೧, ೩, ೪, ೮ ಅನುಕೂಲ.

ವೃಶ್ಚಿಕ

ನಿಮ್ಮ ಆರೋಗ್ಯ ಅಷ್ಟು ಸಮಾಧಾನಕರವಾಗಿರದಿದ್ದರೂ ಮನೆಯಲ್ಲಿ ಉಳಿದವರು ಸೌಖ್ಯವಾಗಿರುವರು. ಮಕ್ಕಳಲ್ಲೊಬ್ಬನ ಶಿಕ್ಷಣ ಅಥವಾ ಭಾವೀ ಉತ್ಕರ್ಷದ ವಿಷಯದಲ್ಲಿ ಏನಾದರೊಂದು ಪೇಚು ಗಂಟುಬೀಳಬಹುದು. ಸ್ಥಾವರ ಆಸ್ತಿಯ ಹೆಚ್ಚಳ. ಉದ್ಯೋಗದಲ್ಲಿ ಪ್ರತಿಷ್ಠೆ ಲಾಭ ಅತ್ಯುತ್ತಮ. ವಾಜ್ಯ ಅಥವಾ ಸ್ಪರ್ಧೆಯಲ್ಲಿ ಎರಡೂ ಪಕ್ಷಗಳು ಇದ್ದಂತೆಯೆ ಉಳಿಯುವ ಪ್ರಸಂಗ. ಪ್ರವಾಸ ಬೇಡ. ಭೆಟ್ಟಿ ಪತ್ರವ್ಯವಹಾರಗಳಿಗೆ ಅಡ್ಡಿಯಿಲ್ಲ. ಅನುರಾಧೆಗೆ ತೊಂದರೆಯಿಂದಲೇ ಇಷ್ಟಸಿದ್ಧಿ. ತಾ. ೪, ೪, ೫, ೬ ಅನುಕೂಲ.

ಧನು

ನಿಮ್ಮ ಆರೋಗ್ಯ ಸರಿಯಾಗಿರುವದು. ಹೆಂಡತಿಯದು ಅಷ್ಟು ಸಮರ್ಪಕವಾಗಿಲ್ಲದಿದ್ದರೂ ನಿಮ್ಮೊಳಗಿನ ಐಕಮತ್ಯದಿಂದ ಸಂಸಾರ ಸುಗಮವಾಗಿ ನಡೆಯುವದು. ಆದರೆ ಹೊರಗೆ ಮಾತ್ರ ಮಹಾ ಪ್ರಯಾಸದಿಂದಲೇ ನೀವು ಕೆಲಸಗಳನ್ನು ಸಾಧಿಸಬೇಕಾದೀತು. ಧನಲಾಭಕ್ಕೇನೂ ಕೊರತೆಯಿಲ್ಲ. ವ್ಯಾಜ್ಯ ಸ್ಪರ್ಧೆ ಮೊದಲಾದವುಗಳಲ್ಲಿ ನಿಮಗೆ ಅನುಕೂಲತೆ. ಆದರೂ ಶತ್ರುವಿನ ಒಳಸಂಚನ್ನು ಭೇದಿಸಲು ನೀವು ಪ್ರಯತ್ನಿಸಿರಿ. ಪ್ರವಾಸಾದಿ ಕಾರ್ಯಗಳು ಅಷ್ಟು ಸುಗಮವಾಗಿ ನಡೆಯಲಿಕ್ಕಿಲ್ಲ. ಪೂರ್ವಾಷಾಢಾ ನಕ್ಷತ್ರದವರಿಗೆ ಅಷ್ಟೇನೂ ತ್ರಾಸವಿಲ್ಲ. ತಾ. ೧, ೩, ೫, ೬ ಅನುಕೂಲ.

ಮಕರ

ನಿಮಗೆಲ್ಲರಿಗೂ ಆರೋಗ್ಯಭಾಗ್ಯ ತುಸು ಕಡಿಮೆ. ಉಳಿದ ಪ್ರಾಪಂಚಿಕ ಸುಖ ನೆಟ್ಟಗೆ. ಉದ್ಯೋಗದಲ್ಲಿ ಟೊಳ್ಳು ಪ್ರತಿಷ್ಠೆಗೇನೂ ದಾರಿದ್ರ್ಯವಿಲ್ಲದಿದ್ದರೂ ಲಾಭ ಮಾತ್ರ ಸೊನ್ನೆ. ಆದರೆ ವ್ಯಾಜ್ಯ ಸ್ಪರ್ಧೆಗಳಲ್ಲಿ ನಿಮ್ಮ ಶತ್ರುವನ್ನು ಮುರಿಬಡಿಯುವಿರಿ. ಪ್ರವಾಸ ಹಿತಕರ. ಪತ್ರವ್ಯವಹಾರ ಲೇಸಲ್ಲದೆ ಭೆಟ್ಟಿ ಪ್ರಯೋಜನದ್ದಲ್ಲ. ಶ್ರವಣಾನಕ್ಷತ್ರಕ್ಕೆ ತೊಂದರೆ ಕಡಿಮೆ. ತಾ. ೧, ೩, ೪, ೮ ಅನುಕೂಲ.

ಕುಂಭ

ನಿಮ್ಮ ಪ್ರಕೃತಿ ಸರಿಯಾಗಿದ್ದರೂ ಹೆಂಡತಿ ಮಕ್ಕಳ ಬಗ್ಗೆ ನೀವು ಎಚ್ಚರಿಕೆ ವಹಿಸಲೇಬೇಕು. ಜಗಳಗಳಿಂದ ಮನನೋಯುವದು. ಉದ್ಯೋಗದಲ್ಲಿ ಕೋಟಿ ಸಿಂಗಾರ ಒಳಗೆ ಗೋಳೀಸೊಪ್ಪು ಎಂಬಂತೆ ಲಾಭಕ್ಕೆ ತತ್ವಾರ. ವ್ಯಾಜ್ಯ ಸ್ಪರ್ಧೆಗಳಲ್ಲಿ ತುಂಬ ವೆಚ್ಚವಾದರೂ ಕೊನೆಗೆ ನೀವೇ ಜಯಿಸುವಿರಿ. ಪತ್ರವ್ಯವಹಾರ ನಿಷ್ಫಲ. ಭೆಟ್ಟಿಯೂ ಪ್ರವಾಸವೂ ಅಡ್ಡಿಯಿಲ್ಲ. ಶತತಾರಕೆಗೆ ತೊಂದರೆ ಹೆಚ್ಚು ತಾ. ೧, ೩, ೫ ಅನುಕೂಲ.

ಮೀನ

ಅನೇಕ ವಾರಗಳಿಂದ ನೀವು ಅನುಭವಿಸುತ್ತ ಬಂದ ಸುಖಕ್ಕೆ ಈ ವಾರ ಸ್ವಲ್ಪ ಘಾತವುಂಟಾಗುತ್ತದೆ. ಆದರೆ ಕಾಲದ ಗತಿಯೇ ಹಾಗೆಂದು ನೀವು ಧೈರ್ಯ ತಾಳಿರಿ. ಪ್ರಕೃತಿ ಚೆನ್ನಾಗಿದ್ದರೇನಾಯಿತು, ನಾನಾ ಪ್ರಕಾರದ ಚಿಂತೆ-ಉಪದ್ರವಗಳಿಂದ ನಿಮ್ಮ ಮನಸ್ಸು ಉದ್ವಿಗ್ನವಾಗಬಹುದು. ಕೆಲ ಮಿತ್ರರಲ್ಲಿ ನಿರರ್ಥಕ ದ್ವೇಷಕ್ಕೀಳಯುವಿರಿ. ಉದ್ಯೋಗದಲ್ಲಿ ಪ್ರತಿಷ್ಠೆ ಮತ್ತು ಲಾಭ ಅಷ್ಟಕಷ್ಟೆ. ವೆಚ್ಚ ಮಾತ್ರ ಒಂದಕ್ಕೆರಡು. ವ್ಯಾಜ್ಯ ಸ್ಪರ್ಧೆಗಳಲ್ಲಿ ನಿಮಗೇ ಗೆಲವಾದರೂ ಅದರ ಪ್ರಯೋಜನ ಕೈಗೆ ಬಂದ ತುತ್ತು ಬಾಯಿಗೆ ಬಾರದಂತಾದೀತು. ಪ್ರವಾಸ ಹಿತವಲ್ಲ. ಭೆಟ್ಟಿ ಪತ್ರವ್ಯವಹಾರಕ್ಕೆ ಅಡ್ಡಿಯಿಲ್ಲ. ಉತ್ತರಾಭಾದ್ರೆಗೆ ತೊಂದರೆ ಕಡಿಮೆ. ತಾ. ೫, ೬, ೭ ಅನುಕೂಲ.

ಪ್ರಶ್ನೆ ಪೆಟ್ಟಿಗೆ

ವಿಶ್ವವಿದ್ಯಾಲಯ ಶಿಕ್ಷಣ

ಪ್ರಶ್ನೆ:– ಡ್ರಾಯವರ ಮತ್ತು ಕಂಡಕ್ಟರರ ೭೦೦ ಸ್ಥಳಗಳಿಗಾಗಿ ಪಶ್ಚಿಮ ಬಂಗಾಲ ಸರಕಾರದ ಸಂಪರ್ಕ ಶಾಖೆಯವರು ಪ್ರಕಟನೆ ಕೊಟ್ಟದ್ದರೆಂದು ಸುದ್ದಿ. ಸುಮಾರು ೫೦ ಸಾವಿರ ಉಮೇದ್ವಾರರು ಮನವಿ ಮಾಡಿಕೊಂಡಿದ್ದರಂತೆ. ಮನವಿ ಮಾಡಿಕೊಂಡವರಲ್ಲಿ ಅನೇಕರು ಪದವೀಧರರಾಗಿದ್ದರು. ಅವರಲ್ಲಿ ೪೯೭೦೦ ಜನರು ನಿರಾಶೆ ಹೊಂದುವದು ಸಹಜ? ಅವರಲ್ಲಿಯೂಅನೇಕರುಪದವೀಧರರಾಗಿರಬಹುದು ವಿಶ್ವವಿದ್ಯಾಲಯ ಶಿಕ್ಷಣದ ವಿಡಂಬನೆಯಲ್ಲವೆ ಇದು ?। ಇಂಥ ವಿಶ್ವವಿದ್ಯಾಲಯದ ಶಿಕ್ಷಣದ ಉಪಯೋಗವೇನು ? ನಾನೊಬ್ಬ ಕಾಲೇಜ ವಿದ್ಯಾರ್ಥಿ. ನನ್ನ ಶಿಕ್ಷಣವನ್ನು ನಾನು ಮುಂದೆ ಸಾಗಿಸಬಹುದೊ?

ಉತ್ತರ:– ಸದ್ಯಕ್ಕೆ ವಿಶ್ವವಿದ್ಯಾಲಯಗಳಲ್ಲಿ ಕೊಡುವ ಶಿಕ್ಷಣವು ಕಾಲೇಜುಗಳನ್ನು ತುಂಬುವ ಅನೇಕ ವಿದ್ಯಾರ್ಥಿಗಳಿಗೆ ಒಗ್ಗುವುದಿಲ್ಲೆಂಬುದು ನಿಶ್ಚಿತ. ಆದಕ್ಕಾಗಿ ಯಾವನೊಬ್ಬ ವಿದ್ಯಾರ್ಥಿ ಯೋಗ್ಯನಾಗಿರುವನೊ ಇಲ್ಲವೊ ಅದನ್ನು ನಾನು ಹೇಳಲಾರೆ. ಆದರೆ ವಿಶ್ವವಿದ್ಯಾಲಯ ಶಿಕ್ಷಣದ ಬಗ್ಗೆ ಇಟ್ಟುಕೊಂಡ ತಪ್ಪು ಕಲ್ಪನೆಯನ್ನುಮಾತ್ರ ನಾನು ಹೋಗಲಾಡಿಸಬಯಸುತ್ತೇನೆ. ಡ್ರಾಯವರ ಮತ್ತುಕಂಡಕ್ಟರರಷ್ಟೇ ಏಕೆ ಬೀದಿಗಳಲ್ಲಿ ಕಸಗುಡಿಸುವ ಕೆಲಸಕ್ಕಾಗಿ ಕೂಡ ಅರ್ಜಿ ಮಾಡಿಕೊಳ್ಳಲು ಪದವೀಧರರು ನಾಚುವುದೇಕೋ ನನಗೆ ತಿಳಿಯದು? ಎಷ್ಟೇ ಉಚ್ಚ ಶಿಕ್ಷಣವನ್ನು ಪಡೆದಿದ್ದರೂ ಪ್ರಾಮಾಣಿಕವಾದ ಯಾವದೊಂದು ಉದ್ಯೋಗವನ್ನು ಕೈಕೊಳ್ಳಲು ನಾಚಬೇಕಿಲ್ಲ. ಕಬೀರನು ನೇಕಾರನಾಗಿದ್ದನು, ನಾಮದೇವನು ಸಿಂಪಿಗನು, ರಾಯದಾಸನು ಸಮಗಾರನಾಗಿದ್ದನು. ಅವರೆಲ್ಲ ಒಳ್ಳೆ ಶ್ರೇಷ್ಠ ವಿಭೂತಿಗಳಾಗಿದ್ದರು. ಮಾಸ್ತರ ಮತ್ತು ಡಾಕ್ಟರರ ಪದವಿಗಳನ್ನು ಸ್ವೀಕರಿಸಬೇಕಾದರೆ ಪದವೀಧರರು ಅಭ್ಯಾಸ ಮಾಡಬೇಕಾಗುವದು. ವಿಶ್ವವಿದ್ಯಾಲಯದ ಪದವಿಗೆ ನಾವು ಪ್ರಾರಂಭದ ಸಂಬಳವಿಷ್ಟೆಂದು ಗೊತ್ತುಪಡಿಸಿ ಅವರೊಂದು ಬಗೆಯ ಜೀವನವನ್ನು ನಡೆಸಬೇಕೆಂದು ಸರ್ವ ಸಾಧಾರಣ ಗೊತ್ತುಪಡಿಸಿರುವದರಿಂದ, ಟ್ರಾಮಕಾರನ್ನು ನಡೆಸುವದಾಗಲಿ, ಮೋಟರನ್ನು ನಡೆಸುವದಾಗಲಿ ನಮ್ಮ ದರ್ಜೆಗೆ ತಕ್ಕುದಲ್ಲ ಎಂದು ಭಾವಿಸುತ್ತೇವೆ. ತಮ್ಮ ಸ್ವಂತ ಕಾರನ್ನು ನಡೆಸುವದು ನಾಚಿಕೆಗೇಡಾಗಿರದಿದ್ದರೆ, ತಮ್ಮ ಉಪಜೀವನಕ್ಕಾಗಿ ಎರಡನೆಯವರ ಕಾರನ್ನು ನಡೆಸುವಲ್ಲಿ ಯಾವದೇ ಬಗೆಯ ಅಪಮಾನವಿರಕೂಡದು.

ವರ್ಧಾ
೯—೭-೪೯ — ಕಿ. ಘ. ಮಶ್ರೂವಾಲಾ

(ಹರಿಜನ)

ಫ್ರೆಂಚ್ ಭಾರತದಿಂದ ಹೋದ ಪ್ರತಿನಿಧಿತ್ರಯಕ್ಕೂ ಫ್ರೆಂಚ್ ಪಾರ್ಲಿಮೆಂಟರಿ ಮುಖಂಡರಿಗೂ ನಡುವೆ ಪ್ಯಾರಿಸ್ಸಿನಲ್ಲಿ ನಡೆದ ೧೦ ದಿನಗಳ ಚರ್ಚೆಯ ಬಳಿಕ ಫ್ರೆಂಚ್ ಭಾರತದ ಇದಿ ಪ್ರಶ್ನೆ ಸ್ನೇಹದಿಂದ ಇತ್ಯರ್ಥವಾಗುವ ಪ್ರತ್ಯಾಶೆಯುಂಟಾಯಿತೆಂದು ಒಬ್ಬ ಫ್ರೆಂಚ್ ಭಾರತದ ಸಿನೇಟರನಿಂದ ತಿಳಿದು ಬಂದಿದೆ. ಪ್ರತಿನಿಧಿತ್ರಯ ಇನ್ನು ಹೊಸದಿಲ್ಲಿಗೆ ಹೋಗಿ ಮಾತುಕತೆ ನಡೆಸಲಿದೆ.

ಚಿತ್ರಮಂದಿರಗಳೂ ಜಾಹೀರಾತ ಎಜಂಟರೋ?

ಯಾವುದೊಂದು ಕಂಪನಿಯ ವಸ್ತುಗಳ ಪ್ರಸಿದ್ಧಿಗಾಗಿ ಸಿನೇಮಾ ಚಿತ್ರಗಳ ಉಪಯೋಗ ಮಾಡಲಾಗುತ್ತದೆ ಎಂಬದರ ಕಡೆಗೆ ಸುದ್ದಿಗಾರರೊಬ್ಬರು ನನ್ನ ಲಕ್ಷವನ್ನೆಳೆದಿದ್ದಾರೆ. ರವೀಂದ್ರ ಚಿತ್ರಾವಳಿ ಎಂಬ ಒಳ್ಳೆ ಆಡಂಬರದ ಹೆಸರನ್ನಿಟ್ಟುಕೊಂಡ ಚಿತ್ರಪಟವೊಂದನ್ನು ಅವನು ಇತ್ತೀಚೆ ನೋಡಿದನು. ಆದರೆ ಅದೊಂದು ವಿಶಿಷ್ಟ ಕಂಪನಿಯ ಸಿಗರೇಟುಗಳ ಸಂಚಾರೀ ಚಿತ್ರಪಟವಾಗಿದ್ದಿತು !

ನಮ್ಮ ರಾಷ್ಟ್ರದ ಪುನರುಜ್ಜೀವನವನ್ನು ನಿಜವಾಗಿ ನಾವು ಅಪೇಕ್ಷಿಸುತಿದ್ದರೆ ಕಲೆ ಮತ್ತು ಮನೋರಂಜನೆಯ ಮೇಲೆ ನಡೆದ ಈ ವ್ಯಭಿಚಾರವು ನಿಲ್ಲಲಿಕ್ಕೆ ಬೇಕು. ದುರ್ಗುಣ ಮತ್ತು ವಿಲಾಸಭೋಗಗಳಿಂದ ರಾಷ್ಟ್ರದ ಪುನರುಜ್ಜೀವನವು ಅಶಕ್ಯ.

ವರ್ಧಾ ಕಿ. ಘ. ಮ.
೧೩ ೭ ೪೯

(ಹರಿಜನ)

ಸಂ. ರಾ. ಸಂಘದ ಸಾಮಾಜಿಕ ಸಮಿತಿಯು ಸೋವಿಯೆಟ್ ರಶಿಯ ತಂದ 'ಭಾರತ ಮೊದಲಾದ ಕೆಲ ದೇಶಗಳಿನ್ನೂ ಕಾರ್ಯದಲ್ಲಿ ಸ್ತ್ರೀಯರಿಗೆ ಸಮಾನತೆಯನ್ನು ಕೊಟ್ಟಿಲ್ಲ' ಎಂಬ ಗೊತ್ತುವಳಿಯನ್ನು ಭಾರತ ಪ್ರತಿನಿಧಿ ಶ್ರೀಮತಿ ಅಮ್ಮು ಸ್ವಾಮಿನಾಥನ್ನರ ವಾದದ ಮೇರೆಗೆ ತಿರಸ್ಕರಿಸಿತು.

ಹೆಣ್ಣುಮಕ್ಕಳಿಗಾಗಿ

ಹೆಂಗಸರ ಆಟ

ಭಾರತೀಯತೆಯನ್ನು ಪ್ರಶಂಸಿಸುವ ಯಾವ ದೇಶ ಪ್ರೇಮಿ ಮಹಿಳೆಯಾದರೂ ಒಂದರಲ್ಲಿ ಮಾತ್ರ ಹಿಂದು ಮಹಿಳೆಯರ ನ್ಯೂನತೆಯನ್ನು ನಾಚಿಕೆಯಿಂದ ಹೇಳದಿರಲಾರಳು– ಅದರಲ್ಲೂ ನಾಗರಿಕಂಮನ್ಯ ಹಿಂದುಮಹಿಳೆಯರ ನ್ಯೂನತೆಯನ್ನು. ಹಳ್ಳಿಯ ಹೆಂಗಸರು ಆಡದಿದ್ದರೂ ಅವರದೇ ಆದ ಹಲಕೆಲ ವಿನೋದಗಳಿವೆ; ಅಲ್ಲದೆ, "ಮೈಕೈಬೀಸಾಡಿ, ಇಳಿಗೂದಲೀಸಾಡಿ" ಮಾಡತಕ್ಕ ಹಲವಾರು ಕೆಲಸಗಳಿರುವುದರಿಂದ ಅವುಗಳ ಮೂಲಕ ಅವರಿಗೆ ಸಾಕಷ್ಟು ವ್ಯಾಯಾಮವೂ "ಮೈಚಳಿ" ಹೋಗಿ ಚುರುಕುತನವೂ ಲಭ್ಯವಾಗುತ್ತದೆ. "ಆದರೆ ಸಿರಿ ಮಡಿತನಗಳ" ಆರಾಧಕರಾದ ಗೌರವಿತ ಲತಾಂಗಿಯರು, ಮಾನ್ಯ ಕೋಮಲೆಯರು ಪಾರ್ಸೆಲ್ ಅಥವಾ ಇಸ್ತ್ರಿ ಮಾಡಿದ ವಸ್ತ್ರಪಿಂಡದಂತೆ ಅಲ್ಲಾಡಿದರೂ ಈಸಿಬೀಸಿ ಆಡದೆ ಮಂದಗತಿ, ಮಂಥರ ಭಂಗಿಗಳಿಂದ ರಸಿಕರಂಜನೀಯರಾಗಿ ಬಾಳುವ ಬಗೆಯಿಂದ ತಮ್ಮ ಮದಾಲಸ್ಯವನ್ನು ಬೆಳೆಸಿಕೊಳ್ಳುತ್ತಿರುವರಲ್ಲದೆ, ಶಾರೀರಿಕ ಅಥವಾ ಬೌದ್ಧಿಕ ಬೆಳವಣಿಗೆಗೆ ಸಹಕಾರಿಯಾದ ಯಾವ ವಿನೋದ, ವ್ಯವಹಾರಗಳಲ್ಲೂ ಪ್ರವೇಶಿಸದಿರುವರು. ಭಾರತೀಯ ನಾಗರಿಕತೆಗೆ ಸ್ತ್ರೀವರ್ಗದಿಂದಾದ ಹಾನಿಗೆ ಇದು ಒಂದು ದೊಡ್ಡ ಕಾರಣವಾಗಿದೆ.

'ಕಳಹಂಸಾಲಸಯಾನೆ'

ಪಾಶ್ಚಾತ್ಯ ನಾಗರಿಕೆಯರಿಂದ ಭಾರತೀಯರು ಕಲಿತುಕೊಳ್ಳಬಹುದಾದ ಮುಖ್ಯ ಅಂಶವೆಂದರೆ, ಪ್ರಾಚೀನ ಕವಿಗಳ ವರ್ಣನೆಯಂತೆ "ಮರಾಳಿಕಾಗಮನೆ, ಹಂಸಗಮನೆ, ಗಜಗಮನೆ," ಇತ್ಯಾದಿ ಪದಗಳಿಂದ ಉಕ್ತವಾಗುವ ಅರ್ಥದಂತೆ ಶ್ರೋಣೀಭಾರ, ಸ್ತನಭಾರಗಳನ್ನು ಪ್ರದರ್ಶಿಸುವ ಮದಾಲಸೆಯರಾಗುವ ಆದರ್ಶವನ್ನು ಕಳೆದೊಗೆದು, ಗಂಡಸರಷ್ಟು ಹೆಚ್ಚಿನ ವ್ಯಾಯಾಮದ ಆಟಗಳಲ್ಲದಿದ್ದರೂ ತಂತಮ್ಮ ಶಕ್ತಿಗೆ ಒಗ್ಗುವಷ್ಟು, ಬೇಕಾಗುವಷ್ಟು ವ್ಯಾಯಾಮ ಸಿಗುವಂಥ ದೇಹ ಶ್ರಮದ ಆಟಗಳಲ್ಲಿ ಮಗ್ನರಾಗುವುದು. ಇದರಿಂದ ದೇಹಶಕ್ತಿ ಹೆಚ್ಚುವುದಲ್ಲದೆ ಮಾನಸಿಕವಾದ ಸಂಕುಚಿತತೆ, ಅತಿಲಜ್ಜೆ, ಗಂಡಸರೆದುರು ತೋರುವ ಅತಿಮೂಕತೆ, ಹಗರಣ, ಬಿನ್ನಾಣ ಇತ್ಯಾದಿ ಅನಾಗರಿಕ ನಡತೆಗಳು ದೂರವಾಗುತ್ತವೆ; ಸರಳತೆ, ಗಾಂಭೀರ್ಯ, ಸ್ಪಷ್ಟವಾದ ವಿಚಾರಸರಣಿಗಳು ಗಮ್ಯವಾಗುತ್ತವೆ; ಮೈಚುರುಕಾಗಿ, ಲಘುವಾಗಿ, ಸ್ವಾಭಾವಿಕ ಪ್ರಸನ್ನತೆಯುಂಟಾಗುವುದು; ಹೆಂಗಸುತನದ ಅತಿಪ್ರತ್ಯೇಕತಾಭಾವ, ಸಾಂದರ್ಭಿಕವಾದ ನೀಚತೆ ಉಚ್ಚತೆಗಳ ಶಂಕೆ ಮತ್ತು ಭಾವನೆಗಳು ಮಾಯವಾಗಿ ಮನುಷ್ಯತನದ ಧೀರತೆ ಅಳವಡುತ್ತದೆ.

ಚಟುವಟಿಕೆಯ ಉಡುಪು

ಹೀಗೆ ಕಾಲುಚೆಂಡು, ಕೈಚೆಂಡು ಮುಂತಾದ ಆಟಗಳಲ್ಲಿ ಬೆವರು ಸುರಿಸಿ, ಓಡಾಡಿ, ನೆಗೆದು ಚಿಮ್ಮಿ ಆಡಲು ಅನುಕೂಲವಾದ ಉಡುಪೆಂದರೆ ಪಾಶ್ಚಾತ್ಯ ಸ್ತ್ರೀಯರದ್ದೆಂದು "ಮುಂಬಯಿ ಕ್ರಾನಿಕಲ್ಲಿ" ನ ಲೀಲಾ ಅವರು ಬರೆಯುತ್ತಾರೆ. ಇದು ಸಮಂಜಸವಲ್ಲ. ಪಾಶ್ಚಾತ್ಯ ಸ್ತ್ರೀಯರ ಉಡುಪು ಗೌರವಸ್ಥೆಯರ ಉಡುಪೇ ಅಲ್ಲ. ಅದು ನೆಗೆದಾಡುವಾಗ ಮರ್ಮ ಪ್ರದೇಶಗಳನ್ನೂ ಅರ್ಧಾರ್ಧ ಪ್ರಕಟಪಡಿಸುವ ದುಷ್ಕಲಾಜನ್ಯವಾದ ವೇಷವಲ್ಲದೆ (ಉದಾ: ಲಂಗ ಅಥವಾ ಗೌನು ಮತ್ತು ಕಿರುಚಣ್ಣ) ಗಾಂಭೀರ್ಯ ಗೌರವಗಳನ್ನೂ ಸರಳತೆಯನ್ನೂ ಪ್ರದರ್ಶಿಸುವಂಥದಲ್ಲ. ಆಟದ ಕಾಲದಲ್ಲಿ ಗಂಡುಸ್ಕೌಟುಗಳಂತೆ ಉಡುಪು ಹಾಕಿಕೊಳ್ಳುವುದು ಸರ್ವಥಾಯೋಗ್ಯವಾಗುತ್ತದೆ. ದೇಹಶ್ರಮದ ಇತರ ಕೆಲಸ ಮಾಡುವಾಗಲೂ ನಿಕ್ಕರ್ ಮತ್ತು ಶರ್ಟುಗಳು ತುಂಬ ಅನುಕೂಲವಾಗಿರುತ್ತವೆ. ಗೌನು ಧರಿಸುವ ಕ್ರಾಂತಿಕಾರಕ ಬದಲಾವಣೆ ಮಾಡಲು ಹೋಗುವ ನಾಗರಿಕೆಯರ ದುರ್ಬುದ್ಧಿ ನಿಂದ್ಯವಾದಂತೆ ಮೇಲಿನ ಬದಲಾವಣೆ ಯಾರಿಂದಲೂ ನಿಂದ್ಯವಾಗದು; ಕೇವಲ ಹೊಸ ಬಗೆಯೆಂದು ಹಳೆಯ ಜನರು ಮೂಗುಮುರಿಯಬೇಕಲ್ಲದೆ ಅನೈತಿಕ, ಅಸಭ್ಯ ಎಂದು ಯಾವ ಭಾರತೀಯ ಸ್ತ್ರೀ ಅಥವಾ ಪುರುಷನೂ ಅದನ್ನು ತೆಗಳಲು ಸಾಧ್ಯವಿಲ್ಲ. ಮತ್ತು ಅದರಿಂದ ಗಂಡುಹುಡುಗರ ಸರಿಜೋಡಿ ನಿಷ್ಕಲಂಕ, ನಿಃಶಂಕ ಮನಸ್ಸಿನಿಂದ ಆಡಿ ಓಡಿ ಸರಳ ಮುಗ್ಧ ಆನಂದವನ್ನು ಪಡೆಯಲು ಕೂಡ ಹುಡುಗಿಯರಿಗೆ ಸಾಧ್ಯವಾಗುತ್ತದೆ. ಹಳ್ಳಿಯ ಸ್ತ್ರೀ ಪುರುಷರು ಹೇಗೆ ಸರಳ ಮುಗ್ಧತೆಯಿಂದ ಪರಸ್ಪರ ಭುಜಕ್ಕೆ ಭುಜಕೊಟ್ಟು ಸರ್ವ ಕಾರ್ಯವನ್ನೂ ಸರಿಸಮಾನತೆಯಿಂದ ಮಾಡಿ ಆನಂದಿಸುವರೋ ಹಾಗೇ ಆನಂದಿಸುವ ನಿರ್ವ್ಯಾಜ ರಮ್ಯ ಮನೋಧರ್ಮ ಪೇಟೆಯ ಹುಡುಗ ಹುಡುಗಿಯರಲ್ಲಿ ಬೆಳೆದು ಬರಲು ಇದು ಸಹಕಾರಿಯಾಗುತ್ತದೆ. ಪ್ರತಿಯೊಬ್ಬ ತಾಯಿಯೂ ಚಿಕ್ಕಂದಿನಿಂದ ತನ್ನ ಮಗ ಮತ್ತು ಮಗಳಿಗೆ ಹೀಗೆ "ಸಮಾನಶೀಲವ್ಯಸನ"ದ ನಿಯಮದಂತೆ ಸಮಾನ ವೇಷ ಭಾಷೆಗಳಿಂದ ಕೂಡಿ ಆಡುವುದನ್ನು ಕಲಿಸಿದರೆ ಜಗತ್ತಿನ ಸ್ತ್ರೀಸಮಸ್ಯೆಯ ಕೂಗು ನಿವಿಷಾರ್ಥದಲ್ಲಿ ಇಲ್ಲದಂತಾದೀತು.

— ಹಿರಿಯಕ್ಕ

× × ×

ಮದುವೆ ಮತ್ತು ನೌಕರಿ

ಹೆಣ್ಣು ಮದುವೆಯಾದ ಮೇಲೂ ನೌಕರಿ ಮಾಡುತ್ತಿರಬಹುದು ಮತ್ತು ಮದುವೆಗೂ ನೌಕರಿಗೂ ಎಳ್ಳಷ್ಟೂ ಸೀಗೆಯ ಸಂಬಂಧ ಎಂಬೆರಡು ವಾದಗಳ ಪುರಸ್ಕರ್ತರು ಇನ್ನೂ ಒಮ್ಮತಕ್ಕೆ ಬಂದಿಲ್ಲ. ಆದರೆ ನಾನು "ಹಿರಿಯಕ್ಕ" ಆ ವಿಷಯದಲ್ಲಿ ಹಿಂದೆ ಒಂದು ನಿರ್ಣಯವನ್ನು ಕೊಟ್ಟಿದ್ದರು ಅದೆಂದರೆ ಅರ್ಧವೇಳೆಯ ನೌಕರಿ ಅಥವಾ ಚಾಕರಿ. 'ಮುಂಬಯಿ ಕ್ರಾನಿಕಲ್ಲಿ'ನಲ್ಲಿ ಲೀಲಾ ಎಂಬಾಕೆ ಬರೆಯುತ್ತಾರೆ– ಮದುವೆಯಾದ ನೌಕರಿದಾರ್ತಿಯರಿಗೆ ಮನೆಗೆಲಸ ಹಗುರ ಮಾಡಿಕೊಡಲು ಸರಕಾರ ಏನಾದರೂ ಯೋಜನೆ ಮಾಡಿಕೊಡಬೇಕು ಎಂದು. ಏಕೆಂದರೆ, ಗಂಡು ಮನೆಗೆಲಸದಲ್ಲಿ ಭಾಗವಹಿಸಬೇಕೆಂದು ಪಾರ್ಲಿಮೆಂಟಿನಲ್ಲಿ ಕಾಯಿದೆ ಮಾಡುವುದು ಸಾಧ್ಯವಿಲ್ಲ, ಮಾಡಿದರೆ ಪ್ರಯೋಜನವಿಲ್ಲ ಎಂಬ ಕಾರಣವನ್ನು ಸ್ವಲ್ಪ ನಿರಾಶೆ ಬೆರೆದ ದನಿಯಿಂದ ಕೊಡುತ್ತಾರೆ ಅವರು.

ನೌಕರಿ ಸರ್ವಾರಾಧ್ಯವಲ್ಲ

ಲೀಲಾ ಅವರ ನಿರಾಶೆಗೂ ಅರ್ಥವಿಲ್ಲ, ಸಲಹೆಗೂ ಬೆಲೆಯಿಲ್ಲ. ಹಿಂದುಸ್ಥಾನದಲ್ಲಿ ವರ್ಗನಿಷ್ಪವಾದ ಬಂಡವಾಳಿಗ ವ್ಯವಸ್ಥೆಯಿರುವದು ಮತ್ತು ದೇಶದ ಅಭಿವೃದ್ಧಿಗೆ ಸ್ತ್ರೀಪುರುಷರಿಬ್ಬರ ಪೂರ್ಣ ಸಾಮರ್ಥ್ಯ ಬೇಕಾಗಿರುವುದು ಅವರ ಸೂಚನೆಗೆ ಅಡ್ಡವಾಗಿ ನಿಲ್ಲುತ್ತವೆ. ಒಂದನೆಯದಾಗಿ, ಗಂಡನ್ನು ಒತ್ತಾಯದಿಂದ ಮನೆಗೆಲಸಕ್ಕೆ ಹಚ್ಚುವುದು ಸಾಧ್ಯವಾಗುವುದೆಂದುಕೊಳ್ಳೋಣ. ಅದೆಂದೂ ಸಾಮಾನ್ಯ ನಿಯಮವಾಗಲಾರದು; ಕೇವಲ ಅಪವಾದವಾದೀತು. ಸಾಮಾನ್ಯರನ್ನು ದೃಷ್ಟಿಯಲ್ಲಿಟ್ಟು ಹೇಳುವ ತತ್ವ ಸರ್ವಸಾಮಾನ್ಯವಾದೀತಲ್ಲದೆ ವಿಶಿಷ್ಟ ಪರಿಸ್ಥಿತಿಗನ್ವಯಿಸಿ ಕಾಯದೆಮಾಡಲು ಬರದು. ಸಾಮಾನ್ಯ ಬಡಕುಟುಂಬಗಳ ಸಂಖ್ಯೆಯನ್ನು ಎಣಿಸಿದರೆ ಗಂಡಿನಿಂದಾಗುವ ಗಳಿಕೆ ಹೆಣ್ಣಿನಿಂದಾಗದು. ಗಂಡನ್ನು ಮನೆಗೆಲಸಕ್ಕಿಟ್ಟುಕೊಂಡರೆ ಕುಟುಂಬಕ್ಕೆ ನಷ್ಟವಾಗುವುದು; ದೇಶದ ಉತ್ಪಾದನ ಪರಿಮಾಣದಲ್ಲಿ ಯಾವ ಕಾಲಕ್ಕೂ ಯಾವ ವ್ಯವಸ್ಥೆಯಲ್ಲೂ ನಷ್ಟವೇ ಸೈ. ಅಲ್ಲದೆ ಸರಕಾರ ಎಲ್ಲ ಕುಟುಂಬಕ್ಕೂ ಗೃಹಕೃತ್ಯ ನಡೆಸುವ ಜವಾನರನ್ನೋ ದಾಸಿಯರನ್ನೋ ಕೊಟ್ಟು ಪೂರಯಿಸದು. ಒಂದು ವೇಳೆ ಪೂರಯಿಸಲು ಶಕ್ತವಾದರೂ ಜವಾನ ಮತ್ತು ದಾದಿಯರ ಗತಿ? ಅವರವಿದ್ಯೆ ಸಂಸ್ಕೃತಿ, ಜೀವನಮಟ್ಟ ಇವೆಲ್ಲ ಎತ್ತ ಸಾಗಬೇಕು? ಮೇಲು ಕೀಳೆಂಬ ಎರಡು ವರ್ಗ ಹಿಂದುಸ್ಥಾನದ ಆದರ್ಶಸಮಾಜದಲ್ಲಿ ಉಳಿಯಬೇಕೆ? ಇದು ಸರ್ವಥಾ ಸದಾದರ್ಶವಾಗದು. ಆದುದರಿಂದ ಲೀಲಾಬುದ್ಧಿಯ ಸೋದರಿಯರು ಸರ್ವದೇಶ ಸರ್ವಕಾಲಗಳಿಗನ್ವಯಿಸುವ ಸ್ತ್ರೀಯ ಆದರ್ಶ ಕಾರ್ಯಕ್ಷೇತ್ರವನ್ನು ದೇಶ, ಸಮಾಜ, ಮತ್ತು ಕುಟುಂಬಗಳ ಹಿತಾಹಿತಗಳನ್ನನುಲಕ್ಷಿಸಿ ಚಿಂತಿಸಬೇಕಲ್ಲದೆ, ಕೇವಲ ಯಾರೋ ಒಬ್ಬಿಬ್ಬ "ಕಲಿತ" ಹೆಂಗಸರ ನೌಕರಿಯ ಅನುಕೂಲತೆ ಅನನುಕೂಲತೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ವಿವೇಚಿಸಿದರೆ ಪರಿಣಾಮ ನೆಟ್ಟಗಾಗಲಿಕ್ಕಿಲ್ಲ.

ಕುಟುಂಬದ ವ್ಯವಸ್ಥಾಪಕತ್ವ

ಮತ್ತೊಂದು ವಿಷಯವನ್ನು ಗಮನಿಸುವುದವಶ್ಯ. ಮನೆಗೆಲಸವೇ ಒಂದು ನೌಕರಿ, ಮನೆಯೇ ಒಂದು ಕಚೇರಿ. ಅದಕ್ಕೆ ಕುಟುಂಬ ತನ್ನನ್ನು ವ್ಯವಸ್ಥಾಪಿಕೆಯನ್ನಾಗಿ ನಿಯಮಿಸಿದೆ ಎಂದು ತಿಳಿದರೆ ಕೆಲ ಸೋದರಿಯರ ನೌಕರಿಯ ಹಪಹಪಿಕೆ ಕಡಿಮೆಯಾಗಬಹುದು, ಮನೆ ಶಿಸ್ತಿನಿಂದ ಕಂಗೊಳಿಸಬಹುದು; ಕುಟುಂಬಗಳ ಸಂಸಾರೋನ್ನತಿಯ ಮೂಲಕ ಸಮಾಜ, ರಾಷ್ಟ್ರ ಏಳಿಗೆ ಹೊಂದಬಹುದು. ಕಚೇರಿಯಲ್ಲಿರುವಂತೆಯೋ ವೇಳಾಪತ್ರಿಕೆಯ ಮೇರೆಗೆ ಶಿಶು ಪಶು ಪತಿ ವೃದ್ಧಾದಿಗಳ ಅಶನ, ವಸನ, ಆರೋಗ್ಯ, ನೈರ್ಮಲ್ಯ, ವಿದ್ಯೆ, ಸಂಸಾರಗಳನ್ನು ರೂಪಿಸಲು ತಕ್ಕ ಶಿಕ್ಷಣವನ್ನು ಪಡೆದು ಶಿಸ್ತಿನಿಂದ ಮನೆಯ ಆಡಳಿತೆ ನೋಡಿಕೊಳ್ಳುವುದನ್ನು ಕಲಿತ ಸೋದರಿಯರಿಗೆ ಪತಿ ಪುತ್ರಾದಿಗಳೇ ಏಕೆ, ಇಡಿ ಸಮಾಜವೇ ಮರ್ಯಾದೆ ಕೊಡುವುದು, ಸ್ವಾತಂತ್ರ್ಯವನ್ನು ಕೊಡುವುದು, ಪ್ರಶಂಸಿಸುವುದು. ಅದಕ್ಕಿಂತ ಹೆಚ್ಚಿನ ಸಮಾಜಸೇವೆ, ರಾಷ್ಟ್ರಸೇವೆ ಇನ್ನೊಂದಿಲ್ಲ. ಈ ಮಾತನ್ನು ಅರಿಯದೆ ಗಳಹುವ ಸ್ತ್ರೀಪುರುಷರು ಸುಧಾರಕರಲ್ಲ, ದುರ್ಧಾರಕರೇ ಸರಿ. ಇದು ಕಾಯದೆಯಿಂದ ಲಭಿಸತಕ್ಕ ಸ್ತ್ರೀತ್ವವಲ್ಲ, ಯೋಗ್ಯತೆಯಿಂದ ಮಾತ್ರ. ಅದಕ್ಕಿಂತ ಚಿರಸ್ಥಾಯಿಯೂ ಸರ್ವಾರಾಧ್ಯವೂ ಆದ ವ್ಯಕ್ತಿತ್ವವುಂಟೇ? ಪೂಜ್ಯ ಗುಣಾಭಿವ್ಯಕ್ತಿಯುಂಟೆ? ಆದುದರಿಂದ ಪಾಕ, ಭೈಷಜ್ಯ, ಸಾಹಿತ್ಯ, ತರ್ಕಗಳ ಜ್ಞಾನ ಪ್ರತಿಯೊಬ್ಬ ನಿಜ ಸ್ತ್ರೀಗೂ ಅನಿವಾರ್ಯವೆಂದು ತಿಳಿದು ಅವುಗಳಲ್ಲಿ ಶಿಕ್ಷಣ ಪಡೆದರೆ ಒಳ್ಳೆಯ ಕಾಲ ಕೆಟ್ಟ ಕಾಲಗಳೆನ್ನದೆ ಸರ್ವಕಾಲದಲ್ಲೂ ಸ್ತ್ರೀಗೆ ಆ ಶಿಕ್ಷಣ ರಕ್ಷಕ, ಪೋಷಕ, ತಾರಕವೆನಿಸುತ್ತದೆ; ಸ್ವಾತಂತ್ರ್ಯ, ಸ್ವಾವಲಂಬನ, ಸ್ವಪರ ಹಿತಗಳನ್ನು ಸಾಧಿಸಿಕೊಡುತ್ತದೆ.

—ಸುಭದ್ರೆ

ಜನತಾ ವಿಜ್ಞಾನ

ಭಾರತದಲ್ಲಿ ಹೊಸ ಗೊಬ್ಬರಗಳ ಶೋಧ

ಅನ್ನಪೂರ್ಣಾ ಗೊಬ್ಬರ

ವಲ್ಲಭ ವಿದ್ಯಾನಗರ (ಆನಂದ-ಗುಜರಾಥ)ದ ಗ್ರಾಮೋದ್ಧಾರ ವಿಭಾಗದಲ್ಲಿ ಪರೀಕ್ಷೆಗೊಳಗಾದ "ಅನ್ನಪೂರ್ಣಾ ಗೊಬ್ಬರ" ವೆಂಬ ಅದ್ಭುತ– ಆದರೂ ಅತಿ ಸುಲಭ–ಗೊಬ್ಬರವನ್ನು ಕುರಿತು ಪ್ರಸಿದ್ಧ ಸಮಾಜವಾದಿ ಮುಂದಾಳಾದ ಇಂದುಲಾಲ ಯಾಜ್ಞಿಕರು "ಮುಂಬಯಿ ಕ್ರಾನಿಕಲ್" ಪತ್ರಿಕೆಯಲ್ಲಿ ಒಂದು ಪತ್ರಬರೆದಿದ್ದಾರೆ.

ಡಾ. ಪಿ. ಎಂ. ದೀಕ್ಷಿತರೆಂಬ ವಿಜ್ಞಾನಿಗಳು ಇದನ್ನು ಸಿದ್ಧಗೊಳಿಸಿದ್ದು, ವಿದ್ಯಾನಗರದಲ್ಲಿ ಮಾತ್ರವಲ್ಲದೆ ಅನೇಕ ಹಳ್ಳಿಗಳಲ್ಲಿಯೂ ಪ್ರಯೋಗಮಾಡಿ ಇದರ ಗುಣಗಳನ್ನು ಖಚಿತಪಡಿಸಿಕೊಳ್ಳಲಾಗಿದೆ. ಇದನ್ನು ದೇಶೀ ಸಾಮುಗ್ರಿಗಳಿಂದಲೇ ತಯಾರಿಸಲಾಗಿದೆ. ವಿದೇಶೀ ಮಾದರಿಯ ರಾಸಾಯನಿಕ ಗೊಬ್ಬರಗಳಲ್ಲಿರುವ ಅನೇಕ ದೋಷಗಳಿಂದ ಇದು ಸಂಪೂರ್ಣವಾಗಿ ಮುಕ್ತವಾಗಿದೆ.

ಅನ್ನಪೂರ್ಣಾ ಗೊಬ್ಬರ ಹಿಟ್ಟಿನಂತೆ ಇರುತ್ತದೆ. ಬಿತ್ತಬೇಕಾದ ಬೀಜದ ಕಾಲಂಶದಷ್ಟು ಈ ಹಿಟ್ಟನ್ನು ಹತ್ತುಪಟ್ಟು ನೀರಿನಲ್ಲಿ ಬೆರಸಿ ಬೀಜವನ್ನು ಅದರಲ್ಲಿ ನೆನೆಹಾಕಬೇಕು. ಹತ್ತು ತಾಸುಗಳಲ್ಲಿ ಬೀಜ ಈ ದ್ರವ್ಯದಲ್ಲಿ ಪೂರ್ಣ ನೆನೆದು ಸಾರವನ್ನು ಹೀರಿಕೊಳ್ಳುವುದು. ಆಮೇಲೆ ಬೀಜವನ್ನು ಹೊರದೆಗೆದು ಚನ್ನಾಗಿ ಒಣಗಿಸಿದರೆ ಬಿತ್ತನೆಗೆ ಅಣಿಯಾಗುತ್ತದೆ. ಬಿತ್ತುವದು ಸಾಮಾನ್ಯ ರೀತಿಯಲ್ಲಿಯೆ.

ಹೀಗೆ ಗೊಬ್ಬರವುಣಿಸಿದ ಬೀಜದ ಬೆಳವಣಿಗೆ ವಿಲಕ್ಷಣವಾಗಿ ಆಗುತ್ತದೆ. ಅದು ಬಹಳ ಬೇಗ ಮೊಳೆಯುವದು. ಬಲಿಷ್ಠವಾದ ಅಂಕುರದೊಡನೆ ತಲೆಯೆತ್ತಿ ದೃಢವಾದ ಎತ್ತರನ್ನ ಕಾಂಡ ಬೆಳೆಯುವದು. ಈ ಗೊಬ್ಬರವುಂಡ ಸೆಜ್ಜೆಯ ಬೀಜದಿಂದ ಹುಟ್ಟಿದ ಗಿಡ ೨೭ ಇಂಚಿನವರೆಗೂ ಬೆಳೆದುದನ್ನು ವಿದ್ಯಾನಗರದ ಹೊಲಗಳಲ್ಲಿ ಕಾಣಬಹುದು.

ಧಾನ್ಯಗಳಲ್ಲದೆ ಹತ್ತಿ ಮೊದಲಾದ ವ್ಯಾಪಾರಿ ಪೈರುಗಳಿಗೂ ಈ ಗೊಬ್ಬರವನ್ನು ಲಾಭಕರವಾಗಿ ಉಪಯೋಗಿಸಬಹುದು. ಒಬ್ಬ ರೈತನು ಈ ಗೊಬ್ಬರವುಂಡ ಬೀಜಹಾಕಿದ ಒಂದು ಎಕರೆ ಹೊಲದಲ್ಲಿ ೬೨ ದಿನಗಳಲ್ಲಿ ೩೫ ಮಣ ಸೆಜ್ಜೆಯನ್ನು ಪಡೆದನು. ಸಮೀಪದ ಇನ್ನೊಂದು ಹೊಲದಲ್ಲಿ ಸಾದಾ ಬೀಜ ಹಾಕಿದ್ದು ೯೦ ದಿನಗಳಲ್ಲಿ ೨೫ ಮಣ ಮಾತ್ರ ಧಾನ್ಯವನ್ನು ಕೊಟ್ಟಿತು. ಗೋದಿಗಂತೂ ಇದು ತುಂಬ ಉಪಕಾರಿ. "ಅನ್ನಪೂರ್ಣಿತ" ಬೀಜ ಹಾಕಿದ ಒಬ್ಬರೈತನಿಗೆ ೧೧೬ ದಿನಗಳಲ್ಲಿ ಎಕರೆಗೆ ೩೦ ಮಣ ಬೆಳೆ ಕೊಟ್ಟಿತು. ಸಾದಾ ಬೀಜದಿಂದ ಬಂದ ಗೋದಿ ಬರಿ ೫ ಮಣ.

ಈ ಉಪಯೋಗದ ಮಾನದಿಂದ ಇದರ ಬೆಲೆ ತೀರ ಕಡಿಮೆ–ಪೌಂಡಿಗೆ ಬರಿ ರೂ. ೩ ಎಕರೆ ಎರಡೆಕರೆಗೆ ಬೇಕಾಗುವಷ್ಟು ಗೊಬ್ಬರವನ್ನು ಚಿಕ್ಕ ಪುಡಿಕೆಯಲ್ಲಿ ತುಂಬಿಕೊಂಡು ಹೋಗಬಹುದು. ಮುಂಬಯಿ, ದಕ್ಷಿಣ, ಮದ್ರಾಸ, ವರ್‍ಹಾಡ ಮೊದಲಾದ ಪ್ರದೇಶಗಳಲ್ಲಿ ರೈತರು ಇದನ್ನು ಯಶಸ್ವಿಯಾಗಿ ಉಪಯೋಗಿಸಿರುವರಲ್ಲದೆ ಕಚ್ಚ, ಸೌರಾಷ್ಟ್ರ ಮೊದಲಾದ ಎಡೆಗಳ… ರೈತರು ಇದಕ್ಕೆ ಮುಗಿಬೀಳುತ್ತಿದ್ದಾರೆ. ಸಂ… ಸಂಪ್ರದಾಯಶರಣ ರೈತರನ್ನು ಒಲಿಸಿ… ಮಾಡುವದಕ್ಕಿಂತ ಹೆಚ್ಚಿನ ಗುಣಾನುವಾದ… ಬೇಕು?

ಕಬ್ಬಿನ ಗೊಬ್ಬರ

ಕಬ್ಬಿನ ಹೊಲಸಿನಿಂದ ಅಕ್ಕಿಂತ… ಯುಕ್ತವೂ ಸಾರವತ್ತೂ ಆದ ಗೊಬ್ಬ… ಹುಟ್ಟುತ್ತದೆಂದು ಅನೇಕ ವರ್ಷಗಳ ಪ್ರಯೋ… ಗದ ನಂತರ ಕಾನಪುರದ ಸಕ್ಕರೆಯ ತಾಂತ್ರಿ… ಸಂಸ್ಥೆಯ ವಿಜ್ಞಾನಿಗಳು ಕಂಡುಹಿ… ದಿದ್ದಾರೆ.

ಸಕ್ಕರೆಗಾಗಿ ಕಬ್ಬನ್ನು ಸುರಿಸುವಾಗ ಉಳಿ… ಯುವ ಕೆಸರು (Press mud) ಮತ್ತು… ಕಬ್ಬಿನ ದೇಟಿನ ಒಪ್ಪೆಯಂಥ ನಿರುಪಯುಕ್ತ… ವಸ್ತುಗಳಿಂದಲೇ ಈ ಗೊಬ್ಬರ ಸಿದ್ಧವಾಗು… ತ್ತದೆ. ಕಬ್ಬಿನ ರಸದ ಕೆಸರು ಮತ್ತು ಒಪ್ಪೆ… ಯನ್ನು ೧:೩ ಪ್ರಮಾಣದಲ್ಲಿ ಬೆರಸಿ ಸಾಮಾನ್ಯ… ವಾಗಿ ಗೊಬ್ಬರವನ್ನು ಕೊಳೆಯಹಾಕುವ ರೀ… ಯಲ್ಲಿಯೆ ಕೊಳೆಯಹಾಕಬೇಕು. … ತಿಂಗಳುಗಳ ಕಾಲದಲ್ಲಿ ಅದು ಉತ್ತಮ… ಗೊಬ್ಬರವಾಗುತ್ತದೆ. ಅದರಲ್ಲಿ ೧.೫ ಶತಾಂಶ… ಸಾರಜನಕವಲ್ಲದೆ ಪೊಟ್ಯಾಶ್ ಮತ್ತು… ಫಾಸ್ಪೇಟುಗಳೂ ಧಾರಾಳವಾಗಿರುವವೆಂದು… ವಿಜ್ಞಾನಿಗಳು ನಿರ್ಣಯಿಸಿದ್ದಾರೆ.

ದೇಶವನ್ನು ಆಹಾರ ವಿಷಯದಲ್ಲಿ ಸ್ವಾವ… ಲಂಬಿಯಾಗಿ ಮಾಡುವ ಸಲುವಾಗಿ ವಿದೇಶ… ಗಳಿಂದ ತುಂಬ ವೆಚ್ಚಮಾಡಿ ಗೊಬ್ಬರ ತರಿ… ಕೊಳ್ಳುತ್ತಿರುವ ನಮಗೆ ಈ ಹೊಸ ಶೋಧ… ದಿಂದ ಎಷ್ಟೋ ಲಾಭವುಂಟೆಂದು ತಂತ್ರಜ್ಞರು… ವಾದಿಸುತ್ತಾರೆ. ನಿಷ್ಪ್ರಯೋಜಕ ವಸ್ತುಗಳಿಂ… ದಲೇ ಹುಟ್ಟುವ ಈ ಗೊಬ್ಬರಕ್ಕೆ ಸಾರಜನಕದ… ಪ್ರತಿ ಪೌಂಡಿಗೆ ರೂ. ೩ ಕ್ಕಿಂತ ಹೆಚ್ಚು ವೆಚ್ಚ… ಬೀಳುವದಿಲ್ಲ.

ಈ ಗೊಬ್ಬರದಿಂದ ಇನ್ನೊಂದು ಅನುಕೂ… ಲತೆಯುಂಟು. ಸಕ್ಕರೆ ಕಾರಖಾನೆಗಳಲ್ಲೆ ಇದು… ತಯಾರಾಗುವದರಿಂದ ಇದನ್ನು ಹೊಲಗಳಿಗೆ… ಸಾಗಿಸುವ ವೆಚ್ಚವಾದರೂ ಅತ್ಯಲ್ಪವಾಗಿಯೆ… ಇರುವದು. ಕಬ್ಬನ್ನು ಕಾರಖಾನೆಗಳಿಗೆ ತರುವ… ಎತ್ತಿನ ಗಾಡಿಗಳಲ್ಲೆ ಇದನ್ನು ತಿರುಗಿ ಒಯ್ಯಲು… ಬರುತ್ತದೆ.

ಭಾರತದಲ್ಲಿ ವರ್ಷಕ್ಕೆ ೯೪ ಲಕ್ಷ ಮಣ… ಕಬ್ಬಿನ ಕೆಸರು ತಯಾರಾಗುತಿದೆ. ಇದರಿಂದ… ೧ ಕೋಟಿ ೩೦ ಲಕ್ಷ ಮಣ ಉತ್ತಮವೂ… ಅಗ್ಗವೂ ಆದ ಗೊಬ್ಬರ ದೊರಕಲು ಏನೂ… ಅಡ್ಡಿಯಿಲ್ಲ.

ಸುಧಾರಿಸಿದ ಗೋದಿ, ಜೋಳ

ಪೂರ್ವ ಪಂಜಾಬದ ಕೃಷಿ ಖಾತೆಯವರ ಸಂಶೋಧನಗಳ ಫಲವಾಗಿ ಸುಧಾರಿಸಿದ ಮಾದರಿಯ ಗೋದಿ ಮತ್ತು ಜೋಳದ ಬೀಜಗಳು ಸಿದ್ಧವಾಗಿವೆ. ಈ ಹೊಸ ಗೋದಿ ಬೀಜಗಳು ಸಾಮಾನ್ಯ ಮಾದರಿಗಿಂತ ಕಾಲಂಶ ಹೆಚ್ಚು ಫಲಕೊಡುವವಲ್ಲದೆ ಬೆಳೆಯೂ ಬೇಗನೆ ಬರುತ್ತದೆ. ಬೇಗನೆ ಬೆಳೆಯುವ ಈ ಗುಣದಿಂದ ಮಳೆಗಾಲಕ್ಕೆ ಮೊದಲೇ ಸುಗ್ಗಿ ಮಾಡಲನುಕೂಲವಾಗುವದು. ಸುಧಾರಿಸಿದ ಜೋಳದ ಬೀಜಗಳು ದೊಡ್ಡ ದೊಡ್ಡ ಕಾಳುಗಳನ್ನು ಬಿಡುವವಲ್ಲದೆ, ಹೆಚ್ಚು ಮೇವನ್ನೂ ಕೊಡುವವು. ಇವುಗಳನ್ನು ಭಾರತದ ಅನೇಕ ಪ್ರದೇಶಗಳಲ್ಲಿ ಪ್ರಯೋಗಿಸಿ ಅವುಗಳ ವ್ಯಾಪಾರಿ ವ್ಯವಹಾರ್ಯತೆಯನ್ನು ಖಚಿತಮಾಡಿಕೊಳ್ಳಲಾಗಿದೆ.

ಕಾಯಕದ ಹಿರಿಮೆ

ಆಧುನಿಕ ಅರ್ಥಶಾಸ್ತ್ರದಲ್ಲಿ "ಶ್ರಮ ವಿಭಜನೆ" ಎಂಬ ಮಾತು ಕೇಳಬರುತ್ತದೆ. ಪ್ರಾಚೀನ ಕಾಲದ ವರ್ಣ ವ್ಯವಸ್ಥೆಯೂ ಇದೇ ಮಾತನ್ನು ಹೇಳುತ್ತಿತ್ತು. ಆದರೆ ಕೆಲವರು ದೈಹಿಕ ಶ್ರಮದಿಂದ ದೂರವಾಗಿ ಮುಕ್ತರಾಗಿರಬೇಕೆಂದು ಇದರ ಅರ್ಥವಲ್ಲ. ಪ್ರತಿಯೊಬ್ಬನೂ ತಂತಮ್ಮ ಕರ್ತವ್ಯಕ್ಕನುಸಾರವಾಗಿ ಸಮಾಜಕ್ಕೆ ತಂತಮ್ಮ ಪಾಲಿನ ಸೇವೆಯನ್ನು ಸಲ್ಲಿಸಬೇಕೆಂದು ಇದರ ಅಭಿಪ್ರಾಯವಾಗಿತ್ತು. ಅವರು ತನ್ನದೇ ರೀತಿಯಲ್ಲಿ ಉಚ್ಚ ನೀಚ ಕಾರ್ಯದಲ್ಲಿ ನಿರತನಾಗಿದ್ದರೂ ಸರ್ವಸಾಮಾನ್ಯವಾದ ಕೆಲ ಹೊಣೆಗಳನ್ನು ಯಾವನೂ ಉಪೇಕ್ಷಿಸಕೂಡದು. ಬ್ರಾಹ್ಮಣರು, ಕ್ಷತ್ರಿಯರು, ನ್ಯಾಯಾಧೀಶರೇ ಮೊದಲಾದ ಎಲ್ಲರಿಗೂ ಸಮಾಜದಲ್ಲಿ ಅವರದೇ ಸ್ಥಾನಗಳಿದ್ದರೂ ನಾಳೆ ಬೇರೆ ಬಾಬುಗಳು ಬೇರೆ ಪ್ರತಿಯೊಬ್ಬನಿಗೂ ಅವಶ್ಯವಾಗಿವೆಯೋ ಹಾಗೆಯೇ ಬೌದ್ಧಿಕ ಮತ್ತು ದೈಹಿಕ ಶ್ರಮಗಳೂ ಪ್ರತಿಯೊಬ್ಬನಿಗೆ ಅತ್ಯವಶ್ಯವಾಗಿಯೆ ಇವೆ. ಕೆಲವರು ದೈಹಿಕ ಶ್ರಮವನ್ನಷ್ಟೇ ಮಾಡಲಿ, ಉಳಿದವರು ಬುದ್ಧಿಯಿಂದಷ್ಟೆ ದುಡಿಯಲಿ ಎನ್ನುವುದು ಸಮಂಜಸವೆನಿಸದು. ಕ್ಷೇಮೋತ್ಪನ್ನವಾದ ಚತುರ್ವರ್ಣಗಳೊಡನೆ ಬೇರೊಂದನ್ನು ಸೇರಿಸಿ "ಪಂಚ ಕೃಷ್ಟೀ" (ಐದು ಕೆಲಸಗಾರರು) ಎಂದು ಉಲ್ಲೇಖಿಸಲಾಗಿತ್ತು. ಕೃಷ್ಟಿಯೆಂದರೆ ದುಡಿಯುವವ. ಒಬ್ಬನು ಒಂದು ಬಗೆಯ ಕೆಲಸವನ್ನೇ ಇನ್ನೊಂದು ಬಗೆಯದಕ್ಕಿಂತ ಹೆಚ್ಚಾಗಿ ಮಾಡುತ್ತಿರಬಹುದು. ಆದರೆ ಪ್ರತಿಯೊಬ್ಬನೂ ಏನಾದರೊಂದು ಕಾಯಕವನ್ನು ಮಾಡಲೇಬೇಕು. ನಾವು ಈ ತತ್ವವನ್ನು ಮರೆತರೆ, ಸಮಾಜ ನಾಶವಾಗಿ ಹೋಗುವುದಲ್ಲದೆ ಉಚ್ಚನೀಚ ಭೇದವೂ ಹುಟ್ಟಿಕೊಳ್ಳುತ್ತದೆ. ಈ ಭೇದ ಭಾರತಕ್ಕೆ ಮಾತ್ರ ಮೀಸಲಾಗಿದೆಯೆಂದಲ್ಲ; ಅದು ಜಗತ್ತಿನಲ್ಲೆಲ್ಲ ಕಾಣಸಿಗುತ್ತದೆ. ಆದರೆ ಭಾರತದಲ್ಲಿ ಜೀವನದ ಇತರ ವಿಷಯಗಳಲ್ಲಾದಂತೆ ಇದಕ್ಕೂ ಒಂದು ಧಾರ್ಮಿಕ ಮುದ್ರೆ ಬಿದ್ದಿದೆ. ಭಂಗಿಯಾದವನು ಹೊಲಸು ಬಳಿಯುವ ಕೆಲಸವನ್ನು ಮಾತ್ರ ಮಾಡಬೇಕು; ಉಳಿದವರಾರೂ ಅದನ್ನು ಮಾಡಲೊಲ್ಲರು. ಅವನು ಕೀಳನೆಂದೂ ಅಸ್ಪೃಶ್ಯನೆಂದೂ ಹೇಳಿರುವ ಕಾರಣ ಅವನು ಬೇರಾವ ಕೆಲಸವನ್ನೂ ಮಾಡುವಂತಿಲ್ಲ. ಇದು ಗುಲಾಮಗಿರಿ; ಇದು ಸಮದರ್ಶಿತ್ವವಲ್ಲ, ಹೀನತೆ. ಅದು ಸಮಾಜಕ್ಕೆ ಬಹಳ ಹಾನಿಯನ್ನುಂಟುಮಾಡಿದೆ.

ಈ ಅಸಾಮಂಜಸ್ಯವನ್ನು ಕೊನೆಗಾಣಿಸದ ಹೊರತು ಸರ್ವೋದಯವನ್ನು ಸಾಧಿಸಲಾರೆವು. ಯಾವ ಕಾಯಕವೂ ಮೇಲಲ್ಲ, ಯಾವುದೂ ಕೀಳಲ್ಲ. ಪ್ರತಿಫಲವೂ ಸಮಾನವಾಗಿಯೆ ಇರತಕ್ಕದ್ದು. ನ್ಯಾಯವಾದ ಸಾಮಾಜಿಕ ಪದ್ಧತಿಯಲ್ಲಿ ಬ್ರಾಹ್ಮಣನ ವೇತನಕ್ಕೂ ಬಡಗಿಯ ಕೂಲಿಗೂ ಬಹಳ ಹೆಚ್ಚುಕಡಿಮೆಯಿರಲಾರದು. ಪ್ರಾಚೀನ ಕಾಲದಲ್ಲಿ ಅಂಥ ಹೆಚ್ಚುಕಡಿಮೆಗಳಿರಲೂ ಇಲ್ಲ. ಆ ಕಾಲದಲ್ಲಿ ಗುರುವಿಗೆ ಸಮಾಜದವರು ಕೊಡುತ್ತಿದ್ದ ಕಾಣಿಕೆ ಉಂಬಳಿಗಳಿಂದಲೇ ಅವನು ಸಂತುಷ್ಟನಾಗಿರುತ್ತಿದ್ದನು. ಅವನು ತ್ಯಾಗಸಂಪನ್ನನಾಗಿದ್ದು ತ್ಯಾಗಿಯಾಗಿರುತ್ತಿದ್ದನು. ಏನಿಲ್ಲೆಂದರೂ ಇದು ಅಂದಿನ ಧ್ಯೇಯವಾಗಿತ್ತು- ಎಂದಾದರೂ ಪೂರ್ತಿಯಾಗಿ ಆ ಗುರಿಯನ್ನು ಮುಟ್ಟುವುದಾಗಿತ್ತೋ ಇಲ್ಲವೋ ಆ ಮಾತು ಬೇರೆ.

ಆದರೆ ಇಂದಿನ ಜೀವನದ ರೀತಿಯೆ ವಿಪರೀತ. ಬ್ರಾಹ್ಮಣನು ದುಡಿಯುತ್ತಿರುವ ದಿನಕ್ಕೆ ಮೂರೇ ತಾಸಾದರೂ ವರ್ಷಕ್ಕೆ ಆರೇ ತಿಂಗಳಾದರೂ ಅವನಿಗೆ ಇಡಿ ವರ್ಷದ ಪಗಾರ- ಅದೂ ಸಾಮಾನ್ಯ ದುಡಿಮೆಗಾರರಿಗೆ ದೊರೆಯುವುದಕ್ಕಿಂತ ಎಷ್ಟೋ ಹೆಚ್ಚಿನ ದರದಲ್ಲಿ- ದೊರೆಯುತ್ತದೆ. ಹೀಗೆ ಹೇಳುವಲ್ಲಿ ಯಾರನ್ನಾದರೂ ಹಳಿಯಬೇಕೆಂಬ ಇಚ್ಛೆ ನನಗಿಲ್ಲ; ಏಕೆಂದರೆ ನಾನು ಬ್ರಾಹ್ಮಣನಾಗಿ ಹುಟ್ಟಿದಂತೆ ಕೂಲಿಯವನಾಗಿಯೂ ಕೆಲಸ ಮಾಡಿದವನು ಮತ್ತು ಭಂಗಿಯ ಕೆಲಸವೂ ಬ್ರಾಹ್ಮಣನದರಷ್ಟೇ ಪವಿತ್ರವೆಂದು ನನ್ನ ಗಟ್ಟಿ ನಂಬಿಕೆ. [illegible] ಅವರಿಬ್ಬರ ಅಂತಸ್ತುಗಳಲ್ಲಿಯೂ ಗಳಿಕೆ [illegible] ಇಷ್ಟೊಂದು ಅಂತರವಿರುವುದು ಸಮರ್ಥನೀಯವಲ್ಲ. ಒಬ್ಬನು ಹೆಚ್ಚು ಕಲಿತವನಾದ್ದಕ್ಕೆ ಹೆಚ್ಚು ಹಣ ಬೇಡುತ್ತಾನೆ. ತನ್ನ ಶಿಕ್ಷಣದಿಂದ ತನಗೇ ಆನಂದವಾಗದ ಅವನು ಸಾಮಾನ್ಯ ಜನರಿಗೆ ಅದರ ಆನಂದವನ್ನು ಹೇಗೆ ತಾನೆ ಉಣಿಸಿಯಾನು? ಹೆಚ್ಚು ಹಣ ತೆರಬಾರದ ಬಡ ಜನರ ಸೇವಕ ನಾನೆಂದು ಅವನು ಮರೆತೇ ಬಿಡುತ್ತಾನೆ.

ಇಲ್ಲಿ ನನಗೆ ಬಂಗಾಲಿ ಹಾಡೊಂದು ನೆನಪಾಗುತ್ತಿದೆ. "ಪರಮಾತ್ಮನ ಹಾದರೇಕಾ ಬಿಟ್ಟು ಕಳೆಯ ಬೇಡ ಮೇಲೇರಬೇಕೆಂದಿದ್ದರೆ ಬಡವರ ಬಳಿ ಬಡವನಾಗಿ ಬಾಗಿ ನಡೆ" ಎಂಬುದು ಆ ಹಾಡಿನ ಭಾವ. "ಏಕೆಂದರೆ ಅವನ ಪಾದ ಕೂಡಿರುವುದು ಅಲ್ಲಿ." ಆದರೆ ವಿದ್ವಾಂಸರು ಯಾವ ಗ್ರಂಥವನ್ನೂ ಮಾಡದ ಶ್ರೀಮಂತರನ್ನೇ ಸೇವಿಸುತ್ತಾರೆ. ಎಲ್ಲವನ್ನೂ ಉತ್ಪಾದಿಸುವ ಬಡ ಜನರೆ ಅಜ್ಞಾನಿಯಾಗಿಯೆ ಉಳಿಯಬೇಕು. ಆದರೆ ಅಜ್ಞಾನದಿಂದ ಉತ್ಪಾದನೆಯಲ್ಲಿ ಕೌಶಲವಿಲ್ಲದಾಗುತ್ತದೆ, ಅದರಿಂದ ಉತ್ಪಾದನೆ ಕುಗ್ಗುತ್ತದೆ. ಆದುದರಿಂದ ಸಾಮಾನ್ಯ ಜನರು ಕೆಳಕೆಳಗೇ ಇಳಿಯುತ್ತ ಬಂದಿದ್ದಾರೆ; ಸುಧಾರಣೆಯೆಂಬುದೇ ಇಲ್ಲದಾಗಿದೆ. ಜನತೆಯೇ ಸಮಾಜದ ತಳಹದಿ; ಆ ತಳಹದಿಯೇ ಭದ್ರವಾಗಿಲ್ಲದಿರುವಾಗ ಮೇಲೆ ನಿಂತ ಸಮಾಜ ಬಹಳ ಕಾಲ ತಾಳಲಾರದು. ದೇವರು ನಮ್ಮ ಮುಂದೆ ಈ ಜನತೆಯ ರೂಪದಲ್ಲೇ ನಿಂತಿದ್ದಾನೆ-ಅವನನ್ನು ನಾವು ಜನತೆಯ ಮೂಲಕ ಆರಾಧಿಸಲು ಅನುವಾಗಲಿ, ಎಂದು.

ಉಚ್ಚನೀಚಭಾವಗಳ ಭೇದ ಮಾಯವಾಗಬೇಕು. ಪ್ರತಿಯೊಂದು ವ್ಯಕ್ತಿಯೂ ಉಪಯೋಗಕ್ಕೆ ಬರುವ ಯಾವುದಾದರೊಂದು ಸಾಮಾನನ್ನು ಉತ್ಪಾದಿಸಬೇಕು. ಸ್ವಲ್ಪ ದೇಹ ಶ್ರಮದ ಕೆಲಸ ಮಾಡಿದರೆ ಸಾಕು- ಆಗ ನಮಗೆ ದುಡಿತಗಾರರೊಡನೆ ತಾದಾತ್ಮ್ಯ ಹೊಂದಲು ಶಕ್ಯವಾಗುವುದು ಮತ್ತು ಅವರ ತೊಂದರೆ ತಾಪತ್ರಯಗಳನ್ನು ಅರಿತುಕೊಳ್ಳಲು ಸಾಧ್ಯವಾಗುವುದು. ಇಂದು ಎಲ್ಲೆಲ್ಲೂ ನರಳಾಟ ತುಂಬಿ ಹೋಗಿದೆ. ಕೆಲ ತಿಂಗಳ ಹಿಂದೆ ನಾನು ಭಿಲ್ಲರ ಗುಡಿಸಿಲುಗಳಿಗೆ ಹೋಗಿದ್ದೆ. ಅಂದು ದೀಪಾವಳಿಯಾಗಿತ್ತು. ಅಲ್ಲಿಂದ ೩-೪ ಮೈಲುಗಳೊಳಗೇ ಒಂದು ನಗರವಿದೆ. ಅಲ್ಲಿ ದೀಪಾವಳಿಯ ಉತ್ಸವ ಆಚರಿಸಲ್ಪಡುತ್ತಿತ್ತು. ಆದರೆ ಆ ವೇಳೆಗೆ ಭಿಲ್ಲರ ಗುಡಿಸಿಲುಗಳಲ್ಲಿ ಅರ್ಧಸೇರು ಕಾಳು ಕೂಡ ಇದ್ದಿಲ್ಲ. ಈ ವಿಷಮತೆಗಳೂ ಗೋಳೂ ಇನ್ನು ನಿಲ್ಲಬೇಕು.

ಮೇಲ್ತನ ಕೀಳ್ತನಗಳನ್ನೆಣಿಸುವ ಭೇದ ಬುದ್ಧಿ ನಮ್ಮಲ್ಲಿ ಬಹಳ ಆಳವಾಗಿ ಬೇರು ಬಿಟ್ಟಿದೆ. ಭಂಗಿಯನ್ನು ಸಂಪೂರ್ಣವಾಗಿ ಅಲಕ್ಷಿಸಿ ಬಿಟ್ಟಿದ್ದೇವೆ ಅವನೊಬ್ಬ ಮನುಷ್ಯನೆಂದಾದರೂ ನಾವು ತಿಳಿಯುತ್ತೇವೆಯೋ ಇಲ್ಲವೋ ಎಂಬುದೇ ಗೊತ್ತಿಲ್ಲ. ಆದರೆ ಅವನು ಮನುಷ್ಯನಾಗಿ ಉಳಿಯದಿರಲಾರ; ನಮ್ಮ ನಡತೆಯ ಫಲವಾಗಿ ನಾವು ಮಾತ್ರ ಮನುಷ್ಯರಾಗಿ ಉಳಿದಿರಲಿಲ್ಲ. ಎಷ್ಟು ಕಷ್ಟ ಪಟ್ಟುಕೊಂಡು ಅವನು ಕೆಲಸಮಾಡಬೇಕಾಗಿದೆ ಎಂಬುದನ್ನು ನಾವು ತಿಳಿದುಕೊಳ್ಳುವುದಿಲ್ಲ. ಚಮ್ಮಾರನನ್ನು ನಾವು ಕೀಳೆನ್ನುತ್ತೇವೆ; ಆದರೆ ಅವನು ಮಾಡಿಕೊಟ್ಟ ಚಕ್ಕಡ (ಕೆರ, ಮೆಟ್ಟು) ಗಳನ್ನು ಹಾಕಿಕೊಂಬವನನ್ನು ಮೇಲೆನ್ನುತ್ತೇವೆ! ಅದೇ ಮೇರೆಗೆ ಪಾಯಖಾನೆಯಲ್ಲಿ ಕುಳಿತುಕೊಳ್ಳುವವರು ಶ್ರೇಷ್ಠರು, ಆದರೆ ಅದನ್ನು ತೊಳೆಯುವವರು ಕನಿಷ್ಠರು! ಹಾಗೆಯೇ ಬೆಳೆಯುವವನು ಕನಿಷ್ಠ, ಬೆಳೆದದ್ದನ್ನು ಉಣ್ಣುವವನು ಶ್ರೇಷ್ಠ! ಕೈಯಿಂದ ಕೆಲಸ ಮಾಡುವ ನಮ್ಮ ಹೆಂಗಸರೂ ಕೀಳೇ-ಅಂದರೆ ಕೈಯಿಂದ ಕೆಲಸ ಮಾಡುವವರನ್ನೆಲ್ಲ ಕೀಳೆನ್ನಬೇಕೇನು? ಗಂಡಸು ಹೆಂಗಸನ್ನು ಕೀಳೆನ್ನುತ್ತಾನೆ, ಬ್ರಾಹ್ಮಣನು ಭಂಗಿಯನ್ನು ಕೀಳೆನ್ನುತ್ತಾನೆ, ನಗರವಾಸಿ ಗ್ರಾಮವಾಸಿಯನ್ನು ಕೆಳಗಿನವನೆನ್ನುತ್ತಾನೆ. ಈ ಭಾವನೆ ಹಾಗೇ ಉಳಿದರೆ ನಮ್ಮ ನಾಶ ನಿಶ್ಚಿತ. ಇಡೀ ಸಮಾಜವೇ ದೇವರ ವ್ಯಕ್ತಸ್ವರೂಪವೆಂದು ತಿಳಿದರೆ, ಅಂಥ ಮೇಲ್ಮೆ ಕೀಳ್ಮೆಗಳ ಕಲ್ಪನೆಗಳನ್ನು ನಾವು ಇಟ್ಟುಕೊಳ್ಳಬಾರದು. ಬಡವರ ಸೇವೆಯಲ್ಲೇ ನಮ್ಮ ಎಲ್ಲ ಶಕ್ತಿಯೂ ವ್ಯಯವಾಗಬೇಕು.

ನಾನು ಮೇಲೆ ಹೇಳಿದ್ದು ಹಿಂದಿನ ಕಾಲದ್ದಲ್ಲ, ನಮ್ಮ ಕಾಲದ ಮಾತೇ ಆಗಿದೆ. ಅಂದರೆ ಹಿಂದೆ ಪರಿಸ್ಥಿತಿ ಬೇರೆಯಾಗಿತ್ತೆಂದು ಅದರ ಅರ್ಥವಲ್ಲ. ಅರ್ಥಪದ್ಧತಿಯೇನೋ ಸ್ವಲ್ಪ ಮಟ್ಟಿಗೆ ಬೇರೆಯಾಗಿತ್ತು, ಶೋಷಣೆ ಇಂದಿನ ಯಂತ್ರಯುಗದಷ್ಟು ಸುಲಭವಾಗಿರಲಿಲ್ಲ ಆಗಲೂ ತೊಂದರೆಗಳಿದ್ದವು. ಆದರೆ ಇಂದಿನ ಕ್ರಮದಲ್ಲಿ ಕೆಲವರು ಶೋಷಣಾವ್ಯಾಪಾರಕ್ಕೆ ಕೈಯಿಕ್ಕಿದ್ದಾರೆ. ಇಂದಿನ ಬೇಡಿಕೆ "ಸಮರಾಜ್ಯ"ದ್ದು (ಶಾಂತಿ ಸಾಮ್ಯಗಳ ರಾಜ್ಯ). ಇದು ಬಿಹಾರದ ಗವರ್ನರರಾದ ಶ್ರೀ ಎಂ. ಎಸ್. ಅಣೆಯವರು ಪ್ರತಿವರ್ಷ ಯುಗಾದಿ ಹಬ್ಬದ [illegible] ಪತ್ರಗಳಲ್ಲಿ ಬಂದ ಶಬ್ದ. ನನಗೆ ಈ ಶಬ್ದ ಬಹಳ ಇಷ್ಟವಾದದ್ದು; ಆದರೆ ನಾನು "ಸಮರಾಜ್ಯ", "ರಾಮರಾಜ್ಯ" ಮತ್ತು "ಧರ್ಮರಾಜ್ಯ"ಗಳಲ್ಲಿ ಭೇದವನ್ನೆಣಿಸುವುದಿಲ್ಲ. ಶ್ರೀ ಅಣೆಯವರಾದರೂ ಇದೇ ಮೇರೆಗೆ ಅವುಗಳಲ್ಲಿ ಭೇದವನ್ನು ಗ್ರಹಿಸುವುದಿಲ್ಲ. ರಾವಣನನ್ನು ಗೆದ್ದು ರಾಮರಾಜ್ಯವನ್ನೂ ಕೌರವನನ್ನು ಗೆದ್ದು ಧರ್ಮರಾಜ್ಯವನ್ನೂ ಸ್ಥಾಪಿಸಿದಂತೆ ಈ ವಿರೋಧಿ (ಎದುರಾಳು) ಎಂಬ ಹೊಸ ವರ್ಷದಲ್ಲಿ ನಾವು ಸರ್ವ ಶೋಷಣ ಶಕ್ತಿಗಳನ್ನೂ ಎದುರಿಸಿ ಗೆದ್ದು ಬಳಿಕ ಸಮರಾಜ್ಯವನ್ನು ಸ್ಥಾಪಿಸಬೇಕು.

ನಮ್ಮ ಹೃದಯವನ್ನು ತುಂಬಿರುವ ವಿಷಮತೆಯ ಭಾವನೆಗಳನ್ನು ಎದುರಿಸಿ ಅವನ್ನು ಅಲ್ಲಿಂದ ಹೊರದೂಡಬೇಕು. ಪ್ರತಿಯೊಂದು ವ್ಯಕ್ತಿಯನ್ನೂ ನಾವು ನಮ್ಮ ಸಮಾನಸ್ಕಂಧರಂತೆ ನಡೆಸಿಕೊಳ್ಳಬೇಕು. ನಾವು ಸ್ವಲ್ಪ ಕಾಯಕವನ್ನು ಮಾಡಿದರೆ ನಮ್ಮಲ್ಲಿರುವ ಉಚ್ಚ ನೀಚ ಭಾವನೆ ಮಾಯವಾಗಿ ಬಿಡುತ್ತದೆ. "ಸರ್ವೋದಯ"ದಲ್ಲಿ ಗಂಡಸು, ಹೆಂಗಸು, ಕೂಲಿಕಾರ, ಒಡೆಯ, ಹಳ್ಳಿಗ ಮತ್ತು ನಗರಸ್ಥ ಇವರೆಲ್ಲರೂ ಸರಿಸಮಾನರು. ಆದುದರಿಂದ ಈ ಸರ್ವೋದಯದ ಭಾವವನ್ನು ಮನನ ಮಾಡಬೇಕೆಂದು ನಾನು ವಿಶೇಷವಾಗಿ ತರುಣ ತರುಣಿಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

(ಶ್ರೀ ವಿನೋಬಾ ಭಾವೆಯವರು ೩೧-೩-೪೯ ರಲ್ಲಿ ಹೈದರಾಬಾದಿನಲ್ಲಿ ಮಾಡಿದ ಪ್ರಾರ್ಥನೋತ್ತರ ಭಾಷಣದ ಸಾರ)

ತಪ್ಪು ತಿಳುವಳಿಕೆ

(೧೩ ನೆಯ ಪುಟದಿಂದ)

ಬಾಬು ಪಕ್ಷದ ಮತ್ತೊಬ್ಬ ಹೆಣ್ಣುಮಗಳಾಗಿರಲಿ ಯಾರೇ ಆದರೂ ಹೆಣ್ಣುಮಕ್ಕಳ ಮೇಲೆ ಯಾವ ಸಜ್ಜನನೂ ಕೈಯೆತ್ತಕೂಡದು.

ನನ್ನ ಈ ಕೆಳಗಿನ ಹೇಳಿಕೆಯ ಬಗ್ಗೆ ವಿಶೇಷವಾಗಿ ಆಕ್ಷೇಪತೆಗೆದುಕೊಳ್ಳಲಾಗುತ್ತದೆ "ಇದಾವ ಬಗೆಯ ಸಂಸ್ಕೃತಿಯೆಂದು ನಾನು ತಿಳಿಯಬೇಕು? ಇದೇನು ಭಾರತದ ಸಂಸ್ಕೃತಿಯೊ, ಬಂಗಾಲದ್ದೋ, ಇಟಾಲಿಯದ್ದೋ, ಜರ್ಮನಿಯದ್ದೋ ರಶಿಯದ್ದೋ, ಪ್ರಾಚೀನವೊ ಅಥವಾ ಅರ್ವಾಚೀನವೊ?" ಬಂಗಾಲೀ ಸಂಸ್ಕೃತಿಯ ಅಪಮಾನವಿದೆಂದು ಭಾವಿಸಲಾಗುತ್ತದೆ. ಆ ವಾಕ್ಯ ಸರಣಿಯನ್ನು ನೋಡಿದರೇ ಆ ಬಗೆಯ ಸಂಶಯದ ನಿರಸನವಾಗತಕ್ಕದ್ದು. ಇದು ಹಿಂದೀ ಸಂಸ್ಕೃತಿಯೋ? ನಾನು ಮೊದಲು ಕೇಳುತ್ತೇನೆ; ಅದು ಹಾಗಿರಲಾರದೆಂದು ತಿಳಿದುಕೊಂಡೇ ಇದು ಬಂಗಾಲಿ ಸಂಸ್ಕೃತಿಯೋ ಎಂದು ಮುಂದೆ ಕೇಳಿರುತ್ತೇನೆ- ಬಂಗಾಲಿ ಸಂಸ್ಕೃತಿಯೂ ಅದು ಆಗಲಾರದೆಂದು ನನಗೆ ಗೊತ್ತಿದ್ದರಿಂದಲೆ ನಾನು ಇಟಲಿ ಜರ್ಮನಿ ರಶಿಯಾ ಮೊದಲಾದ ದೇಶಗಳ ಉಲ್ಲೇಖಮಾಡುತ್ತೇನೆ. ಆದರೆ ಯಾವದೇ ಜನರನ್ನು ಸಂಪೂರ್ಣವಾಗಿ ನಿಷೇಧಿಸಲು ನಾನು ಬಯಸುವದಿಲ್ಲಾದ್ದರಿಂದ ಇದೇನು ಪ್ರಾಚೀನ ಸಂಸ್ಕೃತಿಯೇ ಅರ್ವಾಚೀನ ಸಂಸ್ಕೃತಿಯು ಎಂದು ಕೇಳುತ್ತೇನೆ. ಸ್ಪಷ್ಟವಾಗಿ ಯಾರನ್ನೂ ಆರೋಪಿಸಲು ನಾನು ಬಯಸದ್ದರಿಂದ ನಾನು "ಏನೇ ಇದ್ದರೂ ಈ ಸಂಸ್ಕೃತಿಯು ಅನೈತಿಕ ಮತ್ತು ವೀರರಿಗೆ ಅನುಚಿತವಾದದ್ದಾಗಿರುವದಿಲ್ಲವೇ" ಎಂಬ ಪ್ರಶ್ನೆಯಿಂದ ಮುಂದೆ ಸಾಗುತ್ತೇನೆ. "ಇದರಿಂದ ಸುರಾಜ್ಯವು ಪ್ರಸ್ಥಾಪಿತವಾಗಿ ಜನತೆಗೆ ಸುಖಸಂಪತ್ತು ದೊರೆಯಬಲ್ಲುದೇ?" ಇವೆರಡೂ ಸಾಭಿಪ್ರಾಯ ಪ್ರಶ್ನೆಗಳಾಗಿದ್ದು ಅವುಗಳಿಗೆ ಯಾವ ಉತ್ತರಗಳನ್ನು ಅಪೇಕ್ಷಿಸಬೇಕೆಂಬುದೂ ನನಗೆ ಗೊತ್ತುಂಟು; ಅಂತೆಯೇ ಮುಂದೆ ಸಾಗಿ ಈ ಘಟನೆಗೆ ಹೊಣೆಗಾರರಾದವರನ್ನು ನಿಷೇಧಿಸಿದ್ದೇನೆ.

ರಾಜಕೀಯ ಪ್ರವೃತ್ತಿಯುಳ್ಳ ಯಾವದೊಂದು ದೇಶದಲ್ಲಿಯು ಪ್ರತಿಯೊಂದು ಪಕ್ಷದವರಿಗೆ ಒಬ್ಬ ಮಿತ್ರನ ಎಚ್ಚರಿಕೆಯ ಮಾತುಗಳಿವು ಎಂದು ಚಾಣಾಕ್ಷ ವಾಚಕರು ಭಾವಿಸದಿರಲಾರರು.

ವರ್ಧಾ ಕಿ. ಘ. ಮಶ್ರೂವಾಲಾ
೩೦-೭-೪೯

ಶ್ರೀ ಬೆನಗಲ್ ರಾಮರಾಯರು ಮಂಗಳೂರಿಗೆ ಬಂದಿದ್ದಾಗ ದಿನಾಂಕ ೧೫ ರಂದು ಸಂಜೆ ಶ್ರೀ ವಿ. ಎಸ್. ಕುಡ್ವರು ಉಪಾಹಾರವಿತ್ತು ಸತ್ಕರಿಸಿದರು. ಈ ಸತ್ಕಾರಕೂಟದ ವೇಳೆಯಲ್ಲಿ ಅತಿಥಿಗಳೊಂದಿಗೆ ಜಿಲ್ಲೆಯ ಅಭಿವೃದ್ಧಿಯ ಕುರಿತಾಗಿ ಮಾತುಕತೆಗಳು ನಡೆದುವು.

ವ್ಯಾಪಾರಲೋಕ

ಮುಂಬಯಿ ಶೇರಪೇಟೆ

	ತಾ. ೨೮
ಮುಂಬಯಿ ಡಾಯಿಂಗ್	೧೦೪೬-೪-
ಕೊಹಿನೂರು	೨೪೬-೦-
ಸ್ವದೇಶಿ	೨೮೦-೦-
ಗೋಕಾಕ	೨೩೬-೦-
ಸೆಂಚುರಿ	೧೮೮-೦-
ಸಿಂಪ್ಲೆಕ್ಸ	೧೫೦-೦-
ಟಾಟಾ ಸ್ಟೀಲ ಡೆಫರ್ಡ	೧೨೨೬-೪-
ಇಂಡಿಯನ್ ಅಯರ್ನ	೨೦-೯-
ಅಸೋ. ಸಿಮೆಂಟ್ಸ	೧೯೩-೮-
ಸೆಂಟ್ರಲ ಬ್ಯಾಂಕ	೬೬-೪-
ಇಂಪೀರಿಯಲ್ (ಪೂರ್ಣ)	೧೬೮೫-೦-

ಚಿನ್ನ ಬೆಳ್ಳಿ

ತಯಾರಿ ಬೆಳ್ಳಿ	೧೬೨ ೮-
ತಯಾರಿ ಚಿನ್ನ	೧೦೩-೦-
ಸಾವರಿನ	೬೩-೮-

ಅರಳೆ

ಸಪ್ಟೆಂಬರ	೬೨೧-೦-

ಎಣ್ಣೆಕಾಳು

ಶೇಂಗಾ	೨೬೭-೧೪-
ಅಗಸೆ (ತಯಾರಿ)	೩೦-೫-೦
ಅಗಸೆ ಎಣ್ಣೆ	೧೪-೦-೦
ಔಡಲ	೨೭-೬-೦

ಸಾಂಗಲಿ ಪೇಟೆ

	ತಾ. ೨೬
ಅರಿಸಿಣ (ಹೇರು)	೫೨೦-೧೦-
ಮೆಣಸಿನಕಾಯಿ (ಹೇರು)	೫೩೫-೧೦-
ಶೇಂಗಾ (ಖಂಡಿ)	೧೫೩
ಬೆಲ್ಲ (ಹೇರು)	೬೫-೬೩

ಶಿವಮೊಗ್ಗೆ ಅಡಿಕೆ ಪೇಟೆ

	ತಾ. ೨೬
ದೇಶಾವರ ನಂ. ೧ (ಮಣಕ್ಕೆ)	೩೦-೩೨
,, ೨	೨೮-೩೦
,, ೩	೨೬-೨೮
ರಾಜಾ ಅಲವು	೨೬-೨೯
ಕೊರಸಾಲು	೨೪-೨೬
ಬೆಟ್ಟವಂತಿ	೧೬-೧೮
ಬೆಟ್ಟೆ	೧೫-೧೬

ಹುಬ್ಬಳ್ಳಿ

(ಅ. ಪ್ರೊ. ಮಾರ್ಕೆಟ ಕಮೀಟಿ ಹುಬ್ಬಳ್ಳಿ)

ತಾ. ೨೮

ರಮಜಾನ ಈದ ಹಬ್ಬದ ಮೂಲಕ ಇಂದು ಹತ್ತಿ ಅರಳೆ ಪೇಟೆಯು ಮುಚ್ಚಿದೆ

ಕುಸುಬಿ (ಬ. ಮಣಕ್ಕೆ)	೧೫-೦ ೦	೧೫-೩-೦
ಅಗಸಿ (ಚೀಲಕ್ಕೆ)	೪೩-೦-೦	೪೪-೦-೦
ಔಡಲ ,,	೩೪-೦-೦	೩೫-೦-೦
ಜ. ಹೆಸರು ,,	೪೪-೦-೦	೪೬-೮-೦
ಕರಿ ಎಳ್ಳು ,,		೬೪-೦-೦
ಬಿಳಿ ಎಳ್ಳು ,,	--	೯೩-೦-೦
ಕಡಲೆ ,,	೫೭-೦-೦	೫೩-೦-೦
ಉದ್ದು ,,	೪೦-೦-೦	೪೨-೧೦-೮
ಜ. ತೊಗರಿ ,,	೨೮-೦-೦	೩೦-೦-೦
ಹುರಳಿ ,,	೩೩-೦-೦	೩೫-೦-೦
ಕೆಂ. ಅಲಸಂದಿ ,,	೫೭-೦-೦	೫೪-೦-೦
ಬಿ. ಅಲಸಂದಿ ,,	--	೫೬-೧೪-೨
ಬೆಲ್ಲ (ಹೇರಿಗೆ ೮ ಮಣ)	೬೦-೦-೦	೬೪-೦-೦
ಶೇಂಗಾ (ಹೇರು)	೫೦-೦-೦	೫೨-೦-೦
ಶೇಂಗಾ ಕಾಳು	೮೦-೦-೦	೮೪-೦-೦

❋ ಬಿಹಾರ ಜಮೀನದಾರಿ ನಿರ್ಮೂಲನ ಕಾಯದೆಗೆ ಗವರ್ನರ ಜನರಲ್‌ರು ಸಮ್ಮತಿ ಕೊಟ್ಟಿದ್ದಾರೆ. ಪ್ರಾಂತೀಯ ಸರಕಾರವು ಪ್ರಸಿದ್ಧಿಸಿ ತಿಳಿಸಿದ ಅನಂತರ ಈ ಕಾಯದೆಯು ಜಾರಿಯಲ್ಲಿ ಬರುವದೆಂದು ಪ್ರಕಟಿಸಲಾಗಿದೆ. ಜಮೀನು ಮತ್ತು ಅದರಲ್ಲಿಯ ಗಿಡಗಳು ಖನಿಜ ದ್ರವ್ಯಗಳು ಮುಂತಾದವುಗಳಿಗೆ ಸಂಬಂಧಿಸಿದ ಎಲ್ಲ ಹಕ್ಕು ಬಾಧ್ಯತೆಗಳು ಈ ಕಾಯದೆಯಿಂದ ಸರಕಾರದ ವಶಕ್ಕೆ ಬರುವವು.

❋ ರೇಲ್ವೆ ಮತ್ತು ಅಂಚೆ ಕೆಲಸಗಾರರು ತಮ್ಮ ಸಂಪುಗಳನ್ನು ಮುಂಬರಿಸಿದ್ದರೂ ಅವರ ಬೇಡಿಕೆಗಳು ಇನ್ನೂ ಪೂರೈಸಲಾಗಿಲ್ಲ. ಅವುಗಳನ್ನು ಇನ್ನು ಮುಂದೆಯಾದರೂ ಪೂರೈಸಲಾಗುವದೇ ಎಂಬುದನ್ನು ನಾವು ಅರಿಯೆವು ಎಂದು ಸಾಮ್ಯವಾದೀ ಧುರೀಣರಾದ ಶ್ರೀ ಜಯಪ್ರಕಾಶ ನಾರಾಯಣರು ಪಾಟ್ನಾದಲ್ಲಿ ಬಿಹಾರದ ಅಂಚೆ ಮತ್ತು ತಂತಿ ಕೆಲಸಗಾರರ ಪರಿಷತ್ತನ್ನು ಪ್ರಾರಂಭಿಸುತ್ತ ಹೇಳಿದರು. ಸರಕಾರವು ಉದ್ದಿಮೆದಾರರ ಜಾಲದಲ್ಲಿ ಬೀಳಬಾರದೆಂದೂ ಅವರು ಅಭಿಪ್ರಾಯಪಟ್ಟರು.

Reg. No. B. 3148

LICENCE No 3
Licensed to Post without Prepayment

KARMAVEER 1-8-49

ಸಮಾಜದ ಪ್ರತೀಕಾರ

ಪ್ರೇಮಯಾತನೆ!

ಬಿಹಾರದ ಮೋಂಘೀರ ಜಿಲ್ಲೆಯಿಂದ ಬಂಗಾಲಿ ಪುಸ್ತಕದ ಭಯಾನಕ ಕಾದಂಬರಿಗಳಲ್ಲಿ ಕಾಣಬರುವಂಥ ಒಂದು ಘಟನೆಯ ಸುದ್ದಿ ಬಂದಿದೆ. ಪರಭಾರಾ ಎಂಬ ಹಳ್ಳಿಯಲ್ಲಿ ಇಬ್ಬರು ಪ್ರೇಮಿಗಳನ್ನು ಹಳ್ಳಿಯ ಪಂಚರು ಪೈಶಾಚಿಕ ರೀತಿಯಲ್ಲಿ ಕೊಲ್ಲಿಸಿದ ಈ ಪ್ರಕರಣದಲ್ಲಿ ಐದು ಜನರು ಪೋಲೀಸ್ ವಿಚಾರಣೆಗೆ ಗುರಿಯಾಗಿದ್ದಾರೆ.

ಹವಾದೇವಿ ದೇವಿಝಾನ ಹೆಂಡತಿ. ಧ್ಯಾಗೆ ವಯಸ್ಸು ಮೀರಿತ್ತು, ಹವಾ ಇನ್ನೂ ಯುವತಿ. ಈ ವರ್ಷದ ಆರಂಭದಲ್ಲಿ ಅವಳು ಒಮ್ಮಿಂದೊಮ್ಮೆ ಕಾಣೆಯಾದಳು. ನೆರೆಮನೆಯ ಎಳೆ ನೆಕ್ತಾರ ಭೂಮಿ ಚೌಧರಿಯೂ ಅದೇ ಸಮಯದಲ್ಲಿ ಕಣ್ಮರೆಯಾಗಿದ್ದುದರಿಂದ ಸಮಾಜಕ್ಕೆ ಅವರಿಬ್ಬರ "ಪ್ರೇಮ ಪಲಾಯನ"ನ ಸಂದೇಹ ಬಂದಿತ್ತು. ಆದರೆ ಮೂರು ವಾರಗಳಲ್ಲಿ ಅವಳು ಗಂಡನ ಮನೆಗೆ ಮರುಳಿದಳು. ಚಿಕ್ಕಪ್ಪನ ಮನೆಗೆ ಹೋಗಿದ್ದುದಾಗಿ ಅವಳು ಹೇಳಿದರೂ ಸಮಾಜದ ಪಂಚರಿಗೆ ಸಂತೃಪ್ತಿಯಾಗಲಿಲ್ಲ. ಅವಳೂ ಅವಳ ಮುದುಕ ಗಂಡನೂ ಅವನ ಮಗುವೂ ಗಂಗೆಯಲ್ಲಿ ಮುಳುಗಿ ಪ್ರಾಯಶ್ಚಿತ್ತ ಮಾಡಿಕೊಂಡ ಹೊರತು ಅದೇ ಜರಗಲಿದ್ದ ಸುಧೀಂದ್ರ ಝಾನ ಮಗನ ಉಪನಯನದಿಂದ ಅವರನ್ನು ಬಹಿಷ್ಕರಿಸುವ ಬೆದರಿಕೆ ಹಾಕಲಾಯಿತು.

ಬಡ ಮುದುಕ ದೇವಿಝಾನೂ ಅವನ ಹೆಂಡತಿ ಮಕ್ಕಳೂ ಪಾಪಪ್ರಕ್ಷಾಲನೆಗಾಗಿ ಸುಲ್ತಾನಗಂಜದ ಬಳಿಯ ಬಾಬಾ ಗೈಬೀನಾಥ ತೀರ್ಥ ಕ್ಷೇತ್ರದಲ್ಲಿ ಗಂಗಾಸ್ನಾನಕ್ಕಾಗಿ ಹೋದರು. ಆದರೆ ಹೋದ ಮೂವರಲ್ಲಿ ಮರಳಿದವರು ಇಬ್ಬರೇ. ಹವಾದೇವಿ ತೀರ್ಥಕ್ಷೇತ್ರದ ಜನಸಮ್ಮರ್ದದಲ್ಲಿ 'ತಪ್ಪಿ' ಹೋಗಿದ್ದಳು. ಹಳ್ಳಿಯ ಹೆಗ್ಗಡೆಗಳಿಗೆ ಮತ್ತೆ ಸಂಶಯ ಬಂತು. ನೆರೆಯ ಅಮಾಯಿಯಾ ಗ್ರಾಮದಲ್ಲಿ ಒಬ್ಬ ಅಪರಿಚಿತ ಯುವಕ ಬ್ರಾಹ್ಮಣನೂ ಒಬ್ಬ ಯುವತಿಯೂ ಇರುವರೆಂದು ಕೇಳಿದ ಮೇಲಂತೂ ಹೆಗ್ಗಡೆಯರ ಕ್ರೋಧಕ್ಕೆ ಪಾರವೇ ಇಲ್ಲದಾಯಿತು. ಸಮಾಜವು ಅವರನ್ನು ಹುಡುಕಿ ತರಲು ದೂತರನ್ನೂ ಕಳಿಸಿತು.

ಭೂಮಿಯನ್ನೂ ಹವಾಳನ್ನೂ ಹೆಡಮುರಿಗೆ ಬಿಗಿದು ತಂದು ಪಂಚರ ಮುಂದೆ ಕೆಡಹಲಾಯಿತು. ಹಳ್ಳಿಯ ಆಲದ ಮರದ ಬುಡದಲ್ಲಿ ಪಂಚರ ನ್ಯಾಯಸ್ಥಾನ ನೆರೆಯಿತು. ಐವರ ಬದಲು ಐವತ್ತು ಜನ ಪಂಚರು ಬಡ ಆರೋಪಿಗಳ ಮೇಲಿನ ಆರೋಪಗಳನ್ನು ಉಗ್ರ ಗಂಭೀರ ಮುದ್ರೆಯಿಂದ ಕೇಳಿದರು. ಪಂಚರ ಹೆಗ್ಗಡೆಗಳಾದ ಜನಾರ್ದನ್ಯ ಮತ್ತು ಮಹೇಲಾಲ ಚೌಧರಿಗಳು ತೀರ್ಪು ಕೊಟ್ಟರು. ಹಳ್ಳಿಯ ದೇವೀ ಗುಡಿಯ ಮುಂದೆ ಭೂಮಿ ಚೌಧುರಿ ಮತ್ತು ಹವಾದೇವಿಗೆ ಮರಣದಂಡನೆಯಾಗಬೇಕು!

ಪಂಚರ ಕೈಯಲ್ಲಿ ಅಜ್ಞಾಧಾರಕರಾದ "ಚಂಡಾಲ"ರೂ ಇದ್ದರು. ಅವರು ತಮ್ಮ ಕೆಲಸವನ್ನು ಒರಟಾದರೂ ಕೌಶಲದಿಂದಲೇ ನೆರವೇರಿಸಿದರು. ಕಾಳೀ ಗುಡಿಗೆ ಅಪರಾಧಿಗಳನ್ನು ಎಳೆದೊಯ್ಯಲಾಯಿತು. ವಧ್ಯಶಿಲೆಯ ಮೇಲೆ ಅವರನ್ನು ನಿಲ್ಲಿಸಲಾಯಿತು. ಭೂಮಿಯ ಸರತಿ ಮೊದಲು ಬಂತು. ಅವನ ಕಾಲ ಮಣಿಗಂಟಿಗೆ ಪೊಚ್ಚೆಯಿಂದ ಒಂದೇಟು ಬಿಗಿಯಲಾಯಿತು. ಅವನು ತತ್‌ಕ್ಷಣ ಉರುಳಿದನು. ಆ ಮೇಲೆ ಅವನ ಪ್ರೇಯಸಿಯ ಮುಂದೆಯೆ ಅವನ ಮೇಲೆ ಪೊಚ್ಚೆಯೇಟುಗಳ ಮಳೆಗರೆಯಿತು. ತನೆಯುಬಂದ ಅವನ ತಾಯಿಯನ್ನೂ ಬಂಧುಗಳನ್ನೂ ಬೆದರಿಸಿ ದೂರ ಓಡಿಸಿದರು. ಅವನ ಹೃದಯವಿದ್ರಾವಕ ಆರ್ತನಾದ ಉಡುಗುವ ವರೆಗೂ ಹವಾದೇವಿ ಕಣ್ಣು ಕಿವಿಗಳನ್ನು ಮುಚ್ಚಿಕೊಂಡು ಗಡಗಡನೆ ನಡಗುತ್ತ ನಿಂತಿದ್ದಳು. ಒಮ್ಮಿಂದೊಮ್ಮೆ ಐವರು ಚಾಂಡಿಗರು ಅವಳ ಮೇಲೆ ಬಿದ್ದರು. ಮುಹಾವೀರಝಾ ಎಂಬವನು ತನ್ನ "ಭಜಲಿ"ಯಿಂದ ತಿವಿದು ಅವಳ ಜೀವಾಟವನ್ನು ಕೊನೆಗಾಣಿಸಿದನು.

ಇದು ಪೋಲೀಸರು ಹೇಳಿದ ಕತೆ. ಶವಪರೀಕ್ಷೆ ಮಾಡಿದ ಡಾಕ್ಟರರು "ಮ್ಯಕರ ಮೇಲೆ ಆಸಂಖ್ಯ ಹೊಡೆತಗಳು ಬಿದ್ದಿವೆ"ಯೆಂದು ವರದಿ ಮಾಡಿದ್ದಾರೆ.

ಬಾಳ ಸಾರ

ಅತ (ಅಳಿ) ಸತ್ಯವೆಂತು?
ಬಾಳ್ವೆಂತುಭರಿಯಲಿ?
ಕೊಂಡುದೇನು, ಕೊಟ್ಟುದೇನು?
ಸ್ಥಾನಮಾನವೆಂಥದು?

ಹೃದಯವೆಂಬುದಿದ್ದಿತೇನು?
ದೇವನಿತ್ತ ಪಾತ್ರವ
ಎಂತು ವಹಿಸಿ ನವೆಯಿಸಿದನು
ತನ್ನ ಗಣ್ಯಗಾತ್ರವ?—

ವ್ಯಕ್ತಿ ಮೂಲ್ಯ ನಿರ್ಣಯಕ್ಕೆ
ಉತ್ತರಿಸಿರಿ ಮೇಲಿನ
ಪ್ರಶ್ನೆಗಳನು; ಲಬ್ಧದಲ್ಲಿ
ಸಾರವುಂಟು ಬಾಳಿನ!

("ಕೂಲಿಕಾರ"ರ ಕವನದ ಭಾವ)

—ಬಿ. ಎಚ್. ಶ್ರೀ.

ಕನ್ನಡಿಗರ ಅಭಿನಂದನೆ

ಜೀವನದಲ್ಲಿಯ ಅಪೂರ್ವ ಯಶಸ್ಸಿಗಾಗಿ


ಹೊರನಾಡಿನ ಕನ್ನಡಿಗರು ತಮ್ಮ ಬುದ್ಧಿ, ನೈಪುಣ್ಯಗಳಿಂದ ಉಚ್ಚಸ್ಥಾನವನ್ನು ಮತ್ತು ವಿಶ್ವವಿದ್ಯಾಲಯದ ಪರೀಕ್ಷೆಗಳಲ್ಲಿ ಮೇಲ್‌ತರಗತಿಯನ್ನು ಪಡೆದಿರುವರಷ್ಟೆ. ಅವರಲ್ಲಿ ಹಲವರ ಅಭಿನಂದನಪರ ಸಭೆಯು ಪುಣೆಯ ಕರ್ನಾಟಕ ಸಂಘದಲ್ಲಿ ರವಿವಾರ ದಿನಾಂಕ ೧೭ ಜುಲೈ ದಿನ ಶ್ರೀಯುತ ವಾ. ಅ. ಅಥಣಿ ಅವರ ಅಧ್ಯಕ್ಷತೆಯಲ್ಲಿ ಕೂಡಿತ್ತು. ಸಂಘದ ಕಾರ್ಯದರ್ಶಿಗಳಾದ ಶ್ರೀ. ಜಿ. ಎಸ್. ಮುತಕರ ಅವರು ಇಂಥ ಹಲವರ ಪರಿಚಯಾತ್ಮಕ ಭಾಷಣವನ್ನು ಮಾಡಿದರು. ಶ್ರೀಯುತ ದಿಂ. ಪ. ಉಮರ್ಜಿಯವರು ವಿಜಾಪೂರ ಜಿಲ್ಲೆಯ ಕೊಲ್ಹಾರದವರು. ಅವರು ಮ್ಯಾಟ್ರಿಕುಲೇಶನ ಪರೀಕ್ಷೆಯಲ್ಲಿ ಪಾಸಾಗಿ ಸೆಕ್ರೆಟರಿಯೆಟನಲ್ಲಿ ೧೯೨೭ ರಲ್ಲಿ ಸೇರಿದರು. ತಮ್ಮ ಕಾರ್ಯನೈಪುಣ್ಯದಿಂದ ಅವರು ಕಂದಾಯಖಾತೆಯ ಅಸಿಸ್ಟಂಟ ಸೆಕ್ರೆಟರಿಯ ಸ್ಥಾನದ ವರೆಗೆ ಏರಿ ಆ ಸ್ಥಳದಲ್ಲಿ ಈಗ ಕಾಯಮ ಆಗಿರುವರು. ಅವರನ್ನು ಈಗ ಅ ಖಾತೆಯ "ಅಂಡರ ಸೆಕ್ರೆಟರಿ" ಎಂದು ನಿಯಮಿಸಲಾಗಿದೆ. ಅವರಿಗೆ ಈ ಉಚ್ಚಸ್ಥಾನವು ಸಿಕ್ಕಿದ್ದಕ್ಕಾಗಿ ಅವರನ್ನು ಅಭಿನಂದಿಸಲಾಯಿತು.

ಶ್ರೀಯುತ ಶಾಮಸುಂದರ. ಜಿ. ಮುದ್ಗಲ ಇವರು ಬಾಗಲಕೋಟೆಯವರು. ಅವರು ಪ್ರಸಿದ್ಧ ಕಾಂಗ್ರೆಸ ಮುಖಂಡರಾಗಿದ್ದ ವೈ. ಯಂ. ಆ ನರಗುಂದ ಇವರ ಮೊಮ್ಮಕ್ಕಳು. ಅವರು ನೌಕರಿಯನ್ನು ಮಾಡುತ್ತಲೇ ತಮ್ಮ ವಿದ್ಯಾಭ್ಯಾಸವನ್ನು ಚೆನ್ನಾಗಿ ಸಾಗಿಸಿಕೊಂಡು ಮುಂಬೈ ವಿಶ್ವವಿದ್ಯಾಲಯದ ಈಸಾಲ ಬಿ. ಎ. ಪರೀಕ್ಷೆಯಲ್ಲಿ ಮೊದಲನೇ ವರ್ಗದಲ್ಲಿ ಪಾಸಾಗಿರುವರು. ಅವರು ತತ್ವಜ್ಞಾನದ ವಿದ್ಯಾರ್ಥಿಗಳು. ಸರ್ ಪರಶುರಾಮಭಾವು ಕಾಲೇಜಿನಲ್ಲಿ ಈಗ ಫೆಲೊ ಆಗಿರುವರು. ಈ ಅವರ ಯಶಸ್ಸಿಗಾಗಿ ಅವರನ್ನು ಅಭಿನಂದಿಸಲಾಯಿತು.

ಶ್ರೀ ಅಥಣೀ ಅವರು ಡಾಯರೆಕ್ಟರ ಆಫ ಲ್ಯಾಂಡ ರೆಕಾರ್ಡ್ಸ ಇವರ ಪರ್ಸನಲ್ ಅಸಿಸ್ಟಂಟ ಶ್ರೀ ವಾ. ಅ. ಅಥಣೀ ಇವರ ಮಕ್ಕಳು. ಇವರು ಪುಣೆಯಲ್ಲಿಯ ಮಾಡರ್ನ ಹಾಯಸ್ಕೂಲಿನ ವಿದ್ಯಾರ್ಥಿಯು. ಇವರು ವಿಜಾಪೂರದವರು. ಈ ವರ್ಷದ ಎಸ್. ಎಸ್. ಸಿ. ಪರೀಕ್ಷೆಯಲ್ಲಿ ನಾಲ್ಕನೇ ನಂಬರು ಮತ್ತು ಪುಣೆ ಕೇಂದ್ರಕ್ಕೆ ಮೊದಲನೇ ನಂಬರು ಬಂದಿರುವರು. ಅವರ ಈ ಯಶಸ್ಸಿಗಾಗಿ ಅವರನ್ನು ಅಭಿನಂದಿಸಲಾಯಿತು.

ಅದರಂತೆಯೇ ಕು. ಇನಾಮದಾರ ಇವರು ಶ್ರೀ ರಾ. ಬ. ಇನಾಮದಾರರ ಮಗಳು ಪುಣೆ. ವಿಶ್ವವಿದ್ಯಾಲಯದ ಇಂಟರ ಪರೀಕ್ಷೆಯಲ್ಲಿ ಮೊದಲನೇ ನಂಬರು ಬಂದಿರುವಳು. ಶ್ರೀಯುತ ಇನಾಮದಾರರು ವಿಜಾಪುರ ಜಿಲ್ಲೆಯವರು. ಅವರು 'ಫಿಂಗರ ಪ್ರಿಂಟ ಅಫೀಸಿನಲ್ಲಿ ಕೆಲಸಮಾಡುತ್ತಲಿದ್ದರು. ಈಗ ಅವರು ನಿವೃತ್ತರಾಗಿರುವರು. ಕನ್ನಡತಿಯ ಈ ಯಶಸ್ಸಿಗಾಗಿ ಅಭಿನಂದನಪರ ಗೊತ್ತುವಳಿಯು ಪಾಸಾಯಿತು.

ಆ ಮೇಲೆ ಸಭೆಯಲ್ಲಿ ಹಾಜರಿದ್ದ ಶ್ರೀ ಉಮರ್ಜಿ, ಮುದ್ಗಲ ಮತ್ತು ಅಥಣೀ ಅವರಿಗೆ ಹಾರಗಳನ್ನರ್ಪಿಸಲಾಯಿತು. ಅಧ್ಯಕ್ಷರ ಸಮಾರೋಪ ಭಾಷಣವಾಗಿ ಸಭೆ ಕೊನೆಗೊಂಡಿತು.



ಲಂಡನ್ನಿನಲ್ಲಿ ಬಾಂಬು ಬಿದ್ದ ಸ್ಥಳಗಳನ್ನು ಸುಂದರವಾಗಿ ಪುನರ್ನಿರ್ಮಿಸಲಾಗುತಿದೆ. ಇಲ್ಲಿ ಸೆಂಟ ಪಾಲ ಚರ್ಚಿನ ಮುಂದೆ ಬಾಂಬಬಿದ್ದ ಸ್ಥಳದಲ್ಲಿ ಹೂದೋಟವನ್ನು ಬೆಳೆಸುತಿದ್ದಾರೆ.

ಅಫಗಾಣಿಸ್ತಾನದ ಹಿಂದೂಕರಣ!

ಪಾಕಿಸ್ತಾನ ಪತ್ರಿಕೆಗಳ ಪ್ರಚಾರ ವಿಧಾನಕ್ಕೆ ಕೆಳಗಿನದು ಒಂದು ಉದಾಹರಣೆ: "ಮಘರಬೀ ಪಾಕಿಸ್ತಾನ" (ಲಾಹೋರ)ದಲ್ಲಿ ಅಫಗಾಣಿಸ್ತಾನ ಹಿಂದೂಧರ್ಮವನ್ನು ಸ್ವೀಕರಿಸಹೊರಟಿದೆಯೆಂದು ಸುದ್ದಿ ಪ್ರಸರಿಸಲಾಗುತ್ತಿದೆ. ಅಫಗಾಣ ರಾಷ್ಟ್ರವನ್ನು ಭಾರತದ ಆರ್ಯರೊಡನೆ ಒಂದುಗೂಡಿಸಲು ಪ್ರಯತ್ನಗಳಾಗುತಿವೆಯಂತೆ! ಕಾಬೂಲ ವಿಶ್ವವಿದ್ಯಾಲಯದಲ್ಲಿ ಸಂಸ್ಕೃತವೀಗ ಒತ್ತಾಯದಿಂದ ಕಲಿಸಲ್ಪಡುತ್ತಿದೆ. ವಿದ್ಯಾರ್ಥಿಗಳಿಗೆ ದಿನಾಲೂ "ಗೀತೆ"ಯನ್ನು ಪಠಿಸಲು ಒತ್ತಾಯ ಪಡಿಸಲಾಗುತ್ತಿದೆ. ಅದಕ್ಕಾಗಿ ಒಬ್ಬ ಪ್ರಸಿದ್ಧ ಪಂಡಿತರನ್ನು ಕರೆಸಿಕೊಂಡಿರುವದಲ್ಲದೆ ಹತ್ತು ಮಣ ಜನಿವಾರವನ್ನೂ ಭಾರತದಿಂದ ತರಿಸಲಾಗಿದೆ. ಅಫಗಾಣಿ ಹುಡುಗರಿಗೆ ಅದನ್ನು ಒತ್ತಾಯದಿಂದ ತೊಡಿಸಲಾಗುವದಂತೆ.

ಅಫಗಾಣಿಸ್ತಾನದೊಡನೆ ಗಡಿವಿವಾದಗಳಿರುವ ಪಾಕಿಸ್ತಾನಕ್ಕೆ ತನ್ನ ಎದುರಾಳಿಯ ವಿರುದ್ಧ ಎಂಥ ಸುಳ್ಳು ಪ್ರಚಾರವೂ ಕೀಳೆನಿಸುವದಿಲ್ಲ!

ಇರಾಣದ ಪಾರ್ಲಿಮೆಂಟನಲ್ಲಿ ಮತಾಧಿಕಾರದ ಕಾಯದೆ ಚರ್ಚೆಗೆ ಬಂದಾಗ ಯಮೀನ ಎಸಫಂಡಿಯರಿ ಎಂಬ ಸದಸ್ಯರು ಸ್ತ್ರೀಯರಿಗೂ ಮತಾಧಿಕಾರ ಕೊಡಬೇಕೆಂಬ ತಿದ್ದುಪಡಿ ತಂದರು. ಒಡನೆ "ಕಾಫರ", "ನಾಸ್ತಿಕ" ಎಂಬ ಬೈಗಳು ಸಭೆಯಲ್ಲೆಲ್ಲ ಪ್ರತಿಧ್ವನಿಸಿದವು. ಸದಸ್ಯ ಮಹಾಶಯರನ್ನು ವಿರೋಧಿಗಳು ವ್ಯಾಸಪೀಠದಿಂದ ದರದರನೆ ಕೆಳಗೆಳೆದರು. ಬಡಪಾಯಿ ತನ್ನ ತಿದ್ದುಪಡಿಯನ್ನು ಹಿಂತೆಗೆದುಕೊಂಡನು.

ಪಾಕಿಸ್ತಾನದಲ್ಲಿ ಈಚೆಗೆ ತುಂಬ ವಿಚಿತ್ರ ಸಂಘವೊಂದು ನಿರ್ಮಾಣವಾಗುವಂತೆ ಕಂಡಿತು: ಲಾಹೋರ ನಗರದ ಭವಿಷ್ಯವಾದಿಗಳೆಲ್ಲ (ಅವರ ಸಂಖ್ಯೆ ೨೦೦೦ ಇದೆ) ಸೇರಿ ಒಂದು ಸಂಘ ಮಾಡಿಕೊಳ್ಳುವ ಪ್ರಯತ್ನ ಮಾಡುತಿದ್ದಾರೆ. ಉಲೇಮಾಗಳ ಬೋಧನೆಯ ಮೇರೆಗೆ ಸರಕಾರದವರು ಭವಿಷ್ಯ ಹೇಳುವದನ್ನು ಪ್ರತಿಬಂಧಿಸುವರೆಂಬ ಸುದ್ದಿಯೇ ಈ ಪ್ರಯತ್ನಕ್ಕೆ ಕಾರಣವಾಯಿತು. ನಗರದ ಭವಿಷ್ಯವಾದಿಗಳಿಗೆ ತಲಾ ದಿನಕ್ಕೆ ಸರಾಸರಿ ೫ ರೂ. ಉತ್ಪನ್ನವಿದೆಯಂತೆ. ಅರ್ಥಾತ್ ನಗರದ ಜನರು ವರ್ಷಕ್ಕೆ ೩೬ ಲಕ್ಷ ರೂಪಾಯಿಯನ್ನು ಭವಿಷ್ಯ ತಿಳಿದುಕೊಳ್ಳಲು ವೆಚ್ಚ ಮಾಡುವರೆಂದಾಯಿತು!

ಈಚೆಗೆ ಪೂರ್ವ-ಪಶ್ಚಿಮ ಬಂಗಾಲಗಳ ನಡುವೆ ಒಂದು ಆನೆಯ ಪಾಲನ ಪೋಷಣದ ವೆಚ್ಚವನ್ನು ಕುರಿತು ಬಿಕ್ಕಟ್ಟುಂಟಾಯಿತಂತೆ. ಅಖಂಡ ಬಂಗಾಲದಲ್ಲಿ ಸರಕಾರದ ಸೊತ್ತಾಗಿದ್ದ ಆ ಪ್ರಾಣಿ ವಿಭಜನೆಯಾದ ನಂತರ ಪೂರ್ವ ಬಂಗಾಲದ ಪಾಲಿಗೆ ಬಂತು. ಆದರೆ ಅದರ ಮಾವುತನು ಪಶ್ಚಿಮ ಬಂಗಾಲದ ಸೇವೆಯನ್ನೆ ಒಪ್ಪಿಕೊಂಡನು. ಹೀಗಾಗಿ ಪೂರ್ವ ಬಂಗಾಲ ಸರಕಾರ ಅದನ್ನು ಒಯ್ಯಲು ತಡವಾಯಿತು. ಈ ನಡುವಣ ಅವಧಿಯಲ್ಲಿ ಅದರ ವೆಚ್ಚವನ್ನು ಯಾರು ಕೊಡಬೇಕೆಂಬುದೇ ವಿವಾದದ ಪ್ರಶ್ನೆಯಾಯಿತು.

—ಕಲಕತ್ತಾ "ಅಮೃತಬಝಾರ ಪತ್ರಿಕೆ"

ಮಲಯದ ಮಹಾಮಂಡಲೀಯ ಶಾಸನ ಸಭೆಯಲ್ಲಿ ಅಲ್ಲಿಯ ಸಂಘ ಸಂಸ್ಥೆಗಳೂ ರಜಿಸ್ಟರ್ ಮಾಡಿಸಿಕೊಳ್ಳಬೇಕೆಂದು ಒತ್ತಾಯಿಸುವ ಸರಕಾರೀ ಮಸೂದೆ ಬರಲಿದೆಯೆಂದು ಸುದ್ದಿ.

... ಕರ್ಮವೀರ ಪ್ರಿಂಟಿಂಗ ಪ್ರೆಸ್ಸಿನಲ್ಲಿ ... ಲೋಕಶಿಕ್ಷಣ ಟ್ರಸ್ಟ್ ಪರವಾಗಿ ಹ. ರಾ. ಪುರೋಹಿತರು ... ಪ್ರಕಟಿಸಿದರು.